# ಮಹಾಪುರುಷರು

ಕೆ. ಅಬ್ದುಲ್ ಜಬ್ಬಾರ್

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

# ಪ್ರಕಾಶಕರ ಮಾತು

ಪ್ರವಾದಿ ಮುಹಮ್ಮದ್‌ರ(ಸ) ಎಂಟು ಮಂದಿ ಖ್ಯಾತ ಸಂಗಾತಿಗಳ ಸಂಕ್ಷಿಪ್ತ ಜೀವನ ಚರಿತ್ರೆಯನ್ನು 'ಮಹಾಪುರುಷರು' ಎಂಬ ಈ ಕೃತಿಯಲ್ಲಿ ವಿವರಿಸಲಾಗಿದೆ. ತಾವು ಪರಮ ಸತ್ಯವೆಂದು ನಂಬಿದ ಧರ್ಮ ಸಿದ್ಧಾಂತದ ಸಂಸ್ಥಾಪನೆಗಾಗಿ ಅವರು ಬಾಳಿದ ತ್ಯಾಗೋಜ್ವಲ ಬದುಕು ಸರ್ವ ಕಾಲಗಳಿಗೂ ಮಾದರೀ ಯೋಗ್ಯವಾಗಿದೆ. ಆ ಮಹಾಪುರುಷರ ಸರಳ ಹಾಗೂ ಸಾತ್ವಿಕ ಜೀವನವನ್ನು ವಿವರಿಸುವುದರೊಂದಿಗೆ ಅವರ ಗುಣ ವೈಶಿಷ್ಟ್ಯಗಳನ್ನೂ ಈ ಕೃತಿಯಲ್ಲಿ ಎತ್ತಿ ತೋರಿಸಲಾಗಿದೆ.

ಇಸ್ಲಾಮೀ ಇತಿಹಾಸದಲ್ಲಿ ಅಚ್ಚಳಿಯದ ಪ್ರಭಾವ ಬೀರಿರುವ ಆ 'ಮಹಾ ಪುರುಷರ' ಜೀವನದಲ್ಲಿ, ಇಸ್ಲಾಮೀ ಆಂದೋಲನವು ಆರಂಭ ದಿಸೆಯಲ್ಲಿ ಎದುರಿಸಿದ ರೋಮಾಂಚಕ ಘಟನೆಗಳು ಸಹಜವಾಗಿ ಸೇರಿಕೊಂಡಿವೆ.

ಈ ಕೃತಿಯು ಎಲ್ಲ ಸತ್ಯಾನ್ವೇಷಿಗಳಿಗೆ ಸ್ಫೂರ್ತಿದಾಯಕವಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

# ಅನುಕ್ರಮಣಿಕೆ

# ಅಬ್ದುಲ್ಲಾ ಬಿನ್ ಝುಬೈರ್(ರ)

ಘಟನಾವಳಿಗಳಿಂದ ತುಂಬಿದ ಅಬ್ದುಲ್ಲಾ ಬಿನ್ ಝುಬೈರ್‌ರ(ರ) ಚರಿತ್ರೆಯನ್ನು ವಿವರಿಸುವುದಕ್ಕಿಂತ ಮುಂಚೆ ಅವರ ಕುಟುಂಬದ ಕೆಲವು ಶ್ರೇಷ್ಠ ವ್ಯಕ್ತಿಗಳ ಸಂಕ್ಷಿಪ್ತ ಇತಿಹಾಸವನ್ನು ಅಗತ್ಯವಾಗಿ ತಿಳಿಯಬೇಕಾಗಿದೆ. ಅದರಿಂದ ಆ ಇತಿಹಾಸ ಪುರುಷರು ಬೆಳೆದ ವಿಶಿಷ್ಟ ಹಿನ್ನೆಲೆಯನ್ನು ಗ್ರಹಿಸಬಹುದು.

## ತಂದೆ

ಸುಪ್ರಸಿದ್ಧ ಸಹಾಬಿಯಾಗಿದ್ದ ಝುಬೈರ್‌ರು(ರ) ಹ.ಅಬ್ದುಲ್ಲಾರ(ರ) ತಂದೆ. ಪ್ರವಾದಿವರ್ಯರ(ಸ) ಸತ್ಯಸಂದೇಶವನ್ನು ಆಲಿಸಿದಾಕ್ಷಣ ಅದನ್ನು ಅಂಗೀಕರಿಸಿದ 'ಅಸ್ಸಾಬಿಕೂನಲ್ ಅವ್ವಲೂನ್' ಪ್ರಥಮ ಅನುಯಾಯಿಗಳಲ್ಲಿ ಇವರೂ ಒಬ್ಬರು. ಅಂದು ಝುಬೈರ್‌ರಿಗೆ(ರ) ಕೇವಲ 16 ವರ್ಷ ಪ್ರಾಯವಾಗಿತ್ತು. ಪ್ರವಾದಿಯವರು(ಸ) ಅವರಿಗೆ ಸ್ವರ್ಗ ಲಭ್ಯವಾಗುವುದೆಂಬ ಶುಭವಾರ್ತೆ ನೀಡಿರುವುದು ಅವರ ಇನ್ನೊಂದು ವೈಶಿಷ್ಟ್ಯವಾಗಿದೆ.

ಝುಬೈರ್‌ರು(ರ) ಇಸ್ಲಾಮಿಗಾಗಿ ಸರ್ವಸ್ವವನ್ನೂ ತ್ಯಜಿಸಲು ಸದಾ ಸನ್ನದ್ಧರಾಗಿದ್ದರು. ಇಸ್ಲಾಮನ್ನು ಅಂಗೀಕರಿಸಿದ ಕಾರಣಕ್ಕಾಗಿ ಅವರು ವೈರಿಗಳ ಭೀಕರ ಹಿಂಸೆಗಳಿಗೆ ಗುರಿಯಾಗಬೇಕಾಯಿತು. ಆದರೆ ಕಠೋರ ಯಾತನೆಯ ವೇಳೆಯಲ್ಲೂ ಅವರು ಸನ್ಮಾರ್ಗದಲ್ಲಿ ಬೆಟ್ಟದಂತೆ ಅಚಲರಾಗಿದ್ದರು. ಝುಬೈರ್‌ರು(ರ) ಪ್ರವಾದಿವರ್ಯರ(ಸ) ಹತ್ತಿರದ ಸಂಬಂಧಿ ಮತ್ತು ಮದೀನಾದ ದೊಡ್ಡ ಶ್ರೀಮಂತರಾಗಿದ್ದರು. ಅವರು ಪ್ರವಾದಿವರ್ಯರ(ಸ) ಕಾಲದಲ್ಲಿ ನಡೆದ ಬಹುತೇಕ ಯುದ್ಧಗಳಲ್ಲಿ ಭಾಗವಹಿಸಿದ್ದರು. ಯುದ್ಧದಿಂದ ಅವರ ದೇಹದಲ್ಲಿ ಗಾಯವಾಗದ ಭಾಗವೇ ಇರಲಿಲ್ಲವೆಂದು ಇತಿಹಾಸಗಾರರು ಬರೆದಿದ್ದಾರೆ.

ಝುಬೈರ್‌ರ(ರ) ಶೌರ್ಯವು ಪ್ರಶಂಸನೀಯವಾಗಿತ್ತು. ಮಾತೆ ಸಫಿಯ್ಯಾರು(ರ) ಝುಬೈರ್‌ರನ್ನು(ರ) ಚಿಕ್ಕಂದಿನಿಂದಲೇ ಮಹಾ ಪರಾಕ್ರಮಿಯಾಗಿ ಬೆಳೆಸುವತ್ತ ಗಮನ ಹರಿಸಿದ್ದರು. ತನ್ನ ಪುತ್ರನು ಮಹಾಶೂರನಾಗಬೇಕೆಂದು ಅವರು ಆಶಿಸಿದ್ದರು. ಆ ಆಶೆಯು ಭವಿಷ್ಯದಲ್ಲಿ ಸಂಪೂರ್ಣ ಫಲಿಸಿತೆಂದೇ ಹೇಳಬಹುದು.

## ತಾಯಿ

ಹ.ಅಬೂಬಕರ್‌ರ(ರ) ಹಿರಿಯ ಪುತ್ರಿ ಹ.ಅಸ್ಮಾರು(ರ) ಅಬ್ದುಲ್ಲಾ ಬಿನ್ ಝುಬೈರ್‌ರ(ರ) ತಾಯಿ. ಆ ಮಹಾ ಮಹಿಳೆಯು ಇಸ್ಲಾಮಿಗಾಗಿ ಅಪಾರ ಕಷ್ಟ-ನಷ್ಟಗಳನ್ನು ಅನುಭವಿಸಿದ್ದರು. ಆದರೂ ಆ ವೀರ ಮಹಿಳೆಯ ಅಚಲ ವಿಶ್ವಾಸವನ್ನು ಕಿಂಚಿತ್ ಕದಲಿಸಲು ವೈರಿಗಳಿಗೆ ಸಾಧ್ಯವಾಗಲಿಲ್ಲ. ಅವರು ಕ್ರೂರ ಯಾತನೆಯನ್ನು ತುಚ್ಛೀಕರಿಸಿ ಸತ್ಯದ ಹಾದಿಯಲ್ಲಿ ಕೆಚ್ಚಿನಿಂದ ಮುನ್ನಡೆದರು.

ವೈರಿಗಳ ಹಿಂಸೆ-ದೌರ್ಜನ್ಯಗಳು ಮಿತಿ ಮೀರಿದಾಗ ಪ್ರವಾದಿ(ಸ) ಮತ್ತು ಅಬೂಬಕರ್ ಸಿದ್ದೀಕ್‌ರು(ರ) ಮದೀನಾಕ್ಕೆ ವಲಸೆ ಹೋಗಲು ನಿರ್ಧರಿಸಿದರು. ಆ ಸಂದಿಗ್ಧ ಸನ್ನಿವೇಶದಲ್ಲಿ ಹ.ಅಸ್ಮಾರು(ರ) ಅವರಿಗೆ ಬೇಕಾದ ಆಹಾರ ಪದಾರ್ಥಗಳ ಸರಬರಾಜು ಮಾಡಿದ್ದರು. ಅವರು ತನ್ನ ಸೊಂಟಕ್ಕೆ ಬಿಗಿದಿದ್ದ ನಿತಾಕನ್ನು[1] ಹರಿದು ಆಹಾರದ ಬುತ್ತಿಯನ್ನು ಕಟ್ಟಿದ್ದರು. ಆದ್ದರಿಂದ ಅವರಿಗೆ 'ದಾತುನ್ನಿತಾಕೈನಿ' ಎಂಬ ಬಿರುದು ದೊರೆಯಿತು.

## ಚಿಕ್ಕಮ್ಮ

ಹ.ಅಬೂಬಕರ್ ಸಿದ್ದೀಕ್‌ರ(ರ) ಪುತ್ರಿ ಮತ್ತು ಪ್ರವಾದಿಯವರ(ಸ) ಪ್ರಿಯ ಪತ್ನಿ ಹ.ಆಯಿಶಾರು(ರ) ಇಬ್ನ್ ಝುಬೈರ್‌ರ(ರ) ಚಿಕ್ಕಮ್ಮ. ಇಸ್ಲಾಮಿನಲ್ಲಿ ಹ. ಆಯಿಶಾರಿಗೆ(ರ) ಉನ್ನತ ಸ್ಥಾನ ಪ್ರಾಪ್ತವಾಗಿತ್ತು. ಅಬೂಬಕರ್‌ರ(ರ) ಪುತ್ರಿಯರಲ್ಲಿ ಆಯಿಶಾರು(ರ) ಅತ್ಯಂತ ಬುದ್ಧಿಮತಿ ಮತ್ತು ಪಂಡಿತೆಯಾಗಿದ್ದರು.

ಹ.ಆಯಿಶಾರಿಗೆ(ರ) ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ ಅಗಾಧ ಪಾಂಡಿತ್ಯವಿತ್ತು. ಪ್ರವಾದಿವರ್ಯರ(ಸ) ದೈನಂದಿನ ಜೀವನ ಚರ್ಯೆಯ ಕುರಿತು ಬಹುವಂಶ ವಿವರಗಳು ಹ.ಆಯಿಶಾರಿಂದಲೇ(ರ) ಲೋಕಕ್ಕೆ ದೊರೆತಿದೆಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಅಬೂಬಕರ್ ಮತ್ತು ಉಮರ್‌ರ(ರ) ಆಡಳಿತ ಕಾಲದಲ್ಲಿ ಅವರು ಧಾರ್ಮಿಕ ವಿಷಯಗಳ ಕುರಿತು ಫತ್ವಾ ನೀಡುತ್ತಿದ್ದರು. ಭಾಷಾ ಸಾಹಿತ್ಯ ಮತ್ತು ಭಾಷಣ ಕಲೆಯಲ್ಲಿಯೂ ವಿಶೇಷ ಪ್ರತಿಭೆಯನ್ನು ಹೊಂದಿದ್ದರು.

ಈ ಮೇಲಿನ ಸಂಕ್ಷಿಪ್ತ ವಿವರಣೆಯಿಂದ ಇಬ್ನ್ ಝುಬೈರ್‌ರು(ರ) ಹುಟ್ಟಿ ಬೆಳೆದ ಕುಟುಂಬದ ಉನ್ನತ ಸ್ಥಾನ, ಅವರ ತ್ಯಾಗ ಮನೋಭಾವ, ಶೌರ್ಯ, ಪಾಂಡಿತ್ಯ ಮತ್ತು ಇಸ್ಲಾಮಿ ಸ್ಫೂರ್ತಿಯನ್ನು ತಿಳಿಯಬಹುದು.

---

1. ಅರಬ್ ಸ್ತ್ರೀಯರು ಸೊಂಟಕ್ಕೆ ಬಿಗಿಯುವ ಪಟ್ಟಿಯನ್ನು 'ನಿತಾಕ್' ಎಂದು ಕರೆಯಲಾಗುತ್ತದೆ. ಹ. ಅಸ್ಮಾರಿಗೆ(ರ) ಅಂತಹ ಎರಡು ಪಟ್ಟಿಗಳಿದ್ದವು.

## ಜನನ

ಇಸ್ಲಾಮಿ ಇತಿಹಾಸದಲ್ಲಿ ಹ.ಅಬ್ದುಲ್ಲಾ ಬಿನ್ ಝುಬೈರ್‌ರ(ರ) ಜನನವು ಒಂದು ಅವಿಸ್ಮರಣೀಯ ಘಟನೆಯಾಗಿದೆ. ಏಕೆಂದರೆ ಪ್ರವಾದಿ(ಸ) ಮತ್ತು ಸಹಾಬಿಗಳು ಮದೀನಾಕ್ಕೆ ವಲಸೆ ಹೋದ ಹಲವು ಕಾಲದ ವರೆಗೆ ಆ ಪೈಕಿ ಯಾರಿಗೂ ಗಂಡು ಮಕ್ಕಳಾಗಿರಲಿಲ್ಲ. ಮದೀನಾದ ಯಹೂದಿಯರು ಈ ಅಂಶವನ್ನು ಗಮನಿಸಿ, ಅದರ ದುರ್ಲಾಭ ಪಡೆಯಲು ಪ್ರಯತ್ನಿಸಿದರು. ಮುಸ್ಲಿಮರಿಗೆ ಮಕ್ಕಳಾಗದಿರುವಂತೆ ನಾವು ಮಾಟ ಮಾಡಿರುವುದಾಗಿ ಜನರಲ್ಲಿ ಸುಳ್ಳು ಪ್ರಚಾರ ಆರಂಭಿಸಿದರು. ಈ ವದಂತಿಯ ಮೂಲಕ ಮುಸ್ಲಿಮರ ವಿಶ್ವಾಸವನ್ನು ಚಂಚಲ ಗೊಳಿಸಬಹುದೆಂದು ಅವರು ಭಾವಿಸಿದ್ದರು.

ಈ ಕುಪ್ರಚಾರ ಎಲ್ಲೆಡೆ ಹರಡಿದಾಗ ಮುಸ್ಲಿಮರಿಗೆ ಭಾರೀ ನಿರಾಶೆಯಾಯಿತು. ಅವರು ವ್ಯಾಕುಲ ಚಿತ್ತರಾದರು. ಇಂತಹ ಸನ್ನಿವೇಶದಲ್ಲಿ ಹ.ಅಬ್ದುಲ್ಲಾ ಬಿನ್ ಝುಬೈರ್(ರ) ಜನಿಸಿದರು. ಈ ಶುಭವಾರ್ತೆಯನ್ನು ಆಲಿಸಿದ ಮುಸ್ಲಿಮರು ಆನಂದ ತುಂದಿಲರಾಗಿ 'ತಕ್ಬೀರ್' ಘೋಷಣೆಯನ್ನು ಮೊಳಗಿಸಿದರು.

ಹೆರಿಗೆಯ ಬಳಿಕ ಮಗುವನ್ನು ಪ್ರವಾದಿಯವರ(ಸ) ಬಳಿಗೆ ಒಯ್ದರು. ಅವರು ಮಗುವನ್ನು ಸಂತೋಷದಿಂದ ಎತ್ತಿಕೊಂಡು ಮಗುವಿನ ಇಹ-ಪರ ಸೌಭಾಗ್ಯ ಗಳಿಗಾಗಿ ತುಂಬಾ ಹೊತ್ತು ಅಲ್ಲಾಹನೊಡನೆ ಪ್ರಾರ್ಥಿಸಿದರು.

## ಶಿಕ್ಷಣ

ಶೈಕ್ಷಣಿಕ ರಂಗದಲ್ಲಿ ಇಬ್ನ್ ಝುಬೈರ್‌ರು(ರ) ಉನ್ನತ ಸ್ಥಾನವನ್ನು ಗಳಿಸಿದರು. ಜ್ಞಾನವೃದ್ಧರಾಗಿದ್ದ ತಂದೆ-ತಾಯಿಯರಿಂದಲೂ ಚಿಕ್ಕಮ್ಮನಿಂದಲೂ ಕುರ್‌ಆನ್ ಮತ್ತು ಪ್ರವಾದಿಚರ್ಯೆಗಳನ್ನು ಅವರು ಚೆನ್ನಾಗಿ ಕಲಿತು ಮನನ ಮಾಡಿದ್ದರು.

ಅವರು ಉಜ್ವಲ ವಾಗ್ಮಿಯಾಗಿದ್ದರು. ಅವರ ಪ್ರೌಢ ಗಂಭೀರವಾದ ಭಾಷಣಗಳ ಶಬ್ದ ತರಂಗಗಳು ಪರ್ವತಗಳಲ್ಲಿ ಮಾರ್ದನಿಸುತ್ತಿದ್ದುವು. ಅವರ ಹಲವಾರು ಭಾಷಣಗಳು ಇತಿಹಾಸದ ಪುಟಗಳಲ್ಲಿ ಇಂದಿಗೂ ಹಚ್ಚ ಹಸುರಾಗಿದೆ. ಅವರ ಪ್ರೌಢ ಮಾತುಗಾರಿಕೆಯನ್ನು ಅವುಗಳಲ್ಲಿ ದರ್ಶಿಸಬಹುದು.

## ಶೌರ್ಯ

ಬಾಲ್ಯ ಕಾಲದಲ್ಲಿ ಇಬ್ನ್ ಝುಬೈರ್‌ರು(ರ) ವಿಸ್ಮಯಕಾರಿ ಸಾಹಸಗಳನ್ನು ತೋರಿಸಿದ್ದರು. ಮಾತಾಪಿತರ ಉನ್ನತ ತರಬೇತಿಯೇ ಅದಕ್ಕೆ ಪ್ರೇರಕವಾಗಿತ್ತು. ವೀರ ಪರಾಕ್ರಮಿಗಳ ಧೈರ್ಯ ಸಾಹಸಗಳನ್ನು ಕಣ್ಣಾರೆ ತೋರಿಸಿ, ಆ ಪುಟ್ಟ ಹೃದಯ

ದಲ್ಲಿರುವ ಭೀರುತ್ವವನ್ನು ತೊಲಗಿಸಲಿಕ್ಕಾಗಿ ಝುಬೈರ್ ಬಿನ್ ಅವ್ವಾಮ್‌ರು(ರ) ಮಗನನ್ನು ಹಲವು ಯುದ್ಧಗಳಿಗೆ ಸಂಗಡ ಕರೆದೊಯ್ದಿದ್ದಾರೆಂದು ಇತಿಹಾಸದಿಂದ ತಿಳಿದು ಬರುತ್ತದೆ. ಈ ಉದ್ದೇಶಾರ್ಥ ಅವರು ಮಗನನ್ನು ಯರ್ಮೂಕ್ ಯುದ್ಧಕ್ಕೂ ಕರೆದೊಯ್ದಿದ್ದರು. ಅಂದು ಇಬ್ನ್ ಝುಬೈರ್(ರ) 14 ವರ್ಷದ ಬಾಲಕ ರಾಗಿದ್ದರು. ಈ ಕಾರಣಗಳಿಂದಾಗಿ ಇಬ್ನ್ ಝುಬೈರ್‌ರು(ರ) ಚಿಕ್ಕಂದಿನಿಂದಲೇ ಮಹಾಶೂರರಾದರು. ಈ ಕೆಳಗಿನ ಘಟನೆಯು ಅದಕ್ಕೆ ಉದಾಹರಣೆಯಾಗಿದೆ.

ಒಮ್ಮೆ ಇಬ್ನ್ ಝುಬೈರ್‌ರು(ರ) ತನ್ನ ಕೆಲವಾರು ಸಂಗಾತಿಗಳೊಡನೆ ಆಟವಾಡುತ್ತಿದ್ದರು. ಆ ವೇಳೆ ಹ.ಉಮರ್‌ರು(ರ) ಆ ಹಾದಿಯಾಗಿ ಬಂದರು. ಉಮರ್‌ರ(ರ) ನೆರಳು ಕಂಡದ್ದೇ ತಡ, ಮಕ್ಕಳೆಲ್ಲರೂ ಹೆದರಿ ಅಲ್ಲಿಂದ ಓಡಿ ಹೋದರು. ಉಮರ್‌ರಿಗೆ(ರ) ಹೆದರದ ಯಾವೊಂದು ನರಪಿಳ್ಳೆಯೂ ಅರೇಬಿಯಾ ದಲ್ಲಿರಲಿಲ್ಲವೆಂದು ಹೇಳಬೇಕಾಗಿಲ್ಲವಷ್ಟೇ? ಆದರೆ ಬಾಲಕ ಇಬ್ನ್ ಝುಬೈರ್(ರ) ಅಲ್ಲಿಂದ ಒಂದಿಷ್ಟೂ ಕದಲಲಿಲ್ಲ. ಇದನ್ನು ನೋಡಿ ಹ.ಉಮರ್ ರಿಗೆ(ರ) ಆಶ್ಚರ್ಯವಾಯಿತು. ಅವರು ಅಚ್ಚರಿಯಿಂದಲೇ ಇಬ್ನ್ ಝುಬೈರ್ ರೊಡನೆ, "ಮಗೂ ನೀನು ನನ್ನನ್ನು ನೋಡಿದಾಗ ಭಯದಿಂದ ಏಕೆ ಓಡಲಿಲ್ಲ?" ಎಂದು ಪ್ರಶ್ನಿಸಿದರು. ಆಗ ಆ ಬಾಲಕ ದಿಟ್ಟ ಸ್ವರದಿಂದ "ನಿಮಗೆ ಯಾಕೆ ಹೆದರಬೇಕು? ನೀವು ಹೋಗುವ ದಾರಿಗೇನೂ ನಾನು ಅಡ್ಡ ಬಂದಿಲ್ಲ?" ಎಂದರು. ಈ ದಿಟ್ಟ ಉತ್ತರವು ಆ ವೀರ ನಾಯಕನನ್ನು ಸಂತುಷ್ಟಗೊಳಿಸಿತು.

## ಯುದ್ಧ ತಂತ್ರಜ್ಞ

ಇಬ್ನ್ ಝುಬೈರ್(ರ) ಓರ್ವ ಸಮರ್ಥ ಯುದ್ಧ ತಂತ್ರಜ್ಞರಾಗಿದ್ದರು. ಟ್ರಿಪೋಲಿ ಯುದ್ಧದಲ್ಲಿ ಅವರು ತೋರಿದ ಯುದ್ಧ ಚಾತುರ್ಯವು ಅದಕ್ಕೆ ಉದಾಹರಣೆಯಾಗಿದೆ. ಹ.ಉಸ್ಮಾನ್‌ರ(ರ) ಆಡಳಿತ ಕಾಲದಲ್ಲಿ ಈ ಯುದ್ಧ ನಡೆದಿತ್ತು. ಅಂದು ಇಬ್ನ್ ಝುಬೈರ್‌ರು(ರ) ಯೌವನಕ್ಕೆ ಕಾಲಿಟ್ಟಿದ್ದರಷ್ಟೆ. ಹಲವು ಕಾರಣಗಳಿಂದಾಗಿ ಆ ಯುದ್ಧ ದೀರ್ಘ ಕಾಲ ಮುಂದುವರಿಯಿತು. ಖಲೀಫರು ಅದರಿಂದ ತುಂಬಾ ಕಳವಳಗೊಂಡರು. ತಕ್ಷಣವೇ ಅವರು ಪ್ರಮುಖ ಸಹಾಬಿಗಳನ್ನು ಕರೆಸಿ ಸಮಾಲೋಚನೆ ನಡೆಸಿದರು. ಅಬ್ದುಲ್ಲಾ ಬಿನ್ ಝುಬೈರ್‌ರ(ರ) ನಾಯಕತ್ವದಲ್ಲಿ ಒಂದು ಸಣ್ಣ ಸೇನೆಯನ್ನು ಕಳುಹಿಸಬೇಕೆಂದು ಅವರೆಲ್ಲರೂ ಅಭಿಪ್ರಾಯಪಟ್ಟರು.

ಈ ನಿರ್ಧಾರದಂತೆ ಅಬ್ದುಲ್ಲಾ ಬಿನ್ ಝುಬೈರ್‌ರ(ರ) ನಾಯಕತ್ವದಲ್ಲಿ ಒಂದು ಸಣ್ಣ ಸೇನಾ ತುಕಡಿಯು ಟ್ರಿಪೋಲಿಗೆ ಹೊರಟಿತು. ಅಲ್ಲಿ ತಲಪಿದಾಗ ಇಬ್ನ್ ಝುಬೈರ್(ರ) ಕಂಡ ದೃಶ್ಯವು ಅಚ್ಚರಿದಾಯಕವಾಗಿತ್ತು. ಸೇನಾಧಿಪತಿ

ಇಬ್ನ್ ಸುರಾಹ್‌ರು ಸುತ್ತಲೂ ಸೈನಿಕ ಕಾವಲನ್ನು ಇರಿಸಿ, ಭಯ ಭೀತರಾಗಿ ಡೇರೆಯೊಳಗೆ ಕುಳಿತಿದ್ದರು. ಅದರ ಉದ್ದೇಶ ಇಬ್ನ್ ಝುಬೈರ್‌ರಿಗೆ(ರ) ಅರ್ಥವಾಗಲಿಲ್ಲ. ಅವರು ಸುರಾಹ್‌ರೊಡನೆ ಆ ಬಗ್ಗೆ ವಿಚಾರಿಸಿದರು. ಅದಕ್ಕೆ ಸುರಾಹ್‌ರು, ಮುಸ್ಲಿಮ್ ಸೇನಾಧಿಕಾರಿಯ ತಲೆ ಕಡಿದು ತರುವ ಶೂರರಿಗೆ ವೈರಿ ರಾಜನು ಒಂದು ಲಕ್ಷ ದೀನಾರ್ ಬಹುಮಾನ ಮತ್ತು ತನ್ನ ಸುಂದರಿಯಾದ ಮಗಳನ್ನು ವಿವಾಹ ಮಾಡಿ ಕೊಡುವುದಾಗಿ ಸೇನೆಯಲ್ಲಿ ಡಂಗುರ ಸಾರಿದ್ದಾನೆ. ಇದರಿಂದಾಗಿ ಅವರಲ್ಲಿ ಅಭೂತಪೂರ್ವ ಆವೇಶ ಮತ್ತು ಹುಮ್ಮಸ್ಸು ಹುಟ್ಟಿ ಕೊಂಡಿದೆ. ಅವರು ತಲೆ ಕಡಿಯಲಿಕ್ಕಾಗಿ ನಾಮುಂದು ತಾಮುಂದು ಎಂದು ಪೈಪೋಟಿ ನಡೆಸುತ್ತಿದ್ದಾರೆ ಎಂದರು.

ಇಬ್ನ್ ಸುರಾಹ್‌ರ ಈ ಉತ್ತರವು ಇಬ್ನ್ ಝುಬೈರ್‌ರನ್ನು(ರ) ದಿಗ್ಭ್ರಾಂತ ಗೊಳಿಸಿತು. ಈ ಭಯಭೀತ ವಾತಾವರಣವನ್ನು ಹೋಗಲಾಡಿಸಲು ಅವರು ತುಂಬಾ ಹೊತ್ತು ಆಲೋಚಿಸಿದರು. ಆ ಬಳಿಕ ಹೀಗೆಂದು ಡಂಗುರ ಸಾರಿದರು- "ವೈರಿ ರಾಜನ ತಲೆ ಕಡಿದು ತರುವ ಯೋಧನಿಗೆ ಈ ನಾಡಿನ ಗವರ್ನರ್ ಹುದ್ದೆ ನೀಡಲಾಗುವುದು." ಈ ಘೋಷಣೆಯು ಮುಸ್ಲಿಮ್ ಸೇನೆಯಲ್ಲಿ ಉತ್ತಮ ಪರಿಣಾಮ ಬೀರಿತು. ಅವರು ಪೂರ್ವಾಧಿಕ ಸ್ಫೂರ್ತಿ ಮತ್ತು ಉತ್ಸಾಹದಿಂದ ಕಾದಾಡಿದರು. ರೋಮನರ ಸುಶಕ್ತ ಸೇನೆಯನ್ನು ಧ್ವಂಸಗೊಳಿಸಿ ಹೀನಾಯವಾಗಿ ಸೋಲಿಸಿದರು. ಸೋಲಿನ ದವಡೆಗೆ ಸಿಲುಕಿದ್ದ ಟ್ರಿಪೋಲಿ ಯುದ್ಧವನ್ನು ವಿಜಯದ ಉತ್ತುಂಗ ಕ್ಕೇರಿಸಿದ ಇಬ್ನ್ ಝುಬೈರ್‌ರ(ರ) ಯುದ್ಧ ಕೌಶಲ್ಯವು ಎಲ್ಲರನ್ನೂ ಬೆರಗುಗೊಳಿಸಿತು.

## ಕಲಹದ ಆರಂಭ

ನಾಲ್ವರು ಖಲೀಫರ ಸುವರ್ಣ ಆಡಳಿತ ಕಾಲದ ಬಳಿಕ ಮುಸ್ಲಿಮ್ ಲೋಕದಲ್ಲಿ ಶೋಚನೀಯ ಅನೈಕ್ಯ ಮತ್ತು ಆಂತರಿಕ ಒಡಕು ಗೋಚರವಾಯಿತು. ರಾಜಕೀಯ ರಂಗವು ಅತ್ಯಂತ ಹೊಲಸಾಯಿತು. ಇಸ್ಲಾಮಿನ ಪ್ರಾತಿನಿಧಿಕ ಆಡಳಿತ ವ್ಯವಸ್ಥೆಯು ಕುಸಿದು ನಿರಂಕುಶ ರಾಜಾಳ್ವಿಕೆಯು ತಲೆ ಎತ್ತಿದಾಗ ಅನೈಕ್ಯ ಮತ್ತು ಅರಾಜಕತೆ ಎಲ್ಲೆಡೆ ಭುಗಿಲೆದ್ದಿತು. ಈ ಅಪಾಯದ ವಿರುದ್ಧರಾದ ವೀರಧೀರ ಹ.ಅಬ್ದುಲ್ಲಾ ಬಿನ್ ಝುಬೈರ್(ರ) ಮತ್ತು ಹ.ಹುಸೈನ್ ಬಿನ್ ಅಲೀ(ರ) ರಂಗಕ್ಕಿಳಿದರು. ಇಸ್ಲಾಮಿನ ಪ್ರಾತಿನಿಧಿಕ ಆಡಳಿತ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದೇ ಅವರ ಗುರಿಯಾಗಿತ್ತು. ಆದ್ದರಿಂದ ಅವರು ಎತ್ತಿ ಹಿಡಿದ ಸತ್ಯದ ಸುಂದರ ಧ್ವಜದಡಿಯಲ್ಲಿ ಜನರು ಅತ್ಯುತ್ಸಾಹದಿಂದ ಅಣಿಯಾದರು. ಇದು ಆಡಳಿತ ಗಾರರನ್ನು ಅತ್ಯಂತ ಕುಪಿತಗೊಳಿಸಿತು. ಅವರು ಹೋರಾಟಕ್ಕೆ ಸಜ್ಜಾದರು.

ಕರ್ಬಲಾದಲ್ಲಿ ಹುಸೈನ್(ರ) ಮತ್ತು ಯಝೀದ್‌ರ ಸೇನೆಯು ಮುಖಾಮುಖಿಯಾಯಿತು. ಹುಸೈನ್‌ರನ್ನು(ರ) ವೈರಿಗಳು ಕರ್ಬಲಾದಲ್ಲಿ ಕ್ರೂರವಾಗಿ ಕೊಂದರು. ಅನಂತರ ಅಬ್ದುಲ್ಲಾ ಬಿನ್ ಝುಬೈರ್(ರ) ಮಾತ್ರ ರಂಗದಲ್ಲಿ ಉಳಿದರು. ಅವರು ತನ್ನ ಕಾರ್ಯಾಚರಣೆಯನ್ನು ಇನ್ನಷ್ಟು ತೀವ್ರಗೊಳಿಸಿದರು.

ಇಬ್ನ್ ಝುಬೈರ್‌ರ(ರ) ರಾಜಕೀಯ ಅಭಿಪ್ರಾಯದ ಬಗ್ಗೆ ಮುಆವಿಯಾರಿಗೆ ಕಿಂಚಿತ್ತೂ ಸಹಮತವಿರಲಿಲ್ಲ. ತನ್ನ ಕಾಲಾನಂತರ ಯಝೀದ್‌ರನ್ನು ಉತ್ತರಾಧಿಕಾರಿಯಾಗಿ ಅಂಗೀಕರಿಸುವಂತೆ ಮಾಡುವ ಮುಆವಿಯಾರ(ರ) ಪ್ರಯತ್ನವನ್ನು ಇಬ್ನ್ ಝುಬೈರ್(ರ) ತೀವ್ರವಾಗಿ ವಿರೋಧಿಸಿದ್ದರು. ಇಬ್ನ್ ಝುಬೈರ್‌ರು(ರ) ಪ್ರಜಾಪ್ರಾತಿನಿಧ್ಯ ಪದ್ಧತಿಯ ವಕ್ತಾರರಾಗಿದ್ದರು. ಒಮ್ಮೆ ಮುಆವಿಯಾ(ರ) ಮತ್ತು ಇಬ್ನ್ ಝುಬೈರ್‌ರ(ರ) ಮಧ್ಯೆ ನಡೆದ ಸಂಭಾಷಣೆಯಲ್ಲಿ ಅದು ಎದ್ದು ತೋರುತ್ತದೆ. ಆ ಸಂಭಾಷಣೆ ಹೀಗಿತ್ತು:

ಅಮೀರ್ ಮುಆವಿಯಾ: ಇಬ್ನು ಝುಬೈರ್! ನೀವು ಮದೀನಾದ ಪುರ ಪ್ರಮುಖರ ಪ್ರತಿನಿಧಿಯಾಗಿರುವಿರಲ್ಲವೇ? ನಾನು ನಿಮ್ಮೊಂದಿಗೆ ಉತ್ತಮ ಸಂಬಂಧವಿರಿಸಿಕೊಂಡು ನಿಮ್ಮ ಆಕ್ಷೇಪಗಳೆಲ್ಲವನ್ನು ತಾಳ್ಮೆಯಿಂದ ಆಲಿಸಿರುವುದನ್ನೂ ನೀವು ಮರೆತಿರಲಾರಿರೆಂದು ಭಾವಿಸುತ್ತೇನೆ. ನಾನು ನಿಮ್ಮಲ್ಲಿ ವಿನಂತಿಸುವುದೇನೆಂದರೆ, ನೀವು ಕೇವಲ ನಾಮ ಮಾತ್ರಕ್ಕೆ ಯಝೀದ್‌ನನ್ನು ಖಲೀಫರೆಂದು ಒಪ್ಪಿಕೊಂಡು, ಆಡಳಿತ ವ್ಯವಹಾರಗಳನ್ನು ಸಂಪೂರ್ಣವಾಗಿ ನೀವೇ ನಿರ್ವಹಿಸಿರಿ. ಈ ವಿನಂತಿಯನ್ನು ನೀವು ಸ್ವೀಕರಿಸುವಿರೆಂದು ನಾನು ನಂಬುತ್ತೇನೆ.

ಇಬ್ನ್ ಝುಬೈರ್: ನೀವು ಪ್ರವಾದಿಯ(ಸ) ಅಥವಾ ಅವರ ಪ್ರಮುಖ ಸಹಾಬಿಗಳಾದ ಅಬೂಬಕರ್ ಮತ್ತು ಉಮರ್‌ರ(ರ) ಆಡಳಿತವನ್ನು ಮಾದರಿಯಾಗಿ ಅಂಗೀಕರಿಸಿದರೆ, ನಾನು ನಿಮ್ಮ ವಿನಂತಿಯನ್ನು ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ.

ಮು: ಅವರ ಮಾದರಿ ಹೇಗಿತ್ತು?

ಝು: ಪ್ರವಾದಿವರ್ಯರು(ಸ) ತನ್ನ ಯಾವೊಬ್ಬ ಉತ್ತರಾಧಿಕಾರಿಯನ್ನೂ ನೇಮಿಸಿರಲಿಲ್ಲವೆಂಬುದು ನಿಮಗೆ ತಿಳಿದಿದೆಯಷ್ಟೇ? ಅಬೂಬಕರ್‌ರನ್ನು(ರ) ಆಡಳಿತಗಾರನಾಗಿ ಜನರೇ ಚುನಾಯಿಸಿದ್ದರು.

ಮು: ಅಬೂಬಕರ್‌ರಂತಹ(ರ) ಸರ್ವಾಂಗೀಕೃತ ಸದ್ಗುಣ ಸಂಪನ್ನ ವ್ಯಕ್ತಿಯು ಇಲ್ಲದಿರುವ ಈ ಕಾಲದಲ್ಲಿ ನಾನೇನು ಮಾಡಲಿ?

ಝು: ಇಂತಹ ಪರಿಸ್ಥಿತಿಯಲ್ಲಿ ನಾವು ಅವರ ಮಾದರಿಯನ್ನು ಅವಲಂಬಿಸದೆ ಗತ್ಯಂತರವಿಲ್ಲ. ಅಬೂಬಕರ್‌ರು(ರ) ಮರಣಾಸನ್ನ ವೇಳೆಯಲ್ಲಿ ತನ್ನ ಕುಟುಂಬ

ಸಂಬಂಧಿಕರಲ್ಲದ ವ್ಯಕ್ತಿಯೋರ್ವರನ್ನು ಉತ್ತರಾಧಿಕಾರಿಯಾಗಿ ನೇಮಿಸಿದರು. ಉಮರ್‌ರು(ರ) ತನ್ನ ಸಂಬಂಧಿಕರಲ್ಲದ ಆರು ಮಂದಿಯನ್ನು ಹೆಸರಿಸಿ, ಆ ಪೈಕಿ ಯಾರಾದರೊಬ್ಬರನ್ನು ಆರಿಸಿಕೊಳ್ಳುವಂತೆ ಆಜ್ಞಾಪಿಸಿದ್ದರು.

ಮು: ಇದಕ್ಕಿಂತ ಭಿನ್ನವಾದ ಮಾದರಿಯು ಅಂಗೀಕಾರಾರ್ಹವಲ್ಲವೇ?

ಝು: ಇದನ್ನು ಮೀರಿಸುವ ಯಾವ ಮಾದರಿಯೂ ನಮಗಿಲ್ಲ.

ಈ ಸಂಭಾಷಣೆಯಿಂದ ಮುಆವಿಯಾ(ರ) ಮತ್ತು ಅಬ್ದುಲ್ಲಾ ಬಿನ್ ಝುಬೈರ್(ರ)ರೊಳಗಣ ಭಿನ್ನಾಭಿಪ್ರಾಯವು ಚೆನ್ನಾಗಿ ಮನವರಿಕೆಯಾಗುತ್ತದೆ. ಈ ಭಿನ್ನಾಭಿಪ್ರಾಯದಿಂದಾಗಿ ಅಬ್ದುಲ್ಲಾ ಬಿನ್ ಝುಬೈರ್‌ರ(ರ) ಚಟುವಟಿಕೆಗಳು ಮುಆವಿಯಾರಿಗೆ ಮೆಚ್ಚುಗೆಯಾಗುತ್ತಿರಲಿಲ್ಲ. ಮಾತ್ರವಲ್ಲ ಅವರನ್ನು ತೀವ್ರವಾಗಿ ದ್ವೇಷಿಸುತ್ತಿದ್ದರು. ಮುಆವಿಯಾರು ತಮ್ಮ ಮಗನಿಗೆ ನೀಡಿದ ಅಂತ್ಯೋಪದೇಶದಲ್ಲಿ ಅದು ಸ್ಪಷ್ಟವಾಗಿ ಗೋಚರಿಸುತ್ತದೆ. ಮುಆವಿಯಾ(ರ) ಈ ರೀತಿ ವಸಿಯ್ಯತ್ ಮಾಡಿದ್ದರು:

"ಮಗನೇ, ಹುಸೈನ್ ಬಿನ್ ಅಲೀ(ರ), ಅಬ್ದುಲ್ಲಾ ಬಿನ್ ಉಮರ್(ರ), ಅಬ್ದುರ್ರಹ್ಮಾನ್ ಬಿನ್ ಅಬೂಬಕರ್(ರ) ಮತ್ತು ಅಬ್ದುಲ್ಲಾ ಬಿನ್ ಝುಬೈರ್(ರ) ಈ ನಾಲ್ವರ ಬಗ್ಗೆ ಎಚ್ಚರ ವಹಿಸಬೇಕು. ಆ ಪೈಕಿ ಅಬ್ದುಲ್ಲಾ ಬಿನ್ ಉಮರ್‌ರಿಂದ(ರ) ನಿನಗೇನೂ ತೊಂದರೆಯಾಗಲಾರದು. ಅವರಿಗೆ ಕೇವಲ ಆರಾಧನೆಗಳಲ್ಲಷ್ಟೇ ಆಸಕ್ತಿಯಿದೆ. ಎಲ್ಲರೂ ನಿನ್ನನ್ನು ಆಡಳಿತಗಾರನಾಗಿ ಒಪ್ಪಿದರೆ ಅವರೂ ಒಪ್ಪುತ್ತಾರೆ. ಅಬ್ದುರ್ರಹ್ಮಾನ್ ಬಿನ್ ಅಬೂಬಕರ್‌ರು(ರ) ದೃಢಚಿತ್ತರಲ್ಲದಿರುವುದರಿಂದ, ನೀನು ಅವರೊಡನೆ ಉತ್ತಮ ರೀತಿಯಲ್ಲಿ ವರ್ತಿಸಿದರೆ ಅವರೂ ನಿನ್ನೊಡನೆ ಉತ್ತಮ ರೀತಿಯಲ್ಲಿ ವರ್ತಿಸಿಯಾರು. ಆದರೆ ಅವರಲ್ಲಿ ಹುಸೈನ್‌ರು(ರ) ಸ್ವಲ್ಪ ಅಪಾಯಕಾರಿ. ಅವರು ನಿನ್ನ ವಿರುದ್ಧ ಇರಾಕೀಯರನ್ನು ಒಂದುಗೂಡಿಸುವ ಸಾಧ್ಯತೆಯಿದೆ. ನೀನು ಹುಸೈನ್‌ರೊಡನೆ(ರ) ಯುದ್ಧ ನಡೆಸಿ, ಅವರು ಅದರಲ್ಲಿ ಸೋತರೆ, ನೀನು ಅವರನ್ನು ಕ್ಷಮಿಸಬೇಕು. ಏಕೆಂದರೆ ಅವರು ಪ್ರವಾದಿವರ್ಯರ(ಸ) ಮೊಮ್ಮಗ. ಆದರೆ ಅಬ್ದುಲ್ಲಾ ಬಿನ್ ಝುಬೈರ್‌ರ(ರ) ಬಗ್ಗೆ ನೀನು ಎಲ್ಲ ರೀತಿ ಯಿಂದಲೂ ಎಚ್ಚರಿಕೆಯಿಂದಿರಬೇಕು. ಅವರು ಸಂಧಾನಕ್ಕೆ ಬಂದರೆ ನೀನು ಒಪ್ಪಿಕೋ ಅಥವಾ ಒಂದು ವೇಳೆ ನಿನ್ನ ಕೈಗೆ ಸಿಕ್ಕಿದರೆ ಅವರನ್ನು ಸಣ್ಣಗೆ ಕೊಚ್ಚಿ ಬಿಡು."

## ರಾಡಿಯಾದ ರಾಜಕೀಯ

ಮುಆವಿಯಾರ(ರ) ನಿಧನದ ಬಳಿಕ ರಾಜಕೀಯ ರಂಗದಲ್ಲಿ ಕೋಲಾಹಲ ವೆದ್ದಿತು. ಯಝೀದ್‌ನ ಆಢಳಿತವನ್ನು ಜನರು ಸಹಿಸಲಿಲ್ಲ. ದೇಶದಾದ್ಯಂತ ಅವರ

ವಿರುದ್ಧ ಘೋಷಣೆ ಮೊಳಗಿತು. ಅಬ್ದುಲ್ಲಾ ಬಿನ್ ಝುಬೈರ್‌ರು(ರ) ಮದೀನಾದಲ್ಲಿ ಯಝೀದ್‌ರ ವಿರುದ್ಧವಾಗಿ ಸರಕಾರ ಸ್ಥಾಪಿಸಿದರು. ಇದರಿಂದ ಯಝೀದ್ ಮತ್ತು ಇಬ್ನ್ ಝುಬೈರ್‌ರ(ರ) ನಡುವೆ ತೀವ್ರ ಕಾದಾಟ ನಡೆಯಿತು. ಆದರೆ ಅದು ಹೆಚ್ಚು ಕಾಲ ಮುನ್ನಡೆಯಲಿಲ್ಲ. ಯಝೀದ್‌ರ ಅಂತ್ಯದಿಂದ ಸಮಾಪ್ತಿಯಾಯಿತು.

ಯಝೀದ್‌ರ ಬಳಿಕ ಮರ್ವಾನ್ ಅಧಿಕಾರಕ್ಕೆ ಬಂದರು. ಮುಸ್ಲಿಮ್ ಜಗತ್ತು ಗಲಭೆ ಗೊಂದಲಗಳ ನೆಲೆ ಬೀಡಾಗಿತ್ತು. ಆಡಳಿತಾರೂಢರಾಗಲಿಕ್ಕಾಗಿ ಅನೇಕ ಮಂದಿ ಈ ವೇಳೆ ರಂಗಕ್ಕಿಳಿದಿದ್ದರು. ಆ ಪೈಕಿ ಮುಖ್ತಾರ್‌ರ ಆಗಮನ ಪ್ರಮುಖವಾಗಿದೆ. ಜನರು ಮುಖ್ತಾರ್‌ರ ಪಕ್ಷದಲ್ಲಿ ಗುಂಪುಗುಂಪಾಗಿ ಸೇರಿಕೊಂಡರು. ಕೂಫಾ ಅವರ ಕೇಂದ್ರವಾಗಿತ್ತು. ಅಂದು ಕೂಫಾವೂ ಅಬ್ದುಲ್ಲಾ ಬಿನ್ ಝುಬೈರ್‌ರ ಅಧೀನದಲ್ಲಿತ್ತು. ಕೆಲವೇ ದಿನಗಳಲ್ಲಿ ಅವರು ಅಬ್ದುಲ್ಲಾ ಬಿನ್ ಝುಬೈರ್‌ರ(ರ) ರಾಜ್ಯಪಾಲರನ್ನು ಹೊರಹಾಕಿದರು.

ಮುಖ್ತಾರ್‌ರ ಸನ್ನಾಹವು ಇಬ್ನ್ ಝುಬೈರ್‌ರ(ರ) ಮುನ್ನಡೆಗೆ ಅಡ್ಡಿಯಾಯಿತೆಂದು ಬೇರೆ ಹೇಳಬೇಕಾಗಿಲ್ಲ. ಆದ್ದರಿಂದ ಮುಖ್ತಾರ್‌ರ ಚಟುವಟಿಕೆಗಳನ್ನುಕ್ಷಿಪ್ರವಾಗಿ ದಮನಿಸಬೇಕೆಂದು ಇಬ್ನ್ ಝುಬೈರ್(ರ) ನಿರ್ಧರಿಸಿದರು. ತಕ್ಷಣವೇ ತನ್ನ ಸಹೋದರ ಮಿಸ್‌ಅಬ್‌ರ(ರ) ನಾಯಕತ್ವದಲ್ಲಿ ಒಂದು ಭಾರೀ ಸೇನೆಯನ್ನು ಸಜ್ಜುಗೊಳಿಸಿ ಮುಖ್ತಾರನ ವಿರುದ್ಧ ಕಳುಹಿಸಿದರು. ಉಭಯ ಸೇನೆಗಳೂ ಭಯಂಕರವಾಗಿ ಹೋರಾಡಿದವು. ಮುಖ್ತಾರನ ಸೇನೆಯು ಶೋಚನೀಯ ಸೋಲನುಭವಿಸಿತು.

ಅಬ್ದುಲ್ ಮಲಿಕ್ ಖಲೀಫರಾದ ಬಳಿಕ ಇಬ್ನ್ ಝುಬೈರ್‌ರು(ರ) ಇನ್ನೊಂದು ಹೋರಾಟವನ್ನು ಎದುರಿಸಬೇಕಾಯಿತು. ಅವರು ತಮ್ಮ ಸಹೋದರನ ನಾಯಕತ್ವದಲ್ಲಿ ಒಂದು ಸೇನೆಯನ್ನು ಸಜ್ಜುಗೊಳಿಸಿದರು. ಆದರೆ ಅದು ಅಬ್ದುಲ್ ಮಲಿಕ್‌ರ ಸೇನೆಯನ್ನು ಸೋಲಿಸುವಷ್ಟು ಶಕ್ತವಾಗಿರಲಿಲ್ಲ. ಆದ್ದರಿಂದ ಇಬ್ನ್ ಝುಬೈರ್‌ರು(ರ) ಆ ಯುದ್ಧದಲ್ಲಿ ಸೋತರು. ಮಿಸ್‌ಅಬ್‌ರು ವೈರಿಗಳ ಸೆರೆ ಸಿಕ್ಕಿ ಅನಂತರ ವಧಿಸಲ್ಪಟ್ಟರು.

ಮಿಸ್‌ಅಬ್‌ರ ವಧೆಯ ಬಳಿಕ ವೈರಿಗಳು ದುಷ್ಟ ಹಜ್ಜಾಜ್‌ನ ನಾಯಕತ್ವದಲ್ಲಿ ಒಂದು ಬಲಾಢ್ಯ ಸೇನೆಯನ್ನು ಸಜ್ಜುಗೊಳಿಸಿ ಅಬ್ದುಲ್ಲಾ ಬಿನ್ ಝುಬೈರ್‌ರ(ರ) ಮೇಲೆರಗಿದರು. ಉಭಯ ತಂಡಗಳೂ ಭೀಕರ ಕಾದಾಟ ನಡೆಸಿದವು.

ತನ್ಮಧ್ಯೆ ಅಬ್ದುಲ್ಲಾ ಬಿನ್ ಝುಬೈರ್(ರ) ಕಅಬಾದಲ್ಲಿ ನಮಾಝ್‌ನಲ್ಲಿ ನಿರತರಾಗಿದ್ದಾಗ ನೀಚ ಹಜ್ಜಾಜನು ಕಅಬಾದ ಪಾವಿತ್ರ್ಯವನ್ನು ಲೆಕ್ಕಿಸದೆ ಬೆಂಕಿ ಕೊಳ್ಳಿ ಮತ್ತು ಕಲ್ಲುಗಳನ್ನು ಎಸೆಯಲಾರಂಭಿಸಿದನು. ಇದರಿಂದ ಪವಿತ್ರ ಭವನಕ್ಕೆ ಭಾರೀ ಹಾನಿಯಾಯಿತು.

## ಮಾತೆಯ ಸನ್ನಿಧಿಯಲ್ಲಿ

ಹೋರಾಟವು ತುಂಬಾ ಸಮಯ ಮುಂದುವರಿಯಿತು. ಅಬ್ದುಲ್ಲಾ ಬಿನ್ ಝುಬೈರ್‌ರಲ್ಲಿ(ರ) ಸಾಕಷ್ಟು ಶಸ್ತ್ರಾಸ್ತ್ರಗಳಿರಲಿಲ್ಲ. ಈ ಯುದ್ಧದಲ್ಲಿ ಸೋಲು ಖಚಿತವೆಂದು ಭಾಸವಾಯಿತು. ಆದರೆ ಸತ್ಯಕ್ಕಾಗಿ ನಡೆಯುವ ಈ ಧರ್ಮ ಯುದ್ಧದಲ್ಲಿ ಸೋಲೊಪ್ಪಿಕೊಳ್ಳುವುದು ಆತ್ಮಘಾತಕವೆಂದು ಅವರು ಅರಿತಿದ್ದರು. ಏನು ಮಾಡುವುದೆಂದರಿಯದೆ ಪರಿತಪಿಸಿದರು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ತಾಯಿಯ ಅಭಿಪ್ರಾಯದಂತೆ ನಡೆಯುವುದೆಂದು ನಿರ್ಧರಿಸಿ ವೀರಮಾತೆಯ ಬಳಿಗೆ ತೆರಳಿದರು. ಅಂದು ಅಸ್ಮಾರ(ರ) ಪ್ರಾಯವು ನೂರು ವರ್ಷ ಮೀರಿತ್ತು. ಅವರು ಭಯಭಕ್ತಿಯಿಂದ ಮಾತೆಯೊಡನೆ ಹೀಗೆಂದರು: "ಅಮ್ಮಾ! ಹಜ್ಜಾಜ್ ನೊಂದಿಗಿನ ಯುದ್ಧವು ಈಗ ಉತ್ತುಂಗಕ್ಕೇರಿದೆ. ವೈರಿಗಳನ್ನು ಪ್ರತಿಭಟಿಸುವ ಯಾವ ಆಯುಧವೂ ನಮ್ಮ ಬಳಿಯಿಲ್ಲ. ಈಗ ನಮ್ಮೊಂದಿಗೆ ಒಂದು ಸಣ್ಣ ಸೇನೆಯಷ್ಟೇ ಇದೆ. ನಾನೇನು ಮಾಡಲಿ?"

ಜೀವನದ ಸಂಜೆಯಲ್ಲಿದ್ದ ಆ ದುರ್ಬಲ ಮಹಿಳಾ ಮಣಿಯು ದೃಢ ಸ್ವರದಿಂದ ಹೀಗೆ ಉತ್ತರಿಸಿದರು: "ನೀನು ಸ್ವಲ್ಪವೂ ನಿರಾಶನಾಗಬೇಡ. ನಿನ್ನ ಮಿತ್ರರು ಹೋರಾಡಿ ವೀರ ಸ್ವರ್ಗ ಸೇರಿದ ಈ ಮಾರ್ಗವು ಕೇವಲ ಸತ್ಯದ ಸಂಸ್ಥಾಪನೆಗಾಗಿದೆಯೆಂದು ನೀನು ಭಾವಿಸುವುದಿದ್ದರೆ, ಅದಕ್ಕಾಗಿ ಮರಣ ದವರೆಗೆ ಹೋರಾಡುವುದನ್ನೇ ನಾನು ಮೆಚ್ಚುತ್ತೇನೆ. ಸತ್ಯಕ್ಕಾಗಿ ಹೋರಾಡಿ ಹುತಾತ್ಮನಾದರೆ ನಶ್ವರವಾದ ಈ ಜೀವನಕ್ಕಿಂತ ಬಹಳಷ್ಟು ಸುಖಮಯವಾದ ಶಾಶ್ವತ ಪರಲೋಕ ಜೀವನವು ನಿನಗೆ ದೊರೆಯುವುದು. ಆದ್ದರಿಂದಲೇ ಈ ಕೂಡಲೇ ರಣಾಂಗಣಕ್ಕೆ ಹೊರಡು, ಸತ್ಯಕ್ಕಾಗಿ ಈ ಜೀವವನ್ನು ಅರ್ಪಿಸು."

ಮಾತೆಯ ದಿಟ್ಟ ಮಾತುಗಳು ಇಬ್ನು ಝುಬೈರ್‌ರಿಗೆ(ರ) ನವಚೈತನ್ಯ ನೀಡಿತು. ಆದರೆ ಬೇರೊಂದು ಚಿಂತೆ ಅವರನ್ನು ಕಾಡುತ್ತಿತ್ತು. ತಾನು ವಧಿಸಲ್ಪಟ್ಟರೆ ಬನೂ ಉಮಯ್ಯರು ತನ್ನ ಕಳೇಬರದೊಂದಿಗೆ ವರ್ತಿಸಬಹುದಾದ ನೀಚ ಕೃತ್ಯವನ್ನು ಜ್ಞಾಪಿಸಿದಾಗ ಅವರಿಗೆ ಭಾರೀ ಸಂಕಟವಾಗುತ್ತಿತ್ತು. ಅವರು ಆ ಬಗ್ಗೆ ತಾಯಿಯೊಡನೆ ಕೇಳಿದರು: "ಅಮ್ಮಾ! ಬನೂ ಉಮಯ್ಯರು ನನ್ನ ಮೃತದೇಹವನ್ನು ಕೊಚ್ಚಿ ಹಾಕಿ ಅದರೊಂದಿಗೆ ಹೀನವಾಗಿ ವರ್ತಿಸುವ ಸನ್ನಿವೇಶವು ಅಸಹ್ಯ ಮತ್ತು ಅಪಮಾನವಾಗಿ ತೋರುತ್ತಿದೆ." ಆ ಧೀರ ಮಹಿಳೆ ಹೇಳಿದರು: "ಮಗನೇ ಆ ಬಗ್ಗೆ ವ್ಯಾಕುಲ ಪಡಬೇಕಾಗಿಲ್ಲ. ಕತ್ತು ಕೊಯ್ದು ಬಳಿಕ ಆಡಿನ ಚರ್ಮವನ್ನು ಸುಲಿಯುವುದರಿಂದ ಆ ಆಡಿಗೆ ಏನಾದೀತು?"

## ಹುತಾತ್ಮ

ಇಬ್ನ್ ಝುಬೈರ್‌ರು(ರ) ಮಾತೆಗೆ ವಿದಾಯ ಕೋರಿ ಮರಳಿದ ಬಳಿಕ ಪುನಃ ತನ್ನ ಸೇನೆಯನ್ನು ಸಜ್ಜುಗೊಳಿಸಿದರು. ವೀರಾವೇಶದಿಂದ ವೈರಿಗಳೊಡನೆ ಹೋರಾಡ ಲಾರಂಭಿಸಿದರು. ಉಭಯ ಬಣಗಳು ವೀರಾವೇಶದಿಂದ ಹೋರಾಡಿದರು.

ಹೋರಾಟವು ಉತ್ತುಂಗಕ್ಕೇರಿದಾಗ ಓರ್ವ ಸಿರಿಯನ್ ಯೋಧನು ಅಬ್ದುಲ್ಲಾ ಬಿನ್ ಝುಬೈರ್‌ರ(ರ) ನೇರಕ್ಕೆ ದೊಡ್ಡ ಕಲ್ಲೊಂದನ್ನು ಬೀಸಿ ಎಸೆದನು. ಅದು ನೇರವಾಗಿ ಇಬ್ನ್ ಝುಬೈರ್‌ರ(ರ) ತಲೆಗೆ ಬಡಿಯಿತು. ಅಷ್ಟರಲ್ಲಿ ಅವರು ಕುಸಿದು ಬಿದ್ದರು. ರಕ್ತವು ಧಾರಾಕಾರವಾಗಿ ಹರಿಯಿತು. ಸ್ವಲ್ಪ ಹೊತ್ತಿನ ಬಳಿಕ ವೈರಿಗಳ ಗುಂಪೊಂದು ಅವರನ್ನು ಸುತ್ತುವರಿದು ಅವರ ರುಂಡವನ್ನು ದೇಹದಿಂದ ಬೇರ್ಪಡಿಸಿತು. [ಇನ್ನಾಲಿಲ್ಲಾಃ] ಹಲವು ವರ್ಷಗಳ ಕಾಲ ಸತ್ಯದ ಧ್ವಜವನ್ನು ಎತ್ತಿ ಹಿಡಿದಿದ್ದ ಆ ಉಜ್ವಲ ತಾರೆಯು ಲೋಕದಿಂದ ಮಾಯವಾಯಿತು. ಹುತಾತ್ಮರಾಗುವಾಗ ಅವರಿಗೆ 72 ವರ್ಷ ವಯಸ್ಸಾಗಿತ್ತು.

ಇಬ್ನ್ ಝುಬೈರ್‌ರ(ರ) ಮೃತ ದೇಹದೊಡನೆ ಹಜ್ಜಾಜ್ ಹೀನಾಯವಾಗಿ ವರ್ತಿಸಿದನು. ಆ ಕಳೇಬರವನ್ನು ಎಲ್ಲರೂ ಕಾಣುವಂತೆ ಒಂದು ಎತ್ತರದ ಸ್ಥಳದಲ್ಲಿ ನೇತಾಡಿಸಿದ್ದರು. ಹಲವು ದಿನಗಳ ಬಳಿಕ ಅದನ್ನು ಅವರ ಸಂಬಂಧಿಕರಿಗೆ ಬಿಟ್ಟು ಕೊಡಲಾಯಿತು.

## ವೈಶಿಷ್ಟ್ಯಗಳು

ಇಬ್ನ್ ಝುಬೈರ್‌ರ(ರ) ವಾಕ್ಚಾತುರ್ಯ, ಶೌರ್ಯ ಮತ್ತು ಆರಾಧನೆ ಗಳನ್ನು ಶ್ಲಾಘಿಸಿದ ಹಲವು ಹದೀಸ್‌ಗಳು ವರದಿಯಾಗಿವೆ. ಉಸ್ಮಾನ್ ಬಿನ್ ಅಬೂತಲ್ಹಾ(ರ) ಹೀಗೆ ಹೇಳಿದ್ದಾರೆ: ಆರಾಧನೆ, ಶೌರ್ಯ ಮತ್ತು ವಾಕ್ಚಾತುರ್ಯ ದಲ್ಲಿ ಇಬ್ನ್ ಝುಬೈರ್‌ರಿಗೆ(ರ) ಸಾಟಿಯಾದವರು ಯಾರೂ ಇಲ್ಲ.

ಧರ್ಮ ಮತ್ತು ಲೌಕಿಕತೆಗಳು ಸಮ್ಮಿಳಿತವಾಗಲಾರದೆಂದು ಭಾವಿಸುವವರು ಈ ಇತಿಹಾಸ ಪುರುಷನ ಜೀವನವನ್ನು ಅಗತ್ಯವಾಗಿ ಪರಿಶೀಲಿಸಬೇಕು. ಈ ಲೋಕದೊಂದಿಗೆ ತೀರಾ ಸಂಬಂಧವಿಲ್ಲದಂತಹ ಉದಾತ್ತ ಜೀವನವನ್ನು ಅವರು ಪಾಲಿಸಿದರು. ಅಮ್ರ್ ಬಿನ್ ಕೈಸ್ ಹೀಗೆ ಹೇಳಿದ್ದಾರೆ: "ಇಬ್ನ್ ಝುಬೈರ್‌ರ(ರ) ಲೌಕಿಕ ವ್ಯವಹಾರಗಳನ್ನು ನೋಡಿದರೆ, ಅವರಿಗೆ ಅಲ್ಲಾಹನೊಂದಿಗೆ ಯಾವ ಸಂಬಂಧವೂ ಇಲ್ಲದಂತೆ ತೋರುತ್ತಿತ್ತು. ಹಾಗೆಯೇ ಅವರ ಪಾರತ್ರಿಕ ಕಟ್ಟುಪಾಡುಗಳನ್ನು ನೋಡಿದರೆ, ಅವರಿಗೆ ಈ ಲೋಕದೊಂದಿಗೆ ಯಾವ ಸಂಬಂಧವೂ ಇಲ್ಲದಂತೆ ಭಾಸವಾಗುತ್ತಿತ್ತು."

ಆರಾಧನೆಗಳ ಬಗ್ಗೆ ಇಬ್ನ್ ಝುಬೈರ್(ರ) ತೋರಿದ ಉತ್ಸಾಹ ಮತ್ತು ನಿಷ್ಠೆಯು ಆದರ್ಶಪ್ರಾಯವಾಗಿದೆ. ಆ ಕುರಿತು ಇಬ್ನ್ ಅಬ್ಬಾಸ್‌ರು ಹೀಗೆಂದರು: "ಪ್ರವಾದಿವರ್ಯರ(ಸ) ನಮಾಝನ್ನು ನೋಡಬಯಸುವವರು ಇಬ್ನ್ ಝುಬೈರ್‌ರ(ರ) ನಮಾಝನ್ನು ನೋಡಿ ತಿಳಿಯಲಿ. ಅವರಿಗೆ ಮಸೀದಿಯೊಂದಿಗಿದ್ದ ಅವಿನಾಭಾವ ಸಂಬಂಧದಿಂದಾಗಿ ಅವರನ್ನು 'ಹಮಾಮತುಲ್ ಮಸ್ಜಿದ್' (ಮಸೀದಿಯ ಪಾರಿವಾಳ) ಎಂದು ಕರೆಯಲಾಗುತ್ತಿತ್ತು.

ನಮಾಝ್‌ನಂತೆಯೇ ಉಪವಾಸ ಆಚರಣೆಯಲ್ಲಿಯೂ ಇಬ್ನ್ ಝುಬೈರ್‌ರು(ರ) ನಿಷ್ಠಾವಂತರಾಗಿದ್ದರು. ಅವರು ಪ್ರತೀ ಸೋಮವಾರ ಉಪವಾಸ ಆಚರಿಸುತ್ತಿದ್ದರು.

ಅವರು ಹಲವು ಬಾರಿ ಹಜ್ಜ್ ನಿರ್ವಹಿಸಿದ್ದಾರೆ. ಅದನ್ನು ಅವರು ತಪ್ಪಿಸಿಕೊಳ್ಳುತ್ತಿರಲಿಲ್ಲ. ಒಮ್ಮೆ ಅತಿವೃಷ್ಟಿಯಿಂದ ಪವಿತ್ರ ಹರಮ್ ಜಲಾವೃತ್ತವಾದಾಗ ಅವರು ಈಜಾಡಿ ತವಾಫ್(ಪ್ರದಕ್ಷಿಣೆ) ಮಾಡಿದ್ದಾರೆಂದು ಚರಿತ್ರೆಯಲ್ಲಿ ಉಲ್ಲೇಖಿಸಲ್ಪಟ್ಟಿದೆ.

***

# ಹ. ಅಬೂ ಉಬೈದಃ(ರ)

'ಅಮೀನುಲ್ ಉಮ್ಮತ್' ಎಂಬ ಪ್ರಶಂಸೆಗೆ ಪಾತ್ರರಾದ ಅಬೂ ಉಬೈದಃ ಬಿನ್ ಜರ್ರಾಹ್‌ರು(ರ) ಇಸ್ಲಾಮಿನ ಉನ್ನತಿ ಮತ್ತು ಬೆಳವಣಿಗೆಗಾಗಿ ಅನೇಕ ತ್ಯಾಗ ಬಲಿದಾನಗಳನ್ನು ನೀಡಿದ ಪ್ರಖ್ಯಾತ ಸಹಾಬಿಗಳಲ್ಲಿ ಅಗ್ರಗಣ್ಯ ರಾಗಿದ್ದಾರೆ. ನಿಷ್ಕಳಂಕ ವಿಶ್ವಾಸಿ, ಅದ್ವಿತೀಯ ಪರಾಕ್ರಮಿ ಮತ್ತು ಸಮರ್ಥ ಸೇನಾ ನಾಯಕರೆಂಬ ನೆಲೆಯಲ್ಲಿ ಅವರ ಹೆಸರು ಅಜರಾಮರವಾಗಿದೆ. ಈ ವಿಶಿಷ್ಟ ಗುಣ ಸಂಪನ್ನತೆಯಿಂದಾಗಿಯೇ ಜೀವನಾವಧಿಯಲ್ಲಿಯೇ ಅವರನ್ನು ಪ್ರವಾದಿವರ್ಯರು(ಸ) ಸ್ವರ್ಗದ ಹಕ್ಕುದಾರರೆಂದು ಘೋಷಿಸಿದ್ದರು.

## ಇಸ್ಲಾಮ್ ಸ್ವೀಕಾರ

ಹ.ಅಬೂ ಉಬೈದಃ ಮತ್ತು ಹ.ಅಬೂಬಕರ್‌ರು(ರ) ಮೊದಲೇ ಸ್ನೇಹಿತ ರಾಗಿದ್ದರು. ತನ್ಮಧ್ಯೆ ಪ್ರವಾದಿಯವರು(ಸ) ತಮ್ಮ ಧರ್ಮ ಪ್ರಚಾರವನ್ನು ಆರಂಭಿಸಿದರು. ಸಿದ್ದೀಕುಲ್ ಅಕ್ಬರ್‌ರು(ರ), ಪ್ರವಾದಿಯವರ(ಸ) ಉಪದೇಶವನ್ನು ಆಲಿಸಿದ ಕೂಡಲೇ ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಮಾತ್ರವಲ್ಲ, ತನ್ನ ಆದರ್ಶ ಸಿದ್ಧಾಂತದೆಡೆಗೆ ಮಿತ್ರರನ್ನೂ ಬಂಧುಗಳನ್ನೂ ಆಮಂತ್ರಿಸಿದರು. ಈ ಪ್ರಚಾರವು ಅವರ ಸ್ನೇಹಿತರ ಮೇಲೆ ಉತ್ತಮ ಪರಿಣಾಮ ಬೀರಿತು. ಹ. ಝುಬೈರ್, ಹ.ತಲ್ಹಾ, ಹ.ಅಬ್ದುರ್ರಹ್ಮಾನ್ ಬಿನ್ ಔಫ್, ಹ.ಸಅದ್ ಬಿನ್ ಅಬೀ ವಕ್ಕಾಸ್, ಹ.ಅಬೂ ಉಬೈದಃಬಿನ್ ಜರ್ರಾಹ್(ರ) ಮುಂತಾದ ಮಹಾನುಭಾವರೆಲ್ಲರೂ ಅಬೂಬಕರ್‌ರ(ರ) ಪ್ರಚಾರದ ನಿಮಿತ್ತವೇ ಇಸ್ಲಾಮಿಗೆ ಒಲಿದರು. ವೈರಿಗಳ ಹಿಂಸೆಯು ಮಿತಿ ಮೀರಿದಾಗ ಪ್ರವಾದಿಯವರ(ಸ) ಆದೇಶದಂತೆ ಹ. ಅಬೂ ಉಬೈದಾರು(ರ) ಎರಡು ಬಾರಿ ಅಬಿಸೀನಿಯಾಕ್ಕೆ ವಲಸೆ ಹೋದರು. ಕೊನೆಗೆ ಅವರು ಇತರ ಮುಸ್ಲಿಮರೊಂದಿಗೆ ಮದೀನಾಕ್ಕೆ ತೆರಳಿದರು.

## ತಂದೆ ಮತ್ತು ಮಗನ ಕಾಳಗ

ಇಸ್ಲಾಮಿ ಇತಿಹಾಸದಲ್ಲಿ ಬದ್ರ್ ಯುದ್ಧವು ಅತಿ ಪ್ರಾಮುಖ್ಯವಾಗಿದೆ. ಅದು ಮುಸ್ಲಿಮರಿಗೆ ಮಹಾ ಸತ್ವಪರೀಕ್ಷೆಯಾಗಿತ್ತು. ಏಕೆಂದರೆ ಅವರು ತಮ್ಮ ಆದರ್ಶ

ವಿಶ್ವಾಸಗಳ ಸಂರಕ್ಷಣೆಗಾಗಿ ಸಂಬಂಧಿಕರ ವಿರುದ್ಧ ಖಡ್ಗವೆತ್ತಬೇಕಾಯಿತು! ಮಗನು ಮುಸ್ಲಿಮರ ಕಡೆಯಲ್ಲಿದ್ದರೆ ತಂದೆಯು ವೈರಿಗಳ ಕಡೆಯಲ್ಲಿರುತ್ತಿದ್ದರು. ಅಣ್ಣನು ಮುಸ್ಲಿಮ್ ಯೋಧನಾಗಿದ್ದರೆ ತಮ್ಮನು ವಿರೋಧಿ ಬಣದಲ್ಲಿರುತ್ತಿದ್ದನು. ಇದು ಬದ್ರ್ ಯುದ್ಧದಲ್ಲಿ ನಮಗೆ ಸ್ಪಷ್ಟವಾಗಿ ಕಂಡು ಬರುತ್ತದೆ.

ಹ.ಅಬೂ ಉಬೈದಾರು(ರ) ಬದ್ರ್‌ನಲ್ಲಿ ಶತ್ರುಗಳನ್ನು ಸದೆಬಡಿಯುತ್ತಾ ಮುನ್ನುಗ್ಗುತ್ತಿದ್ದರು. ಆಕಸ್ಮಿಕವಾಗಿ ತನ್ನ ತಂದೆಯು ವೈರಿ ಬಣದಲ್ಲಿ ಹೋರಾಡುತ್ತಿರುವುದನ್ನು ಅಬೂ ಉಬೈದಃ(ರ) ನೋಡಿದರು. ತಂದೆಯ ಭೀಕರ ದಾಳಿಯು ಅವರನ್ನು ತಲ್ಲಣಗೊಳಿಸಿತು. ಅವರ ಹೃದಯದಲ್ಲಿ ಪಿತೃಪ್ರೇಮ ಮತ್ತು ಆದರ್ಶ ಪ್ರೇಮಗಳ ನಡುವೆ ಘೋರ ಸಂಘರ್ಷವೇ ನಡೆಯಿತು. ಕಟ್ಟಕಡೆಗೆ ಅವರು ಆದರ್ಶವನ್ನೇ ಬಲವಾಗಿ ಅಪ್ಪಿಕೊಂಡರು. ಆ ಹಾದಿಯಲ್ಲಿರುವ ಎಲ್ಲ ಅಡ್ಡಿಗಳನ್ನೂ ತೃಣೀಕರಿಸಿದರು. ಅವರು ಕ್ಷಣ ಮಾತ್ರವೂ ತಡವರಿಸಲಿಲ್ಲ. ತನ್ನ ಖಡ್ಗವನ್ನು ಝಳಪಿಸುತ್ತಾ ತಂದೆಯತ್ತ ಧಾವಿಸಿದರು. ಒಂದೇ ಏಟಿಗೆ ಅವರ ಕಥೆ ಮುಗಿಯಿತು. ಇಂತಹ ಹೃದಯಸ್ಪರ್ಶಿ ಹಿನ್ನೆಲೆಗಳನ್ನು ಸೂಚಿಸುತ್ತಾ ಅಲ್ಲಾಹನು ಹೇಳಿರುವುದನ್ನು ನೋಡಿರಿ:

"ಅಲ್ಲಾಹ್ ಮತ್ತು ಅಂತ್ಯ ದಿನದಲ್ಲಿ ವಿಶ್ವಾಸವಿರಿಸುವ ಜನತೆಯು ಅಲ್ಲಾಹ್ ಮತ್ತು ಆತನ ಪ್ರವಾದಿಯನ್ನು ವಿರೋಧಿಸುವವರನ್ನು ಪ್ರೀತಿಸಲಾರರು. ಅವರು ತಂದೆಯಾಗಿರಲಿ, ಮಕ್ಕಳಾಗಿರಲಿ ಅಥವಾ ಸಹೋದರ ಯಾ ಬಂಧು ಮಿತ್ರಾದಿಗಳೇ ಆಗಿರಲಿ, ಅವರ ಹೃದಯಗಳಲ್ಲಿ ಅಲ್ಲಾಹನು ವಿಶ್ವಾಸವನ್ನು ದೃಢಗೊಳಿಸಿದ್ದಾನೆ. ತನ್ನ ಆತ್ಮ ಚೈತನ್ಯದಿಂದ ಅವರನ್ನು ಪ್ರಬಲಗೊಳಿಸಿರುತ್ತಾನೆ. ಆತನು ಅವರನ್ನು ತಳಭಾಗದಲ್ಲಿ ನದಿಗಳು ಹರಿಯುವ ತೋಟಗಳಲ್ಲಿ ಸದಾ ವಾಸಗೊಳಿಸುವನು. ಅಲ್ಲಾಹನು ಅವರ ಬಗ್ಗೆ ಮತ್ತು ಅವರು ಅಲ್ಲಾಹನ ಬಗ್ಗೆ ಸಂಪೂರ್ಣ ಸಂತೃಪ್ತ ರಾಗಿದ್ದಾರೆ. ಅವರು ಅಲ್ಲಾಹನ ಪಕ್ಷದಲ್ಲಿರುವವರು. ತಿಳಿದಿರಲಿ! ನಿಶ್ಚಯವಾಗಿಯೂ ಅಲ್ಲಾಹನ ಪಕ್ಷವೇ ವಿಜಯ ಹೊಂದುವುದು." (ಅಲ್ ಮುಜಾದಿಲಃ 22)

## ಯುದ್ಧ ನೈಪುಣ್ಯ

ಇಸ್ಲಾಮಿನ ಅನೇಕ ಹೋರಾಟಗಳಲ್ಲಿ ಅಬೂ ಉಬೈದಃ(ರ) ಶ್ಲಾಘನೀಯ ಪಾತ್ರ ವಹಿಸಿದ್ದಾರೆ. ಉಹುದ್ ಯುದ್ಧದಲ್ಲಿ ಅವರು ತೋರಿದ ಸಾಹಸವು ಧೀರೋದ್ಧಾತ್ತವಾಗಿದೆ. ಈ ಯುದ್ಧದಲ್ಲಿ ಪ್ರವಾದಿಯವರನ್ನು(ಸ) ಮುಗಿಸಿ ಬಿಡಲು ವೈರಿಗಳು ಅನೇಕ ಸಂಚುಗಳನ್ನು ಹೂಡಿದ್ದರು. ಆದ್ದರಿಂದ ಪ್ರವಾದಿಯವರ(ಸ) ಸುತ್ತಲೂ ವೀರ ಸಹಾಬಿಗಳು ವ್ಯೂಹ ರಚಿಸಿದರು. ಆದರೆ ಈ ಎಲ್ಲ ಮುಂಜಾಗ್ರತೆ ಯಿದ್ದರೂ ದೌರ್ಭಾಗ್ಯವಶಾತ್ ಇಬ್ನ್ ಕಮಿಅತ್ ಎಂಬೋರ್ವ ವೈರಿ ಸೈನಿಕನ

ಖಡ್ಗ ಪ್ರಹಾರದಿಂದ ಪ್ರವಾದಿಯವರ ಹಣೆಗೆ ಶಿರಸ್ತ್ರಾಣದ ಮೊಳೆಗಳು ತಲೆಗೆ ನಾಟಿದವು. ಆ ವೇಳೆ ಅಬೂ ಉಬೈದಃ(ರ) ಹತ್ತಿರವೇ ಇದ್ದರು. ಅವರು ಓಡಿ ಬಂದು ಹಲ್ಲಿನಿಂದ ಕಚ್ಚಿ ಅದನ್ನು ಕಿತ್ತು ಹಾಕಿದರು. ಇದರಿಂದ ಅವರ ಎರಡು ಹಲ್ಲುಗಳು ಉದುರಿದವು. ಅದನ್ನು ಕಚ್ಚಿ ಎಸೆದ ಸಂತೋಷದಿಂದ ಅವರಿಗೆ ಹಲ್ಲು ಕಿತ್ತು ಹೋದ ನೋವು ತಿಳಿಯಲಿಲ್ಲವಂತೆ.

ಅವರೋರ್ವ ಸಮರ್ಥ ಯುದ್ಧ ಪ್ರವೀಣರಾಗಿದ್ದರು. ಪ್ರವಾದಿಯ(ಸ) ಕಾಲದಲ್ಲಿಯೇ ಅವರು ಅನೇಕ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹ. ಅಬೂಬಕರ್ ಮತ್ತು ಉಮರ್‌ರ(ರ) ಆಡಳಿತ ಕಾಲದಲ್ಲಿ ನಡೆದ ಹಲವು ಪ್ರಮುಖ ಯುದ್ಧಗಳ ನಾಯಕತ್ವವನ್ನು ಅವರು ಪ್ರಶಂಸಾರ್ಹವಾಗಿ ನಿರ್ವಹಿಸಿದ್ದರು. ಯರ್ಮೂಕ್ ಯುದ್ಧವು ಅವುಗಳಲ್ಲೊಂದು. ಅವುಗಳಲ್ಲಿ ಅಬೂ ಉಬೈದಾರ(ರ) ಯುದ್ಧ ತಂತ್ರ ಮತ್ತು ಶೌರ್ಯವು ಎದ್ದು ತೋರುತ್ತದೆ.

ಹ. ಅಬೂ ಉಬೈದಾರ(ರ) ಕೈಕೆಳಗಿನ ಇಸ್ಲಾಮೀ ಸೇನೆಯು ಕ್ರೈಸ್ತ ಸೇನೆಗಳನ್ನು ದಯನೀಯವಾಗಿ ಸೋಲಿಸಿ ಮುನ್ನುಗ್ಗುತ್ತಿದ್ದಂತಹ ಸಂದರ್ಭ. ಇಸ್ಲಾಮೀ ಸೇನೆಯು ರೋಮನ್ ಚಕ್ರವರ್ತಿಯಾಗಿದ್ದ ಹಿರ್ಕಲ್‌ನ(ಹರ್ಕೂಲಸ್) ಸಾಮ್ರಾಜ್ಯವನ್ನು ಪ್ರವೇಶಿಸಿದಾಗ, ಕ್ರೈಸ್ತ ರಾಷ್ಟ್ರಗಳೆಲ್ಲವೂ ಒಗ್ಗಟ್ಟಿನಿಂದ ಮುಸ್ಲಿಮರ ವಿರುದ್ಧ ಹೋರಾಡಿ, ತಮ್ಮ ಸಾಮ್ರಾಜ್ಯದಿಂದ ಹೊಡೆದೋಡಿಸುವ ಪ್ರತಿಜ್ಞೆಯನ್ನು ಮಾಡಿರುವರೆಂಬ ಸುದ್ದಿಯು ಮುಸ್ಲಿಮರ ಸೇನಾ ನಾಯಕರಾಗಿದ್ದ ಅಬೂ ಉಬೈದಾರಿಗೆ(ರ) ತಲುಪಿತು. ತಕ್ಷಣವೇ ಅವರು ತಮ್ಮ ಹಿರಿಯ ಅಧಿಕಾರಿಗಳೆಲ್ಲರನ್ನು ಕರೆಸಿ ಸ್ಫೂರ್ತಿದಾಯಕ ಭಾಷಣ ಮಾಡಿದರು. ರೋಮನ್ ಸೇನೆಯನ್ನು ಎದುರಿಸುವ ಪ್ರಾಯೋಗಿಕ ಮತ್ತು ತಂತ್ರಬದ್ಧ ಕಾರ್ಯಕ್ರಮಗಳ ಬಗ್ಗೆ ಅವರೊಡನೆ ಸಮಾಲೋಚಿಸಿದರು. ಅವರು ನಾನಾ ರೀತಿಯ ಅಭಿಪ್ರಾಯಗಳನ್ನು ನೀಡಿದ ಬಳಿಕ ಅಬೂ ಉಬೈದಃ(ರ) ಹೀಗೆಂದರು: "ಹಿಮ್ಮ್‌ಸ್‌ನವರೊಂದಿಗೆ ನಾವು ಮಾಡಿರುವ ಒಪ್ಪಂದವನ್ನು ಉಲ್ಲಂಘಿಸಿ ಅವರನ್ನು ಅಲ್ಲಿಂದ ಹೊರ ಹಾಕಬೇಕು." ಹಿಮ್ಮ್‌ಸ್‌ನವರು ಜಿಝಿಯಾವನ್ನು (ರಕ್ಷಣಾ ಶುಲ್ಕ) ನೀಡುವೆವೆಂದು ಹೇಳಿ ಮುಸ್ಲಿಮರಿಗೆ ಶರಣಾಗಿದ್ದರು. ಆದರೆ ಶುರಹ್‌ಬೀಲ್ ಎಂಬೋರ್ವರು ಈ ಅಭಿಪ್ರಾಯವನ್ನು ಬಲವಾಗಿ ಖಂಡಿಸಿದ್ದರು. ಅವರು ಹೀಗೆಂದರು: "ಓ ನಮ್ಮ ನಾಯಕರೇ! ನಾವು ಮಾಡಿಕೊಂಡಿರುವ ಒಪ್ಪಂದದ ಉಲ್ಲಂಘನೆಯು ಮಹಾ ಅಪರಾಧವೆಂಬುದರಲ್ಲಿ ಸಂಶಯವಿಲ್ಲ. ನಾವು ಅವರಿಂದ ಜಿಝಿಯಾ ಸಂಗ್ರಹಿಸುತ್ತಿರುವುದರಿಂದ ಅವರ ರಕ್ಷಣೆಯ ಹೊಣೆಯು ನಮ್ಮ ಕರ್ತವ್ಯವಾಗಿದೆ."

ಅಮೀನುಲ್ ಉಮ್ಮತ್‌ರು ತಮ್ಮ ಅಭಿಪ್ರಾಯವನ್ನು ತಕ್ಷಣವೇ ತಿದ್ದಿಕೊಂಡರು. ಮಾತ್ರವಲ್ಲ ಅವರಿಂದ ಸಂಗ್ರಹಿಸಿರುವ ಜಿಝಿಯಾದ ಹಣವನ್ನು ಸಂಪೂರ್ಣವಾಗಿ ಮರಳಿಸುವಂತೆ ಆಜ್ಞಾಪಿಸಿದರು. ಜಿಝಿಯಾವನ್ನು ನಿಮ್ಮ ರಕ್ಷಣಾರ್ಥವಾಗಿ ಸಂಗ್ರಹಿಸಲಾಗಿತ್ತು. ಈಗ ನಿಮ್ಮ ರಕ್ಷಣೆಯ ಹೊಣೆ ವಹಿಸಲು ನಮಗೆ ಅಸಾಧ್ಯವಾಗಿರುವುದರಿಂದ ನಮಗೆ ಅದರ ಯಾವ ಹಕ್ಕೂ ಇಲ್ಲ ಎಂದು ಅವರು ತಿಳಿಯಪಡಿಸಿದರು. ಮುಸ್ಲಿಮರ ಸತ್ಯ ಮತ್ತು ನ್ಯಾಯ ನಿಷ್ಠೆಯನ್ನು ನೋಡಿ ಹಿಮ್ಮ್‌ನ ಕ್ರೈಸ್ತರಿಗೆ ಅಚ್ಚರಿಯಾಯಿತು. ಮುಸ್ಲಿಮರು ಅಲ್ಲಿಂದ ಹೊರಟಾಗ ಅವರು ಕಣ್ಣೀರು ಸುರಿಸಿದರು. ಅವರು ತಮಗರಿವಿಲ್ಲದೆಯೇ ಹೀಗೆಂದರು: "ನೀವು ಇನ್ನೊಮ್ಮೆ ಇಲ್ಲಿ ಬರಲು ದೇವನು ನೆರವಾಗಲಿ."

ರೋಮನರು ಭಾರೀ ಯುದ್ಧ ಸನ್ನಾಹದಿಂದ ಯರ್ಮೂಕ್‌ಗೆ ಹೊರಟಿದ್ದರು. ಇಸ್ಲಾಮನ್ನು ಶಾಶ್ವತವಾಗಿ ಅಳಿಸಿಬಿಡುವುದೇ ಅವರ ಯುದ್ಧ ಸನ್ನಾಹದ ಧ್ಯೇಯವಾಗಿತ್ತು. ರೋಮನರು ಮತ್ತು ಮುಸ್ಲಿಮರು ಘನ ಘೋರ ಯುದ್ಧ ಆರಂಭಿಸಿದರು. ಕೆಲವೇ ಗಂಟೆಗಳಲ್ಲಿ ರೋಮನ್ ಸೇನೆಯಲ್ಲಿ ಸೋಲಿನ ಲಕ್ಷಣಗಳು ಕಂಡು ಬಂದವು. ಮುಸ್ಲಿಮರ ಶೌರ್ಯ ಮತ್ತು ಬಿರುಸಿನ ದಾಳಿಯು ರೋಮನರನ್ನು ನಿಸ್ತೇಜ ಮತ್ತು ಹತಾಶಗೊಳಿಸಿತು. ಸೋಲಿನ ಭೀತಿ ಆವರಿಸಿದಾಗ ಸಂಧಾನಕ್ಕಾಗಿ ಅಬೂ ಉಬೈದಾರ(ರ) ಬಳಿಗೆ ಓರ್ವ ದೂತನನ್ನು ಕಳುಹಿಸಿದರು. ಸಂಭಾಷಣೆಯ ವೇಳೆ ಅಬೂ ಉಬೈದಾರ(ರ) ಸಭ್ಯ ವರ್ತನೆ ಮತ್ತು ಸದ್ಗುಣದಿಂದ ಆಕರ್ಷಿತನಾದ ಆ ದೂತನು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದನು.

ಸಂಧಾನ ಮಾತುಕತೆ ವಿಫಲವಾದುದರಿಂದ ಉಭಯತ್ರರೂ ಪುನಃ ಯುದ್ಧ ಆರಂಭಿಸಿದರು. ಕಟ್ಟಕಡೆಗೆ ರೋಮನರು ಮುಸ್ಲಿಮರ ಹೋರಾಟದಿಂದ ಸಂಪೂರ್ಣ ಸೋತು ಹೋದರು. ಒಂದು ಲಕ್ಷಕ್ಕೂ ಮಿಕ್ಕಿ ರೋಮನರು ಹತರಾಗಿರುವರೆಂದು ಅಂದಾಜಿಸಲಾಗಿದೆ. ಅಬೂ ಉಬೈದಾರ(ರ) ಸಮರ್ಥ ಯುದ್ಧ ತಂತ್ರದಿಂದ ಮುಸ್ಲಿಮರಿಗೆ ವಿಶಾಲ ಸಾಮ್ರಾಜ್ಯವೊಂದು ಲಭ್ಯವಾಯಿತು.

## ಪ್ರಚಾರಕ

ಅಬೂ ಉಬೈದಾರು(ರ) ಓರ್ವ ನಿಸ್ವಾರ್ಥ ಧರ್ಮ ಪ್ರಚಾರಕರಾಗಿದ್ದರು. ಧರ್ಮ ಪ್ರಚಾರದ ಪ್ರಾಮುಖ್ಯತೆಯನ್ನು ಅವರು ಚೆನ್ನಾಗಿ ಮನಗಂಡಿದ್ದರು. ಪ್ರವಾದಿವರ್ಯರು(ಸ) ಅವರನ್ನು ಧರ್ಮಪ್ರಚಾರಕ್ಕಾಗಿ ವಿವಿಧೆಡೆಗಳಿಗೆ ಕಳುಹಿಸಿದ್ದರು. ಹಿಜರಿ 9ರಲ್ಲಿ ನಜರಾನೀಯರ ಅಪೇಕ್ಷೆಯಂತೆ ಧರ್ಮ ಬೋಧನೆಗಾಗಿ ಅವರನ್ನು ನಿಯೋಗಿಸಿದ್ದರು. "ಇವರು ಸಮುದಾಯದ ನಂಬಿಗಸ್ಥನೆಂದೂ (ಅಮೀನುಲ್

ಉಮ್ಮತ್), ಆದ್ದರಿಂದ ಉತ್ತಮ ರೀತಿಯಲ್ಲಿ ವರ್ತಿಸಬೇಕೆಂದೂ ಆ ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ನಜ್ರಾನ್‌ನ ಮಂದಿಗೆ ಉಪದೇಶಿಸಿರುವುದು ಇಲ್ಲಿ ಉಲ್ಲೇಖಾರ್ಹವಾಗಿದೆ. ಅವರು ಎಲ್ಲರ ಗೌರವಕ್ಕೆ ಪಾತ್ರರಾಗಿದ್ದರು. ಪ್ರವಾದಿವರ್ಯರ(ಸ) ನಿಧನದ ಬಳಿಕ ಆಡಳಿತಾಧಿಕಾರವನ್ನು ಯಾರಿಗೆ ನೀಡಬೇಕೆಂಬ ಸಮಸ್ಯೆಯು ಉದ್ಭವಿಸಿತ್ತಲ್ಲವೇ? ಆ ಘನ ಜವಾಬ್ದಾರಿಕೆಯ ನಿರ್ವಹಣೆಗೆ ಹ. ಅಬೂಬಕರ್‌ರು(ರ) ಅಬೂ ಉಬೈದಾರ(ರ) ಹೆಸರನ್ನು ಸೂಚಿಸಿದರು. ಆದರೆ ಅಬೂ ಉಬೆದಾರು(ರ) ಆ ಹೊಣೆ ವಹಿಸಲಿಲ್ಲ. ಅವರು ಅಬೂಬಕರ್‌ರವರಿಗೆ(ರ) ಬೈಅತ್(ನಿಷ್ಠೆ) ಮಾಡಿದರು. ತರುವಾಯ ಮುಹಾಜಿರ್ ಮತ್ತು ಅನ್ಸಾರ್‌ಗಳೆಲ್ಲರೂ ಸಾಮೂಹಿಕವಾಗಿ ಬೈಅತ್ ಮಾಡಿದರು. ಇದರಿಂದ ಅಬೂಬಕರ್‌ರು(ರ) ಮುಸ್ಲಿಮ್ ಜಗತ್ತಿನ ಪ್ರಥಮ ಆಡಳಿತಾಧಿಕಾರಿಯಾದರು. "ಅಬೂ ಉಬೈದಾರು(ರ) ಇರುತ್ತಿದ್ದರೆ ಅವರನ್ನು ನಾನು ಖಲೀಫರಾಗಿ ಚುನಾಯಿಸುತ್ತಿದ್ದೆ" ಎಂದು ಉಮರ್‌ರು(ರ) ತನ್ನ ಅಂತ್ಯ ಕಾಲದಲ್ಲಿ ಹೇಳಿದ್ದರು.

## ವೈಶಿಷ್ಟ್ಯಗಳು

ಅಬೂ ಉಬೈದಾರು(ರ), ಸಿರಿಯಾದಲ್ಲಿ ಉಮರ್ ಫಾರೂಕ್(ರ) ನಡೆಸಿದ್ದ ಸುಧಾರಣಾ ಕಾರ್ಯಗಳ ರೂವಾರಿಯಾಗಿದ್ದರು. ಒಮ್ಮೆ ಅರೇಬಿಯಾದಲ್ಲಿ ತೀವ್ರ ಬರಗಾಲ ವ್ಯಾಪಿಸಿತು. ಈ ಸುದ್ದಿ ತಿಳಿದ ತಕ್ಷಣವೇ ಅಬೂ ಉಬೈದಃ(ರ) ದವಸಧಾನ್ಯಗಳನ್ನು ಹೇರಿದ್ದ 4000 ಒಂಟೆಗಳನ್ನು ಅರೇಬಿಯಾಕ್ಕೆ ಕಳುಹಿಸಿದರು. ತನ್ನಿಮಿತ್ತ ಹಸಿವಿನ ಬೇಗೆಯಿಂದ ತತ್ತರಿಸುತ್ತಿದ್ದ ಅರೇಬಿಯಾದಲ್ಲಿ ಸಮೃದ್ಧಿ ಮತ್ತು ನೆಮ್ಮದಿಗಳು ಲಾಸ್ಯವಾಡಿದುವು. ಇದು ಅವರ ಸ್ತುತ್ಯಾರ್ಹ ಸೇವೆಗಳಲ್ಲೊಂದಾಗಿದೆ.

ಜೀವನದಲ್ಲಿ ಅವರು ಅತ್ಯಂತ ಸರಳತೆಯನ್ನು ಮೈಗೂಡಿಸಿಕೊಂಡಿದ್ದರು. ಹಿಜರಿ 16ರಲ್ಲಿ ಖಲೀಫ ಉಮರ್‌ರು(ರ) ಸಿರಿಯಾಕ್ಕೆ ಭೇಟಿ ನೀಡಿದಾಗ ಆ ದಿಗ್ವಿಜಯಶಾಲಿಯ ಡೇರೆಯಲ್ಲಿ ಕಂಡ ದೃಶ್ಯವು ಅಚ್ಚರಿದಾಯಕವಾಗಿತ್ತು. ನೀರು ಶೇಖರಿಸಿಡುವ ಒಂದು ಚರ್ಮದ ಚೀಲ, ಒಂದು ಕಡಿವಾಣ, ಒಂದು ಅಡುಗೆ ಪಾತ್ರೆ, ಕೆಲವು ಒಣರೊಟ್ಟಿ ತುಣುಕುಗಳು. ಇವು ಅವರ 'ಸಂಪತ್ತು.'

## ಅತಿ ಉದಾರಿ

ಅವರು ಅತಿ ಉದಾರಿಯಾದ ದಾನಶೂರರಾಗಿದ್ದರು. ಶ್ರೀಮಂತರಾಗಿರದಿದ್ದರೂ ದಾನ ಧರ್ಮಗಳಲ್ಲಿ ಅವರು ಯಾರಿಂದಲೂ ಹಿಂದಿರಲಿಲ್ಲ. ಒಮ್ಮೆ ಉಮರ್‌ರು(ರ) ನಾನ್ನೂರು ದೀನಾರ್ ಮತ್ತು 4000

ದಿರ್ಹಮ್‌ಗಳಿರುವ ಹಣದ ಚೀಲವನ್ನು ಅವರಿಗೆ ಕಳುಹಿಸಿಕೊಟ್ಟರು. ಆದರೆ ಆ ಮಹಾ ಉದಾರಿಯು ಅದರಿಂದ ತನ್ನ ಸ್ವಂತಕ್ಕಾಗಿ ಒಂದು ಚಿಕ್ಕಾಸನ್ನೂ ತೆಗೆಯದೆ, ಎಲ್ಲವನ್ನೂ ತನ್ನ ಸೈನಿಕರಿಗೆ ಹಂಚಿದರು. ಈ ಸುದ್ದಿ ತಿಳಿದ ಉಮರ್‌ರು(ರ) ಆನಂದಬಾಷ್ಪ ಸುರಿಸುತ್ತಾ, ಇಂತಹ ಸಜ್ಜನರನ್ನು ಈ ಸಮುದಾಯಕ್ಕೆ ನೀಡಿರುವ ಅಲ್ಲಾಹನಿಗೆ ಸ್ತುತಿ ಎಂದರು.

## ಮರಣ

ಹಿಜರಿ 17ನೆಯ ವರ್ಷದಲ್ಲಿ ಸಿರಿಯಾ ಮತ್ತು ಇರಾಕ್‌ಗಳಲ್ಲಿ ಭೀಕರ ಸಾಂಕ್ರಾಮಿಕ ಸಿಡುಬು ರೋಗ ಹಬ್ಬಿತು. ಈ ಮಹಾ ಮಾರಿಯು ಅನೇಕ ಗಣ್ಯರ ಪ್ರಾಣಗಳನ್ನು ಅಪಹರಿಸಿತು. ದೌರ್ಭಾಗ್ಯವಶಾತ್, ಅಬೂ ಉಬೈದಾರೂ(ರ) ಈ ಮಹಾ ಗಂಡಾಂತರಕ್ಕೆ ಬಲಿಯಾದರು. ತುರ್ತು ಮಾತುಕತೆಗಾಗಿ ಕೂಡಲೇ ಮದೀನಾಕ್ಕೆ ಹೊರಟು ಬರಬೇಕೆಂದು ಉಮರ್‌ರು(ರ) ಅವರಿಗೆ ಪತ್ರ ಬರೆದಿದ್ದರು. ತನ್ನನ್ನು ಮದೀನಾಕ್ಕೆ ಆಮಂತ್ರಿಸುವುದರ ಉದ್ದೇಶವೇನೆಂದು ಅವರು ಚೆನ್ನಾಗಿ ಅರಿತಿದ್ದರು. ಆದ್ದರಿಂದ ಅವರು ಖಲೀಫರಿಗೆ ಈ ರೀತಿ ಉತ್ತರ ಬರೆದರು, "ಅಮೀರುಲ್ ಮೂಮಿನೀನ್, ತಾವು ನನ್ನನ್ನು ಅತ್ತ ಕರೆಯುತ್ತಿರುವುದರ ಕಾರಣವು ನನಗೆ ಚೆನ್ನಾಗಿ ತಿಳಿದಿದೆ. ಮರಣದಿಂದ ಪಾರಾಗಲು ಅಥವಾ ಪಾರುಗೊಳಿಸಲು ಯಾರಿಗೂ ಸಾಧ್ಯವಿಲ್ಲ. ಆದ್ದರಿಂದ ನನ್ನನ್ನು ಇಲ್ಲಿಯೇ ಜೀವಿಸಲು ಅನುಮತಿಸಿರಿ." ಕೊನೆಗೆ ಉಮರ್‌ರ(ರ) ಒತ್ತಾಯಕ್ಕೆ ಮಣಿದು ಅವರು ಜಾಬಿಯಾ ಎಂಬ ಸ್ಥಳಕ್ಕೆ ಹೋಗಿ ತಂಗಿದರು. ಅಲ್ಲಿ ಆ ಮಹಾ ಪುರುಷರು ಸಾಂಕ್ರಾಮಿಕ ರೋಗಕ್ಕೆ ಬಲಿಯಾಗಿ ಹಿಜರಿ 18ನೆಯ ವರ್ಷದಲ್ಲಿ ನಿಧನರಾದರು. ಮರಣ ವೇಳೆಯಲ್ಲಿ ಅವರಿಗೆ 58 ವರ್ಷ ವಯಸ್ಸಾಗಿತ್ತು.

***

# ಹ. ಅಬ್ದುಲ್ಲಾ ಬಿನ್ ಉಮರ್(ರ)

ಅಬ್ದುಲ್ಲಾ ಬಿನ್ ಉಮರ್‌ರು(ರ) ಇಸ್ಲಾಮಿನ ಪ್ರಗತಿ ಮತ್ತು ಉನ್ನತಿಗಾಗಿ ಮಹಾತ್ಯಾಗಗಳನ್ನರ್ಪಿಸಿದ ವಿಶ್ವವಿಖ್ಯಾತ ಹ.ಉಮರ್ ಫಾರೂಕ್‌ರ(ರ) ಸುಪುತ್ರ. ಮುಹಮ್ಮದ್(ಸ) ಪ್ರವಾದಿಯಾಗಿ ನೇಮಕಗೊಂಡ ದ್ವಿತೀಯ ವರ್ಷದಲ್ಲಿ ಇವರು ಜನಿಸಿದರು. ಸಂಪೂರ್ಣ ಪಾವನವಾದ ಇಸ್ಲಾಮೀ ವಾತಾವರಣದಲ್ಲಿ ಬೆಳೆದು ಬಂದರು. ಅವರ ಬಾಲ್ಯ ಕಾಲದಲ್ಲಿಯೇ ಕುಟುಂಬ ಸಂಬಂಧಿಕರೆಲ್ಲರೂ ಇಸ್ಲಾಮ್ ಸ್ವೀಕರಿಸಿದ್ದರು. ಇಂತಹ ಸೌಭಾಗ್ಯವಂತರು ಪ್ರವಾದಿಯ ಅನುಯಾಯಿಗಳಲ್ಲಿ ತೀರಾ ವಿರಳವೆಂದೇ ಹೇಳಬಹುದು.

## ಹಿಜ್ರತ್

ಮಕ್ಕಾದಲ್ಲಿ ಹಿಂಸಾಕೃತ್ಯಗಳು ತೀವ್ರಗೊಂಡಾಗ ಪ್ರವಾದಿ(ಸ) ಮತ್ತು ಅನುಚರರು ಮಕ್ಕಾದಿಂದ ಮದೀನಾಕ್ಕೆ ವಲಸೆ ಹೋದ ಘಟನೆಯು ಸುಪ್ರಸಿದ್ಧವಾಗಿದೆಯಷ್ಟೆ. ಹ. ಉಮರ್(ರ) ಕೂಡಾ ಕುಟುಂಬ ಸಮೇತ ಮದೀನಾಕ್ಕೆ ವಲಸೆ ಹೋದರು. ಅಂದು ಹ. ಅಬ್ದುಲ್ಲಾ ಬಿನ್ ಉಮರ್(ರ) 10 ವರ್ಷದ ಬಾಲಕರಾಗಿದ್ದರು.

ಮನೆಮಾರುಗಳನ್ನು ತೊರೆದು ಮದೀನಾಕ್ಕೆ ತೆರಳಿದ ಪ್ರವಾದಿ(ಸ) ಮತ್ತು ಅನುಚರರನ್ನು ವೈರಿಗಳು ನೆಮ್ಮದಿಯಿಂದಿರಲು ಬಿಡಲಿಲ್ಲ. ಅನಂತರ ಶಸ್ತ್ರ ಬಲ ದಿಂದ ಇಸ್ಲಾಮಿನ ಪ್ರವಾಹವನ್ನು ತಡೆಯುವ ಪ್ರಯತ್ನ ನಡೆಸಿದರು. ಹಿಜರಿ 2ನೇ ವರ್ಷದಲ್ಲಿ ಬದ್ರ್‌ನಲ್ಲಿ ನಡೆದ ಐತಿಹಾಸಿಕ ಯುದ್ಧವು ಅವುಗಳಲ್ಲೊಂದಾಗಿದೆ.

## ಹುತಾತ್ಮತೆಯ ಹಂಬಲ

ಹ. ಅಬ್ದುಲ್ಲಾ ಅಂದು ಪ್ರಾಪ್ತ ವಯಸ್ಕರಾಗಿರಲಿಲ್ಲ. ಆದರೂ ಇಸ್ಲಾಮಿನ ಉಳಿವು ಮತ್ತು ಶ್ರೇಯಸ್ಸಿಗಾಗಿ ತನ್ನ ಕೊನೆಯ ಬಿಂದು ರಕ್ತವನ್ನೂ ಬಲಿಯರ್ಪಿಸಿಯೇ ಸಿದ್ಧವೆಂಬ ಅದಮ್ಯ ಸ್ಫೂರ್ತಿಯು ಅವರಲ್ಲಿ ನೆಲೆಸಿತ್ತು. ಪ್ರವಾದಿವರ್ಯರು(ಸ) ಬದ್ರ್‌ಗೆ ಸೇನೆಯನ್ನು ಸಜ್ಜುಗೊಳಿಸುತ್ತಿರುವರೆಂಬ ವಾರ್ತೆಯು ಹ.ಅಬ್ದುಲ್ಲಾ ಬಿನ್ ಉಮರ್‌ರನ್ನು(ರ) ಆವೇಶಭರಿತಗೊಳಿಸಿತು. ಅವರು ಪ್ರವಾದಿಯವರ(ಸ) ಬಳಿ ತೆರಳಿ ಹೀಗೆಂದರು: ಪ್ರವಾದಿವರ್ಯರೇ! ಶೀಘ್ರದಲ್ಲಿಯೇ ಬದ್ರ್‌ಗೆ ತೆರಳಲಿರುವ ಮುಸ್ಲಿಮ್ ಯೋಧರೊಡನೆ ನನ್ನನ್ನೂ ಸೇರಿಸಿರಿ. ಪ್ರವಾದಿಯವರು(ಸ) ಅವರ ಇಸ್ಲಾಮೀ ಸ್ಫೂರ್ತಿಯನ್ನು ಬಹಳವಾಗಿ ಶ್ಲಾಘಿಸಿದರು. ಆದರೆ ಚಿಕ್ಕ ವಯಸ್ಸಿನ ಆ ಬಾಲಕನಿಗೆ

ಪ್ರವಾದಿಯವರು(ಸ) ಯುದ್ಧದ ಅನುಮತಿ ನೀಡಲಿಲ್ಲ. ಅಬ್ದುಲ್ಲಾ(ರ) ಅತ್ಯಂತ ನಿರಾಶೆಯಿಂದ ಮನೆಗೆ ಮರಳಿದರು.

ಮುಂದಿನ ಯುದ್ಧದಲ್ಲಿ ಭಾಗವಹಿಸಬಹುದೆಂಬ ನಿರೀಕ್ಷೆಯಿಂದ ತುಂಬಾ ಸಮಯ ನಿರಾಶರಾಗಿ ಕಾಲ ಕಳೆದರು. ಆ ವೇಳೆಗೆ ಉಹುದ್ ಯುದ್ಧ ಆರಂಭವಾಯಿತು. ಅಬ್ದುಲ್ಲಾರು(ರ) ಅದರ ಪೂರ್ವ ಸನ್ನಾಹಕ್ಕೆ ತೊಡಗಿದರು. ಈ ಬಾರಿ ಪ್ರವಾದಿವರ್ಯರು(ಸ) ಖಂಡಿತವಾಗಿಯೂ ತನ್ನನ್ನು ಸೇನೆಗೆ ಸೇರಿಸುವರೆಂಬ ನಂಬಿಕೆ ಯಿಂದ ಅವರು ಪ್ರವಾದಿ(ಸ) ಬಳಿಗೆ ಹೋದರು. ಆದರೆ ದೌರ್ಭಾಗ್ಯವಶಾತ್ ಅವರಿಗೆ ಅಂದು 14 ವರ್ಷ ಪ್ರಾಯವಾಗಿತ್ತು. ಪ್ರವಾದಿವರ್ಯರು(ಸ) ಈ ಬಾರಿಯೂ ಸೇನೆಗೆ ಸೇರಿಸದೆ ಅವರನ್ನು ಮರಳಿಸಿದರು.

ಹಿಜರಿ 5ನೇ ವರ್ಷದಲ್ಲಿ ನಡೆದ ಖಂದಕ್ ಯುದ್ಧದಲ್ಲಿ ಹ.ಅಬ್ದುಲ್ಲಾರು(ರ) ಪ್ರಥಮವಾಗಿ ಭಾಗವಹಿಸಿದ್ದರು. ಅಂದು ಅವರಿಗೆ 15 ವರ್ಷ ವಯಸ್ಸಾಗಿತ್ತು. ಆ ಬಳಿಕ ಖೈಬರ್, ವಿಜಯ ಮಕ್ಕಾ, ಹುನೈನ್, ತಬೂಕ್ ಮುಂತಾದ ಎಲ್ಲಾ ಪ್ರಮುಖ ಯುದ್ಧಗಳಲ್ಲಿಯೂ ಅವರು ಸಕ್ರಿಯವಾಗಿ ಭಾಗವಹಿಸಿದರು.

## ಪ್ರವಾದಿ ಪ್ರೇಮ

ಪ್ರವಾದಿ ಪ್ರೇಮವು ಈಮಾನಿನ ಜೀವನಾಡಿಯಷ್ಟೇ- ಪ್ರವಾದಿ ಮುಹಮ್ಮದ್‌ರನ್ನು(ಸ) ಜಗತ್ತಿನಲ್ಲಿರುವ ಎಲ್ಲಕ್ಕಿಂತ ಹೆಚ್ಚಾಗಿ ಪ್ರೀತಿಸದವರು ಎಂದೆಂದಿಗೂ ವಿಶ್ವಾಸಿಗಳಾಗುವುದಿಲ್ಲ- ಹ.ಅಬ್ದುಲ್ಲಾರು(ರ) ಪ್ರವಾದಿ ಪ್ರೇಮದ ಅತ್ಯುಜ್ವಲ ಮಾದರಿಯಾಗಿದ್ದರು. ಪ್ರವಾದಿಯವರ(ಸ) ಮರಣದಿಂದಾಗಿ ಸಹಾಬಿಗಳ ಹೃದಯಗಳು ಶೋಕ ತಪ್ತವಾದುವು. ಹ.ಅಬ್ದುಲ್ಲಾರು(ರ) ಪ್ರವಾದಿವರ್ಯರ(ಸ) ನಿಷ್ಕಳಂಕ ವರ್ತನೆ ಮತ್ತು ಗುಣ ನಡತೆಗಳನ್ನು ಸ್ಮರಿಸಿ ಹಲವು ಬಾರಿ ಕಣ್ಣೀರು ಸುರಿಸಿದ್ದರು. ಯಾತ್ರೆಯಿಂದ ಮರಳಿದಾಗ ಅವರು ಪ್ರಥಮವಾಗಿ ಪ್ರವಾದಿಯವರ(ಸ) ಪವಿತ್ರ ಸಮಾಧಿಯನ್ನು ಸಂದರ್ಶಿಸುತ್ತಿದ್ದರು.

ಪ್ರವಾದಿ ಪ್ರೇಮದಂತೆಯೇ ಅವರ ಆಜ್ಞೆಗಳನ್ನು ಬಹಳ ನಿಷ್ಠೆಯಿಂದ ಜೀವನದಲ್ಲಿ ಪಾಲಿಸುತ್ತಿದ್ದರು. ಹ.ಅಬ್ದುಲ್ಲಾರು(ರ) ಪ್ರವಾದಿವರ್ಯರನ್ನು(ಸ) ಜೀವನದಲ್ಲಿ ನಿರಂತರ ಅನುಗಮಿಸಿದರು. ಜಾಬಿರ್‌ರು(ರ) ಅವರ ಕುರಿತು ಒಮ್ಮೆ ಜನರೊಡನೆ ಹೀಗೆ ಹೇಳಿದ್ದಾರೆ. ಪ್ರವಾದಿವರ್ಯರ(ಸ) ನಿಧನದ ಬಳಿಕ ಅಬ್ದುಲ್ಲಾರ(ರ) ಜೀವನದಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದು ಖಚಿತವಾಗಿ ಹೇಳಬಹುದು. ಮಾತ್ರವಲ್ಲ, ಅವರ ಕಾಲದಲ್ಲಿ ಜನರು ಹೀಗೆ ಪ್ರಾರ್ಥಿಸುತ್ತಿದ್ದರು. ಕರುಣಾಳುವಾಗಿರುವ ಅಲ್ಲಾಹನೇ! ಅಬ್ದುಲ್ಲಾರ(ರ) ಆಯುಷ್ಯವನ್ನು ದೀರ್ಘಗೊಳಿಸು! ಪ್ರವಾದಿಯ ಉತ್ಕೃಷ್ಟ ಮಾದರಿಗಳನ್ನು ಯಥಾವತ್ತಾಗಿ ನೋಡಿ ಕಲಿಯಲು ಕೇವಲ ಅವರು ಮಾತ್ರ ಇಂದು ನಮ್ಮ ಮಧ್ಯೆ ಉಳಿದಿದ್ದಾರೆ.

## ಔದಾರ್ಯ

ಹ.ಅಬ್ದುಲ್ಲಾ ಬಿನ್ ಉಮರ್‌ರ(ರ) ಗುಣ ವೈಶಿಷ್ಟ್ಯಗಳಲ್ಲಿ ದಾನ ಶೂರತೆಯು ಅನುಪಮವಾಗಿತ್ತು. ಅವರು ದೀನ ದಲಿತರೊಡನೆ ಅತ್ಯಂತ ಕರುಣೆ ಮತ್ತು ಪ್ರೀತಿಯಿಂದ ವರ್ತಿಸುತ್ತಿದ್ದರು. ಬಡವರ ಹಸಿವು ಮತ್ತು ನಿರಾಶ್ರಯದ ನಿವಾರಣೆಗೆ ಅವರು ನಿರಂತರ ಪ್ರಯತ್ನಿಸುತ್ತಿದ್ದರು. ಕೈಯಲ್ಲಿರುವುದೆಲ್ಲವನ್ನೂ ದಾನ ಮಾಡಿ ಬಿಡುತ್ತಿದ್ದರು. ಸಾವಿರಕ್ಕೂ ಮಿಕ್ಕ ಗುಲಾಮರನ್ನು ಅವರು ಸ್ವತಂತ್ರ ಗೊಳಿಸಿದ್ದಾರೆ. ಇದು ಅವರ ಉದಾರತೆಯ ಅತ್ಯುತ್ತಮ ಉದಾಹರಣೆಯಾಗಿದೆ.

ಬಡ ಬಗ್ಗರನ್ನು ಜತೆಯಲ್ಲಿ ಕುಳ್ಳಿರಿಸಿ ಆಹಾರ ಸೇವಿಸುವುದು ಅಬ್ದುಲ್ಲಾರ(ರ) ದಿನಚರಿಯಾಗಿತ್ತು. ತನ್ನ ಜೊತೆ ಊಟ ಮಾಡಲು ನಿರ್ಗತಿಕರು ದೊರೆಯದಿದ್ದರೆ ಅಂದು ಅವರು ಬರಿ ಹೊಟ್ಟೆಯಲ್ಲಿಯೇ ಮಲಗಿ ಬಿಡುತ್ತಿದ್ದರು. ಒಮ್ಮೆ ಅಬ್ದುಲ್ಲಾರಿಗೆ(ರ) ಮೀನು ತಿನ್ನುವ ಆಶೆಯಾಯಿತು. ಅವರ ಪತ್ನಿ ಸಫಿಯ್ಯಾರಿಗೆ ಈ ವಿಚಾರವು ಹೇಗೋ ತಿಳಿದು ಬಿಟ್ಟಿತು. ಅವರು ಒಂದು ದೊಡ್ಡ ಮೀನನ್ನು ತಂದು ಹುರಿದು ಪತಿಗೆ ಬಡಿಸಿದರು. ಅವರು ಅದನ್ನು ತಿನ್ನಲಿಕ್ಕಾಗಿ ಕೈ ಹಾಕಿದಾಗ ಹೊರಗಿನಿಂದ ಓರ್ವ ಭಿಕ್ಷುಕನ ಧ್ವನಿ ಕೇಳಿಸಿತು. ಅವರು ತಕ್ಷಣವೇ ಆ ಹುರಿದ ಮೀನನ್ನು ಸಂಪೂರ್ಣವಾಗಿ ಆತನಿಗೆ ನೀಡಿದರು. ಅವರ ಜೀವನದಲ್ಲಿ ಇಂತಹ ಔದಾರ್ಯದ ಘಟನೆಗಳು ಅನೇಕ ಸಿಗುತ್ತವೆ.

## ವಿನಯ

ಅವರು ಬಹಳ ಸೌಮ್ಯ ಸ್ವಭಾವಿ ಮತ್ತು ವಿನಯಶೀಲರಾಗಿದ್ದರು. ಅವರಲ್ಲಿ ಎಳ್ಳಷ್ಟೂ ಅಹಂಕಾರ ದರ್ಪಗಳಿರಲಿಲ್ಲ. ಒಮ್ಮೆ ಓರ್ವರು ಅವರ ಗುಣನಡತೆಗಳನ್ನು ಹೊಗಳುತ್ತಿರುವುದನ್ನು ಅವರು ಆಲಿಸಿದರು. ಅವರು ಕೋಪದಿಂದ ತಕ್ಷಣವೇ ಹೊಗಳಿದವನ ಬಾಯಿಗೆ ಮಣ್ಣು ಸುರಿದರು. ಅನಂತರ ಮುಖಸ್ತುತಿ ಮಾಡುವಾತನ ಬಾಯಿಗೆ ಮಣ್ಣು ಹಾಕುವಂತೆ ಪ್ರವಾದಿ(ಸ) ಹೇಳಿರುವರೆಂದು ತಿಳಿಸಿದರು.

ಒಮ್ಮೆ ಅವರಿಗೆ ಓರ್ವರು ಬೆಲೆ ಬಾಳುವ ಬಟ್ಟೆಗಳನ್ನು ನೀಡಿದರು. ಅವರು ಅದನ್ನು ಸಂತೋಷದಿಂದ ಮರಳಿಸಿದರು. ಆ ಬೆಲೆ ಬಾಳುವ ವಸ್ತುವನ್ನು ಧರಿಸಿದರೆ ನಾನು ಅಹಂಕಾರಿಯಾದೇನೆಂದು ಅವರು ಹೇಳಿದರು.

## ನಿರಾಡಂಬರ

ಪ್ರಸ್ತುತ ಸದ್ಗುಣಗಳಲ್ಲದೆ ಸರಳತೆಯು ಅವರ ಶ್ಲಾಘನೀಯ ಗುಣವಾಗಿದೆ. ಆ ಮಹಾಪುರುಷರು ಸರಳ ಸುಂದರವಾದ ಜೀವನ ನಡೆಸಿದರು. ಆಡಂಬರವನ್ನು ಅವರು ಕಿಂಚಿತ್ತೂ ಮೆಚ್ಚುತ್ತಿರಲಿಲ್ಲ. ಅವರ ನಿರಾಡಂಬರ ಜೀವನದ ಕುರಿತು ಮಿಹ್ರಾನ್(ರ) ಹೀಗೆ ಹೇಳಿದ್ದಾರೆ: "ಇಬ್ನ್ ಉಮರ್‌ರ(ರ) ಮನೆಯಲ್ಲಿರುವ ಎಲ್ಲ ವಸ್ತುಗಳನ್ನು

ಮಾರಿದರೆ 80 ದಿರ್ಹಮ್(200ರೂ)ಗಿಂತ ಹೆಚ್ಚು ದೊರೆಯುವುದು ಕಷ್ಟ." ಇಬ್ನ್ ಉಮರ್‌ರ(ರ) ಸರಳ ಜೀವನದ ಕುರಿತು ಇದಕ್ಕಿಂತ ಹೆಚ್ಚು ಇನ್ನೇನು ಹೇಳಲಿದೆ! ಹಲವೊಮ್ಮೆ ಅವರಿಗೆ ಆಹಾರ ಸೇವಿಸಲಿಕ್ಕೆ ಪಾತ್ರೆಯಿಲ್ಲದೇ ತೊಂದರೆಯಾಗುತ್ತಿತ್ತು.

## ಶೌರ್ಯ

ಅಬ್ದುಲ್ಲಾ ಬಿನ್ ಉಮರ್‌ರ(ರ) ಗುಣ ವೈಶಿಷ್ಟ್ಯಗಳನ್ನು ವಿವರಿಸುವಾಗ ಅವರ ದೇವಭಕ್ತಿ ಮತ್ತು ಪರಲೋಕ ಭಯವನ್ನು ಪ್ರಸ್ತಾಪಿಸದಿದ್ದರೆ ಅಪೂರ್ಣವಾದೀತು. ಅವರು ಜೀವನದ ಬಹುಭಾಗವನ್ನು ಆರಾಧನೆಯಲ್ಲಿಯೇ ಕಳೆದಿದ್ದಾರೆ. ರಾತ್ರಿ ಕೇವಲ ಸ್ವಲ್ಪ ಹೊತ್ತು ನಿದ್ರಿಸುತ್ತಿದ್ದರು. ಪರಲೋಕ ಭಯದಿಂದ ನಮಾಝ್‌ನ ವೇಳೆ ಕಂಪಿಸುತ್ತಿದ್ದರು. ಪರಲೋಕದ ಬಗ್ಗೆ ಆಲೋಚಿಸುವಾಗ ಕಣ್ಣೀರ ಕೋಡಿ ಹರಿಯುತ್ತಿತ್ತು. ಅವರ ಗಡ್ಡವು ಸದಾ ಕಣ್ಣೀರಿನಿಂದ ಒದ್ದೆಯಾಗಿರುತ್ತಿತ್ತು.

ಹ.ಅಬ್ದುಲ್ಲಾರ(ರ) ಶೌರ್ಯವು ಹಲವರ ಪ್ರಶಂಸೆಗೆ ಪಾತ್ರವಾಗಿದೆ. ಪ್ರವಾದಿಯವರ(ಸ) ಕಾಲದಲ್ಲಿ ನಡೆದ ಎಲ್ಲ ಯುದ್ಧಗಳಲ್ಲಿಯೂ ಅವರು ಅಸಾಮಾನ್ಯ ಶೌರ್ಯ ಪರಾಕ್ರಮಗಳನ್ನು ಪ್ರದರ್ಶಿಸಿದ್ದರು. ದುಷ್ಟ ಆಡಳಿತಗಾರನ ಮುಂದೆ ಸತ್ಯವನ್ನು ಬಹಿರಂಗವಾಗಿ ಹೇಳುವುದೇ ಅತೀ ದೊಡ್ಡ ಜಿಹಾದ್ ಆಗಿದೆ. ಹ. ಅಬ್ದುಲ್ಲಾ(ರ) ಈ ರಂಗದಲ್ಲಿ ಅತ್ಯುತ್ಕೃಷ್ಟ ಮಾದರಿಯಾಗಿದ್ದಾರೆ. ದುರಾಡಳಿತ ಗಾರರು ಯಾರೇ ಆಗಿದ್ದರೂ ನಿಸ್ಸಂಕೋಚವಾಗಿ ಅವರನ್ನು ಖಂಡಿಸುತ್ತಿದ್ದರು.

ಹಜ್ಜಾಜ್ ಬಿನ್ ಯೂಸುಫ್ ತನ್ನ ಆಡಳಿತಾವಧಿಯಲ್ಲಿ ಅನೇಕ ಮುಗ್ಧ ಮುಸ್ಲಿಮರನ್ನು ವಧಿಸಿದ್ದನು. ಆತನಿಗೆ ಎದುರಾಡುವವರಿರಲಿಲ್ಲ. ಆದರೆ ಅಬ್ದುಲ್ಲಾರು(ರ) ಆತನನ್ನೂ ಖಂಡಿಸಿದ್ದರು. ಒಮ್ಮೆ ಹಜ್ಜಾಜ್‌ರತ್ತ ಬೊಟ್ಟು ಮಾಡಿ ಈತ ಅಲ್ಲಾಹನ ಸಹಸ್ರಾರು ನಿಷ್ಕಳಂಕ ದಾಸರನ್ನು ನಿರ್ದಯೆಯಿಂದ ಖಡ್ಗಕ್ಕೆ ಆಹುತಿ ನೀಡಿದ ದೇವಧಿಕ್ಕಾರಿ ಎಂದು ಹೇಳಿದರು.

## ಅಂತ್ಯ

ಈ ಸಹಾಬಿವರ್ಯರು(ರ) ಹಿಜರಿ 74ನೆಯ ವರ್ಷದಲ್ಲಿ ನಿಧನರಾದರು. ಹಜ್ಜಾಜ್‌ನ ಓರ್ವ ಗುಪ್ತಚರನ ವಿಷಲಿಪ್ತವಾದ ಗುಪ್ತ ಬಾಣ ಪ್ರಯೋಗವು ಅವರ ಮರಣಕ್ಕೆ ಹೇತುವಾಯಿತು. ಇಬ್ನ್ ಉಮರ್‌ರನ್ನು ವಂಚನೆಯಿಂದ ಕೊಲ್ಲಲು ಹಜ್ಜಾಜ್ ಹೊಂಚು ಹಾಕುತ್ತಿದ್ದನು. ಆ ವೀರ ಯೋಧರು ವಿಷ ಬಾಧೆಯಿಂದ ಕೆಲವೇ ದಿನಗಳಲ್ಲಿ ನಿಧನರಾದರು. (ಇನ್ನಾಲಿಲ್ಲಾಹ್) 'ದೀತುವಾ'ದ ಸಮೀಪದ 'ಫಕ್' ಎಂಬಲ್ಲಿ ಅವರನ್ನು ದಫನ ಮಾಡಲಾಯಿತು.

***

# ಹ. ಅಬೂದರ್ ಗಿಫಾರಿ(ರ)

ಪ್ರಪ್ರಥಮವಾಗಿ ಇಸ್ಲಾಮ್ ಧರ್ಮ ಸ್ವೀಕರಿಸಿದ ಸಹಾಬಿವರ್ಯರಲ್ಲಿ ಹ. ಅಬೂದರ್ ಗಿಫಾರಿಯವರು(ರ) ಸುಪ್ರಸಿದ್ಧರಾಗಿದ್ದಾರೆ. ಇವರು ಜನರಿಗೆ ಸತ್ಯ ಮತ್ತು ಸನ್ಮಾರ್ಗದರ್ಶನ ನೀಡಲಿಕ್ಕಾಗಿ ದೇವನಿಯುಕ್ತ ಪ್ರವಾದಿಯೋರ್ವರು ಅರೇಬಿಯಾದಲ್ಲಿ ಆಗಮಿಸಿರುವರೆಂಬ ಸುದ್ದಿ ತಿಳಿದ ತಕ್ಷಣವೇ ಸಂತೃಪ್ತಿಯಿಂದ ಮಕ್ಕಾಕ್ಕೆ ಧಾವಿಸಿ ಇಸ್ಲಾಮ್ ಧರ್ಮವನ್ನು ನಿಷ್ಕಳಂಕವಾಗಿ ಸ್ವೀಕರಿಸಿದವರಾಗಿದ್ದರು. ಅಬೂದರ್ ಎಂಬುದು ಅವರ ಉಪನಾಮ. ಅವರು 'ಗಿಫಾರ್' ಗೋತ್ರರಾದುದರಿಂದ ಅವರ ಹೆಸರಿನೊಂದಿಗೆ 'ಗಿಫಾರಿ' ಸೇರಿ ಕೊಂಡಿತು. ಜುಂದುಬ್ ಬಿನ್ ಜನಾದಃ ಎಂಬುದು ಅವರ ನಿಜ ನಾಮ.

## ದರೋಡೆ

ಇಸ್ಲಾಮಿನ ಉದಯಕ್ಕಿಂತ ಮುಂಚೆ ದರೋಡೆಯೇ ಗಿಫಾರ್ ಗೋತ್ರದವರೆಲ್ಲರ ಕಸುಬಾಗಿದ್ದಿತು. ಇಸ್ಲಾಮ್ ಧರ್ಮವನ್ನು ಸ್ವೀಕರಿಸುವುದಕ್ಕಿಂತ ಮುಂಚೆ ಹ. ಅಬೂದರ್ ಗಿಫಾರಿಯವರು(ರ) ದರೋಡೆಕೋರರಾಗಿದ್ದರು. ಆದರೂ ದೇವ ವಿಶ್ವಾಸ ಮತ್ತು ಶಿಷ್ಟಾಚಾರಗಳಲ್ಲಿ ಅವರು ಇತರೆಲ್ಲರಿಗಿಂತ ಉತ್ತಮರಾಗಿದ್ದರು, ಆದ್ದರಿಂದ ಅವರು ಕೆಲವು ಕಾಲ ಮೂರ್ತಿ ಪೂಜೆ ಮತ್ತು ದರೋಡೆಯನ್ನು ಬಿಟ್ಟು ಸತ್ಯಶೋಧನೆಯಲ್ಲಿ ಬಾಳಿದರು. ಆ ವೇಳೆ ಪ್ರವಾದಿಯವರ(ಸ) ಆಗಮನದ ವಾರ್ತೆಯು ಅವರಿಗೆ ತಲಪಿತು. ತಕ್ಷಣವೇ ಅವರು ಸಹೋದರ ಉನೈಸ್‌ರನ್ನು ಮಕ್ಕಾಕ್ಕೆ ಕಳುಹಿಸಿದರು. ಪ್ರವಾದಿಯು(ಸ) ಆಗಮಿಸಿದ್ದಾರೆಯೇ ಅವರು ಜನರಿಗೆ ಯಾವ ವಿಷಯಗಳನ್ನು ಉಪದೇಶಿಸುತ್ತಿದ್ದಾರೆ ಎಂಬೀ ವಿಷಯಗಳನ್ನು ತಿಳಿಯಲಿಕ್ಕಾಗಿ ಅವರನ್ನು ಕಳಿಸಲಾಗಿತ್ತು. ಉನೈಸ್‌ರು ಮರಳಿ ಬಂದು ಎಲ್ಲ ಮಾಹಿತಿಗಳನ್ನೂ ನೀಡಿದರು. ಆ ಸತ್ಯಾನ್ವೇಷಿಯು ತಡಮಾಡದೆ ಮಕ್ಕಾಕ್ಕೆ ಹೋದರು.

## ಮಕ್ಕಾ

ಅವರು ಮಕ್ಕಾ ತಲಪಿದ ಬಳಿಕ ಕಅಬಾದಲ್ಲಿ ತಂಗಿದರು. ಅವರಿಗೆ ಮಕ್ಕಾ ಸಂಪೂರ್ಣ ಅಪರಿಚಿತವಾಗಿತ್ತು. ಆದ್ದರಿಂದ ಯಾರನ್ನೂ ಸಂಪರ್ಕಿಸದೆ ಎರಡು

ಮೂರು ದಿನ ಅಲ್ಲಿಯೇ ಉಳಿದರು. ಅದು ಮುಸ್ಲಿಮರನ್ನು ನಿರ್ದಾಕ್ಷಿಣ್ಯವಾಗಿ ಹಿಂಸಿಸಿ, ಮರ್ದಿಸುವ ಕಾಲವಾಗಿದ್ದಿತು. ಆದ್ದರಿಂದ ದೇವ ಪ್ರವಾದಿಯ ಕುರಿತು ಅವರು ಯಾರೊಡನೆಯೂ ಮಾತನಾಡಲಿಲ್ಲ. ಹ.ಅಲೀಯವರು(ರ) ದಿನನಿತ್ಯ ಅವರನ್ನು ಮಸೀದಿಯಲ್ಲಿ ಗಮನಿಸುತ್ತಲಿದ್ದರೂ ಅಪರಿಚಿತರಾಗಿದ್ದುದರಿಂದ ಪರಸ್ಪರ ಸಂಪರ್ಕವಿರಲಿಲ್ಲ. ಮೂರನೇ ದಿನ ಸಂಜೆ ಹ.ಅಲೀಯವರು ಗಿಫಾರಿಯವರೊಡನೆ(ರ) ನೀವು ಇಲ್ಲಿಗೆ ಬಂದು ಒಂದೆರಡು ದಿನವಾಯಿತಲ್ಲವೇ? ಬಂದ ಕಾರಣವೇನು? ಎಂದು ವಿಚಾರಿಸಿದರು. ಹ. ಅಲೀಯವರು ಪ್ರವಾದಿಯ(ಸ) ಆಪ್ತ ಸಂಗಾತಿಯೆಂದು ಅವರಿಗೇನು ಗೊತ್ತು? ಅವರು ಸ್ವಲ್ಪ ಹೊತ್ತು ಏನೂ ಹೇಳಲಿಲ್ಲ. ತನ್ನ ಆಗಮನೋದ್ದೇಶವನ್ನು ತಿಳಿಸಿದರೆ ಆಗಬಹುದಾದ ಭಾವೀ ಅನಾಹುತವನ್ನು ಅವರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. "ನಾನು ಬಂದಿರುವ ಉದ್ದೇಶವು ಅತ್ಯಂತ ನಿಗೂಢವಾಗಿದೆ. ಆದ್ದರಿಂದ ಅದನ್ನು ಬಹಿರಂಗ ಪಡಿಸುವುದಿಲ್ಲವೆಂಬ ಭಾಷೆ ಕೊಟ್ಟರೆ ಮಾತ್ರ ತಿಳಿಸುತ್ತೇನೆ" ಎಂದರು. ಅಲೀಯವರು(ರ) ಆ ಶರತ್ತಿಗೆ ಒಪ್ಪಿದರು. ಅದರಂತೆ ಅಬೂದರ್ ಗಿಫಾರಿಯವರು ಎಲ್ಲ ವಿಷಯಗಳನ್ನು ತಿಳಿಸಿದರು. ಹ. ಅಲೀಯವರು(ರ) ಬಹಳ ಸಂತೋಷದಿಂದ ಹೀಗೆಂದರು: "ನೀವು ಹುಡುಕುತ್ತಿರುವ ಪ್ರವಾದಿಯ(ಸ) ಕುರಿತು ನನಗೆ ಖಂಡಿತವಾಗಿಯೂ ತಿಳಿದಿದೆ. ನಾಳೆ ಬೆಳಿಗ್ಗೆ ನೀವು ನನ್ನೊಡನೆ ಬರುವಿರಾದರೆ ನಿಮ್ಮನ್ನು ಅವರ ಬಳಿಗೆ ತಲಪಿಸುತ್ತೇನೆ."

## ಹಿಂಸೆ

ಮರುದಿನ ಬೆಳಗಾತ ಇಬ್ಬರೂ ಪ್ರವಾದಿಯವರ(ಸ) ಬಳಿಗೆ ಹೋದರು. ಪ್ರವಾದಿಯವರ(ಸ) ಸೌಮ್ಯ ವರ್ತನೆ ಮತ್ತು ಸದ್ಬೋಧೆಯು ಹ. ಅಬೂದರ್‌ರ(ರ) ಮನ ಸೆಳೆಯಿತು. ಅವರು ಸಾಕ್ಷ್ಯ ವಚನವನ್ನು ಹೇಳಿ ಮುಸ್ಲಿಮರಾದರು. ಅಬೂದರ್‌ರು(ರ) ಇಸ್ಲಾಮಿನ 5ನೇ ಸದಸ್ಯರಾದರು. ತರುವಾಯ ಪ್ರವಾದಿ(ಸ) ಅವರೊಡನೆ ಹೀಗೆಂದರು: "ನಿಮಗೆ ಮಕ್ಕಾದಲ್ಲಿ ಜೀವಿಸಲು ಬಹಳ ಕಷ್ಟವಿದೆ. ಆದ್ದರಿಂದ ತಕ್ಷಣವೇ ನೀವು ಇಲ್ಲಿಂದ ಊರಿಗೆ ಹೋಗಿ ಅಲ್ಲಿ ಜನರಿಗೆ ಸನ್ಮಾರ್ಗದ ಉಪದೇಶ ನೀಡುವುದು ಉತ್ತಮ. ಪ್ರವಾದಿವರ್ಯರ(ಸ) ಮಾತುಗಳನ್ನು ಆಲಿಸಿದ ಆ ಆದರ್ಶ ಪ್ರೇಮಿಯು ಧೈರ್ಯದಿಂದ ಹೀಗೆ ಹೇಳಿದರು. "ನನ್ನ ಆತ್ಮವು ಯಾರ ಹಸ್ತದಲ್ಲಿಯೋ ಆತನಾಣೆ! ನಾನೋರ್ವ ವಿಶ್ವಾಸಿಯೆಂದು ಬಹಿರಂಗವಾಗಿ ಘೋಷಿಸುವುದಕ್ಕೆ ನಾನು ಹಿಂಜರಿಯುವುದಿಲ್ಲ." ಆ ಬಳಿಕ ಅವರು ಮಸ್ಜಿದುಲ್ ಹರಾಮ್‌ಗೆ ತೆರಳಿ ಏಕದೇವ ನಿಷ್ಠೆಯನ್ನು ಉಚ್ಚ ಸ್ವರದಿಂದ ಸಾರಿ ಹೇಳಿದರು. ಇದನ್ನು ಆಲಿಸಿದ ಮಕ್ಕಾದ ಮುಶ್ರಿಕರು ಹಲ್ಲು ಕಡಿಯುತ್ತಾ ಅವರತ್ತ ನುಗ್ಗಿದರು.

ಆ ಬಳಿಕ ನಡೆದ ಘಟನೆಯನ್ನು ಹೇಳದಿರುವುದೇ ಉತ್ತಮ! ಹೊಡೆತದ ಸುರಿ ಮಳೆಯನ್ನು ತಾಳಲಾಗದೆ ಅವರು ಕುಸಿದು ಬಿದ್ದರು. ಆಗ ಹ.ಅಬ್ಬಾಸ್‌ರು(ರ) ಅಲ್ಲಿಗೆ ಬಂದರು. ಇದೆಲ್ಲವನ್ನು ನೋಡಿ ಅವರೊಂದಿಗೆ ಹೀಗೆಂದರು: "ನೀವು ಯಾರಿಗೆ ಹೊಡೆಯುತ್ತಿದ್ದಿರೆಂದು ತಿಳಿದಿದೆಯೇ? ಇವರು ಗಿಫಾರ್ ಗೋತ್ರಕ್ಕೆ ಸೇರಿದವರು. ನಿಮ್ಮ ವರ್ತಕ ತಂಡವು ಇವರ ಗೋತ್ರದ ಸಮೀಪದಿಂದಲೇ ಹಾದು ಹೋಗಬೇಕಾಗಿದೆ. ನೀವು ಈ ರೀತಿ ತಿಳಿಗೇಡಿತನದಿಂದ ವರ್ತಿಸಿದರೆ ನಿಮ್ಮ ವ್ಯಾಪಾರವೇ ಸ್ಥಗಿತವಾದೀತೆಂಬುದನ್ನು ಜ್ಞಾಪಕದಲ್ಲಿಡಿ." ಈ ಮಾತುಗಳನ್ನು ಕೇಳಿದೊಡನೆಯೇ ಹಿಂಸೆ, ಮರ್ದನಗಳು ಯಾಂತ್ರಿಕವಾಗಿ ನಿಂತುವು. ಆದರೆ ಈ ಹಿಂಸೆಯಿಂದ ಅಬೂದರ್‌ರ(ರ) ವಿಶ್ವಾಸದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಮಾತ್ರವಲ್ಲ, ಅವರು ನಿರ್ಭೀತವಾಗಿಯೇ ಇದ್ದರು. ಅವರು ನೆಲದಿಂದ ಧಿಗ್ಗನೆದ್ದು ಪವಿತ್ರ ವಾಕ್ಯವನ್ನು ಗಟ್ಟಿಯಾಗಿ ಪದೇಪದೇ ಉಚ್ಚರಿಸಿದರು. ಮುಶ್ರಿಕರು ಪುನಃ ಹೊಡೆಯಲುದ್ಯುಕ್ತರಾದರೂ ಹ.ಅಬ್ಬಾಸ್‌ರ(ರ) ಸಮರ್ಥ ತಂತ್ರಗಾರಿಕೆಯಿಂದ ಪ್ರಕ್ಷುಬ್ಧ ವಾತಾವರಣವು ಶಾಂತವಾಯಿತು. ಈ ಘಟನೆಗಳ ಬಳಿಕ ಅಬೂದರ್‌ರು(ರ) ಕೆಲವು ದಿನ ಮಾತ್ರ ಮಕ್ಕಾದಲ್ಲಿ ತಂಗಿದರು.

ಊರಿಗೆ ತಲುಪಿದೊಡೆಯೇ ತಮ್ಮ ಗೋತ್ರದವರನ್ನು ಇಸ್ಲಾಮಿಗೆ ಆಹ್ವಾನಿಸಿದರು. ಸಹೋದರ ಉನೈಸರು ಪ್ರಥಮವಾಗಿ ಅವರ ಧರ್ಮಾಹ್ವಾನವನ್ನು ಸ್ವಾಗತಿಸಿದರು. ತರುವಾಯ ಇಡೀ ಗಿಫಾರ್ ಗೋತ್ರವು ಇಸ್ಲಾಮ್ ಸ್ವೀಕರಿಸಿತೆಂದು ಚರಿತ್ರೆಯಲ್ಲಿ ಉಲ್ಲೇಖಿಸಲ್ಪಟ್ಟಿದೆ.

## ಹೊಸ ವಿಚಾರಧಾರೆ

ಹ. ಅಬೂದರ್‌ರು(ರ) ಪ್ರಚಂಡ ತ್ಯಾಗಿ ಮತ್ತು ಅನುಪಮ ದೇವ ಭಕ್ತರಾಗಿದ್ದರು. ಪ್ರವಾದಿವರ್ಯರ(ಸ) ನಿಧನದ ಬಳಿಕ ಐಹಿಕ ಸುಖಾಡಂಭರ ಗಳೆಲ್ಲವನ್ನೂ ತ್ಯಜಿಸಿ ಏಕಾಂತ ಜೀವನದಲ್ಲಿಯೇ ತಲ್ಲೀನರಾದರು. ಅಬೂಬಕರ್‌ರ(ರ) ನಿಧನದ ಬಳಿಕ ಶಾಮ್(ಸಿರಿಯ)ನಲ್ಲಿ ವಾಸ ಹೂಡಿದರು. ಉಸ್ಮಾನ್‌ರ(ರ) ಕಾಲದಲ್ಲಿ ಮುಸ್ಲಿಮರಲ್ಲಿ ವ್ಯಾಪಿಸಿದ ಐಹಿಕ ಮೋಹ ಮತ್ತು ಸುಖ ಭೋಗ ಲಾಲಸೆಯು ಅವರ ಮನಸ್ಸನ್ನು ತುಂಬಾ ನೋಯಿಸಿತು. ಮುಸ್ಲಿಮರಲ್ಲಿ ಲೋಕ ನಾಯಕ ಪ್ರವಾದಿ ಮುಹಮ್ಮದ್‌ರ(ಸ) ಕಾಲದ ಸರಳ ಜೀವನವೇ ನೆಲೆಸಿರಬೇಕೆಂದು ಅವರು ಬಯಸಿದ್ದರು. ಇತರರ ಜೀವನಾವಶ್ಯಕತೆ ಗಳನ್ನು ಪೂರೈಸದೆ, ದರಿದ್ರರಿಗೆ ನೆರವು ನೀಡದೆ, ಸ್ವಾರ್ಥಿಯಾಗಿ ಬಾಳುವುದನ್ನು ಅವರು ತೀವ್ರವಾಗಿ ದ್ವೇಷಿಸಿದರು. ಸ್ವಜೀವನಾವಶ್ಯಕತೆಗಳನ್ನು ಮಿಕ್ಕಿದ

ಸಂಪತ್ತನ್ನು ದೇವ ಮಾರ್ಗದಲ್ಲಿ ವ್ಯಯಿಸ ಬೇಕೆಂದು ಅವರ ಅಭಿಪ್ರಾಯವಾಗಿತ್ತು. ಅನೇಕ ಮಂದಿ ಈ ಅಭಿಪ್ರಾಯವನ್ನು ವಿರೋಧಿಸಿದರು. ಝಕಾತನ್ನು (ಕಡ್ಡಾಯ ದಾನ) ಅರ್ಹರಿಗೆ ನೀಡಿದ ಬಳಿಕ ಉಳಿಯುವ ಹಣವನ್ನು ಯಥೇಷ್ಟವಾಗಿ ಶೇಖರಿಸಿಡಬಹುದೆಂದು ಅಮೀರ್ ಮುಆವಿಯಾ(ರ) ಮತ್ತಿತರರು ವಾದಿಸಿದರು. ಈ ಭಿನ್ನಾಭಿಪ್ರಾಯವು ವಾತಾವರಣವನ್ನು ಇನ್ನಷ್ಟು ಕಾವೇರಿಸಿತು.

ಈ ಭಿನ್ನಾಭಿಪ್ರಾಯಗಳಿಂದಾಗಿ ದೇಶದಲ್ಲಿ ಏನಾದರೂ ಅಹಿತಕರ ಘಟನೆ ನಡೆದೀತೆಂದು ಹಲವು ಮಂದಿ ಶಂಕಿಸಿದರು. ಈ ಕುರಿತು ಗಮನ ಸೆಳೆಯುವ ಪತ್ರವೊಂದನ್ನು ಅಮೀರ್ ಮುಆವಿಯಾ(ರ) ಉಸ್ಮಾನ್‌ರಿಗೆ(ರ) ಬರೆದರು. ಹ. ಅಬೂದರ್‌ರನ್ನು(ರ) ಕೂಡಲೇ ಸಿರಿಯಾದಿಂದ ಕರೆಸಿ, ಖಲೀಫರ ಸಮೀಪ ದಲ್ಲಿಯೇ ಇರಿಸಿಕೊಳ್ಳಬೇಕೆಂದು ಅದರಲ್ಲಿ ವಿನಂತಿಸಲಾಗಿತ್ತು.

## ಅಂತ್ಯ

ಮುಆವಿಯಾರ(ರ) ಪತ್ರದ ಬಗ್ಗೆ ಗಾಢವಾಗಿ ಆಲೋಚಿಸಿದ ಬಳಿಕ ತನ್ನಲ್ಲಿಗೆ ಬರುವಂತೆ ಆಮಂತ್ರಿಸಿ ಉಸ್ಮಾನ್‌ರು(ರ) ಹ.ಅಬೂದರ್‌ರಿಗೆ(ರ) ಪತ್ರ ಬರೆದರು. ಆಮಂತ್ರಣದಂತೆಯೇ ಅಬೂದರ್‌ರು(ರ) ಬಂದಾಗ ಉಸ್ಮಾನ್‌ರು(ರ) ಹೀಗೆ ಹೇಳಿದರು: "ಇದೋ ನಿಮಗೆ ಹಾಲು ನೀಡುವ ಧಾರಾಳ ಒಂಟೆಗಳು! ಇವುಗಳ ಹಾಲು ಕುಡಿಯುತ್ತಾ ನೀವು ಇಲ್ಲಿಯೇ ಸುಖವಾಗಿರಿ." ಆದರೆ ಆ ಮಹಾಪುರುಷರು, ಖಲೀಫರ ಕೊಡುಗೆಯನ್ನು ನಿರಾಕರಿಸಿ ಪತ್ನಿ ಯೊಂದಿಗೆ ಮದೀನಾದ ರಬ್ಜಾ ಎಂಬಲ್ಲಿಗೆ ಹೋಗಿ ಬಿಡಾರ ಹೂಡಿದರು.

ರಬ್ಜಾದಲ್ಲಿ ವಾಸವಾಗಿದ್ದ ವೇಳೆ ಉಸ್ಮಾನ್‌ರ(ರ) ವಿರುದ್ಧ ಕೆಲಸ ಮಾಡುವಂತೆ ಅನೇಕ ಮಂದಿ ಬಂದು ಒತ್ತಾಯಿಸಿದರೂ ಅವರು ಅದಕ್ಕೊಪ್ಪಲಿಲ್ಲ. ಅದಕ್ಕೆ ಅವರು ಈ ರೀತಿ ಪ್ರತಿಕ್ರಿಯೆ ನೀಡಿದ್ದರು:

"ಉಸ್ಮಾನ್‌ರಿಗೆ(ರ) ವಿರುದ್ಧವಾಗಿ ವರ್ತಿಸುವುದು ನನಗೆ ಭೂಷಣವಲ್ಲ. ಅವರು ಮುಸ್ಲಿಮರ ನಾಯಕರಾಗಿದ್ದಾರೆ. ನಾವು ಅವರ ವಿಧೇಯ ಪ್ರಜೆಗಳು! ಅವರು ನನ್ನನ್ನು ಪೂರ್ವಕ್ಕಾಗಲಿ, ಪಶ್ಚಿಮಕ್ಕಾಗಲಿ ಎಲ್ಲಿಗೆ ಕಳುಹಿಸಿದರೂ ಹೋಗಲು ತಯಾರಿದ್ದೇನೆ." ಅಬೂದರ್‌ರು(ರ) ಹಿ.ಶ. 31ರಲ್ಲಿ ನಿಧನರಾದರು. ಇನ್ನಾಲಿಲ್ಲಾಹಿ....

***

# ಹ. ಅಬೂ ಹುರೈರಃ(ರ)

**ಹ.**ಅಬೂ ಹುರೈರರ(ರ) ಹೆಸರನ್ನು ತಿಳಿಯದವರು ತೀರಾ ವಿರಳ. ಪ್ರಖ್ಯಾತ ಹದೀಸ್ ವರದಿಗಾರನೆಂಬ ನೆಲೆಯಲ್ಲಿ ಅವರು ನಮ್ಮ ಸ್ಮೃತಿಪಟಲದಲ್ಲಿ ಸದಾ ಸುಳಿದಾಡುತ್ತಾರೆ. ಅವರು ಐದು ಸಾವಿರಕ್ಕೂ ಹೆಚ್ಚು ಹದೀಸ್‌ಗಳನ್ನು ವರದಿ ಮಾಡಿದ್ದಾರೆ. ಇದರಿಂದ ಅವರು ಮುಸ್ಲಿಮ್ ಲೋಕಕ್ಕೆ ಸಲ್ಲಿಸಿರುವ ಸೇವೆಯ ಮಹತ್ವವನ್ನು ಊಹಿಸಬಹುದು. ಪ್ರವಾದಿಯವರ(ಸ) ನಂಬಿಗಸ್ಥ ಅನುಯಾಯಿಗಳಲ್ಲಿ ಅವರಿಗೆ ಉನ್ನತ ಸ್ಥಾನವಿತ್ತು. ಅವರಿಗೆ ಅಬ್ದುಶ್ಯಂಸ್ (ಸೂರ್ಯದಾಸ) ಎಂಬ ಹೆಸರಿದ್ದಿತು. ಇಸ್ಲಾಮ್ ಸ್ವೀಕರಿಸಿದ ಬಳಿಕ ಆ ಹೆಸರನ್ನು ಅಬ್ದುಲ್ಲಾ ಎಂದು ಬದಲಾಯಿಸಿದರು. ಆದರೆ ಅನಂತರ ಅವರು ಅಬೂ ಹುರೈರಃ(ರ) ಎಂಬ ಹೆಸರಿನಿಂದಲೇ ಖ್ಯಾತರಾದರು. ಅವರು ಬೆಕ್ಕುಗಳನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಆದ್ದರಿಂದ 'ಬೆಕ್ಕಿನ ತಂದೆ'ಯೆಂಬ ಹೆಸರು ಅವರಿಗೆ ಬಿತ್ತು.

## ಮದೀನಾಕ್ಕೆ

ಇಸ್ಲಾಮಿನ ಸೂರ್ಯೋದಯದ ಕೆಲವೇ ವರ್ಷಗಳಲ್ಲಿ ಅದರ ಹೊಂಗಿರಣಗಳು ನಾನಾ ಕಡೆಗಳಲ್ಲಿ ಬೆಳಕು ಚೆಲ್ಲಿತು. ತನ್ನಿಮಿತ್ತ ಹೊರ ದೇಶಗಳಿಂದಲೂ ಅನೇಕ ನಿಯೋಗಗಳು ಆಗಮಿಸಿ ಪ್ರವಾದಿಯವರ(ಸ) ಸಮ್ಮುಖದಲ್ಲಿ ಇಸ್ಲಾಮಿಗೆ ಸೇರಿದುವು. ಹಿಜರಿ 7ನೇ ವರ್ಷದಲ್ಲಿ ಯಮನ್‌ನಿಂದಲೂ ಅಂತಹ ನಿಯೋಗ ವೊಂದು ಆಗಮಿಸಿತ್ತು. ಆ ತಂಡದಲ್ಲಿ ಅಬೂ ಹುರೈರಃರನ್ನೊಳಗೊಂಡ(ರ) 80 ಮಂದಿಯಿದ್ದರು. ಅಬೂ ಹುರೈರರು(ರ) ಮೊದಲೇ ಓರ್ವ ಸತ್ಯಾನ್ವೇಷಕರಾಗಿದ್ದರು. ಸ್ವಗೋತ್ರದ ಪ್ರಮುಖ ವ್ಯಕ್ತಿಯಾಗಿದ್ದ ತುಫೈಲ್ ಬಿನ್ ಅಮ್ರ್‌ರಿಂದ(ರ) ಅವರು ಇಸ್ಲಾಮನ್ನು ತಿಳಿದುಕೊಂಡರು. ಆದರೆ ಪ್ರವಾದಿಯವರನ್ನು(ಸ) ಭೇಟಿಯಾಗ ಬೇಕೆಂಬ ಅವರ ಅದಮ್ಯ ಆಕಾಂಕ್ಷೆಯು ಹಿಜರಿ 7ನೇ ವರ್ಷದಲ್ಲಷ್ಟೇ ಈಡೇರಿತು.

## ಹಸಿವು! ಹಸಿವು!

ಅಬೂ ಹುರೈರಃ(ರ) ಮುಸ್ಲಿಮರಾದ ಬಳಿಕ ಪ್ರವಾದಿಯವರೊಂದಿಗೆ(ಸ) ಜೀವಿಸಿದ್ದರು. ಅವರೋರ್ವ ಜ್ಞಾನದಾಹಿಯಾಗಿದ್ದರು. ತಮ್ಮ ಸಂಪೂರ್ಣ ಜೀವನವನ್ನು

ಇಸ್ಲಾಮಿನ ಅಧ್ಯಯನಕ್ಕಾಗಿಯೇ ವ್ಯಯಿಸಿದರು. ಹೀಗೆ ತಮ್ಮ ಸಂಪೂರ್ಣ ವೇಳೆಯನ್ನು ಕುರ್‌ಆನ್ ಮತ್ತು ಸುನ್ನತ್‌ನ ಅಧ್ಯಯನಕ್ಕಾಗಿ ವಿನಿಯೋಗಿಸಿದ ಸಹಾಬಿಗಳು ಕೆಲವೇ ಮಂದಿ. ಮಸ್ಜಿದುನ್ನಬವಿಯ ಚಾವಡಿಯನ್ನು ಅವರು ಅದಕ್ಕಾಗಿ ಬಳಸಿಕೊಂಡಿದ್ದರು. ಆದ್ದರಿಂದ ಅವರನ್ನು 'ಅಸ್ಹಾಬುಸ್ಸುಫ್ಫಃ' ಎಂದು ಕರೆಯಲಾಗುತ್ತದೆ.

ಜೀವನ ನಿರ್ವಹಣೆಗಾಗಿ ಅವರಿಗೆ ವಿಶೇಷ ಸವಲತ್ತುಗಳಿರಲಿಲ್ಲ. ಆದ್ದರಿಂದ ಅವರು ಹೆಚ್ಚಿನ ವೇಳೆ ಅರೆಹೊಟ್ಟೆಯಲ್ಲಿರುತ್ತಿದ್ದರು. ಹಸಿವಿನ ಬಾಧೆಯಿಂದ ಬಳಲಿ ಬೆಂಡಾದರೂ ಅವರು ಆ ಹಾದಿಯಲ್ಲಿಯೇ ನಿಂತರು. ಹ.ಅಬೂ ಹುರೈರಃ(ರ) ಅನುಭವಿಸಿದ ಸಂಕಷ್ಟಗಳು ವರ್ಣನಾತೀತ. ಹಲವು ದಿನಗಳನ್ನು ಅವರು ಬರಿ ಹೊಟ್ಟೆಯಲ್ಲಿಯೇ ಕಳೆದಿದ್ದರು. ಹಸಿವು ತಾಳಲಾಗದೆ ಹಲವೊಮ್ಮೆ ಅವರು ಹೊಟ್ಟೆಗೆ ಕಲ್ಲು ಕಟ್ಟುತ್ತಿದ್ದರು. ಕೆಲವೊಮ್ಮೆ ಹೊಟ್ಟೆಯನ್ನು ಒತ್ತಿ ಹಿಡಿದು ಮಲಗುತ್ತಿದ್ದರು.

ಒಂದು ದಿನ ಹಸಿವು ತಾಳಲಾಗದೆ ಅವರು ಒಂದು ಚೌಕದ ಬಳಿ ಬಂದು ಕುಳಿತರು. ಯಾರಾದರೂ ತನ್ನ ಶೋಚನೀಯಾವಸ್ಥೆಯನ್ನು ನೋಡಿ ಮನೆಗೆ ಕರೆದೊಯ್ಯಬಹುದೆಂದು ಅವರು ನಿರೀಕ್ಷಿಸಿದ್ದರು. ತುಂಬಾ ಸಮಯ ಅಲ್ಲಿಯೇ ಅವರು ಉಸಿರುಗಟ್ಟಿ ಕುಳಿತರು. ಅಷ್ಟರಲ್ಲಿ ಆ ದಾರಿಯಾಗಿ ಅಬೂಬಕರ್(ರ) ಆಗಮಿಸಿದರು. ಅಬೂ ಹುರೈರರಿಗೆ(ರ) ಸ್ವಲ್ಪ ಸಮಾಧಾನವಾಯಿತು. ಅವರು ಸಮೀಪಿಸಿದಾಗ ಕುರ್‌ಆನ್‌ಗೆ ಸಂಬಂಧಿಸಿದ ಕೆಲವು ಸಂದೇಹಗಳನ್ನು ಅವರ ಮುಂದಿರಿಸಿದರು. ದೌರ್ಭಾಗ್ಯವಶಾತ್, ಆ ಮಹಾಪುರುಷರು ಅದರ ಉತ್ತರ ಹೇಳಿ ಅಲ್ಲಿಂದ ಹೊರಟು ಹೋದರು.

ಅಬೂ ಹುರೈರರಿಗೆ(ರ) ತೀವ್ರ ನಿರಾಶೆ ಮತ್ತು ದುಃಖವಾಯಿತು. ಹೊಟ್ಟೆಯ ಸಂಕಟ ಅವರನ್ನು ತುಂಬಾ ನಿತ್ರಾಣಗೊಳಿಸಿತ್ತು. ಅವರ ಶರೀರವು ಹರಿವೆದಂಟಿನಂತೆ ಬಾಡಿತು. ಕಣ್ಣು ಕತ್ತಲಿಡುವಂತೆ ಭಾಸವಾಯಿತು. ಆ ವೇಳೆಗೆ ಪ್ರವಾದಿವರ್ಯರು(ಸ) ಬರುತ್ತಿರುವುದನ್ನು ಅಬೂ ಹುರೈರಃ(ರ) ನೋಡಿದರು. ಅವರ ಮುಖ ಅರಳಿತು. ಬಳಲಿದ ನರನಾಡಿಗಳಲ್ಲಿ ಉತ್ಸಾಹ ಚಿಮ್ಮಿತು. ಅವರು ಬಳಿ ಬಂದಾಗ ಸಲಾಮ್ ಹೇಳಿದರು. ಅಬೂ ಹುರೈರರ(ರ) ಬಾಡಿದ ಮುಖ ಮತ್ತು ಬಡಕಲು ದೇಹವನ್ನು ಕಂಡಾಗಲೇ ಪ್ರವಾದಿವರ್ಯರಿಗೆ(ಸ) ಪರಿಸ್ಥಿತಿ ಅರ್ಥವಾಯಿತು. ಅವರು ಆ ಕೂಡಲೇ ಅಬೂ ಹುರೈರಾರನ್ನು(ರ) ತಮ್ಮ ಮನೆಗೆ ಕರೆದೊಯ್ದರು. ಆದರೆ ಅಂದು ಪ್ರವಾದಿಯವರ ಮನೆಯಲ್ಲಿಯೂ ಹಸಿವು ನೆಲೆಸಿತ್ತು. ಅಲ್ಲಿ ಯಾವ ಆಹಾರ ಪದಾರ್ಥವೂ ಇರಲಿಲ್ಲ. ಸೌಭಾಗ್ಯವಶಾತ್, ಆ ವೇಳೆ ಯಾರೋ ಮಹನೀಯರು ಒಂದು ಲೋಟ ಹಾಲು ಕಳುಹಿಸಿದರು. ಅಬೂ ಹುರೈರರಿಗೆ(ರ) ಸಂತೋಷವಾಯಿತು. ಅದೆಲ್ಲವೂ ತನಗೆ ದೊರೆಯಬಹುದೆಂದು ಅವರು

ಭಾವಿಸಿದ್ದರು. ಪ್ರವಾದಿ(ಸ) ಅಬೂ ಹುರೈರರೊಡನೆ(ರ) ತಮ್ಮ ಸಹಪಾಠಿಗಳನ್ನೂ (ಅಸ್ಹಾಬುಸ್ಸುಫ್ಫ) ಕರೆ ತರುವಂತೆ ಆಜ್ಞಾಪಿಸಿದರು. ಪ್ರವಾದಿಯವರ ಅಪೇಕ್ಷೆ ಯಂತೆ ಅವರು ಎಲ್ಲರನ್ನೂ ಕರೆ ತಂದರು. ಆದರೆ ಏನಾಶ್ಚರ್ಯ! ಎಲ್ಲರೂ ಹೊಟ್ಟೆ ತುಂಬಾ ಕುಡಿದರೂ ಆ ಹಾಲು ಮುಗಿಯಲಿಲ್ಲ.

## ಸತ್ಯ ಪ್ರಚಾರಕ

ಅಬೂ ಹುರೈರರು(ರ) ಓರ್ವ ಪ್ರಸಿದ್ಧ ಹದೀಸ್ ವರದಿಗಾರರೆಂದು ಈ ಹಿಂದೆ ಹೇಳಲಾಗಿದೆಯಷ್ಟೆ. ಪ್ರವಾದಿವರ್ಯರಿಂದ(ಸ) ಇಷ್ಟೊಂದು ಹದೀಸ್‌ಗಳನ್ನು ವರದಿ ಮಾಡಿದ ಬೇರೆ ಸಹಾಬಿಗಳಿಲ್ಲವೆಂದೇ ಹೇಳಬಹುದು. ಏಕೆಂದರೆ ಇತರ ಸಹಾಬಿಗಳಂತೆ ಅವರಿಗೆ ಕೌಟುಂಬಿಕ ಹೊಣೆಗಾರಿಕೆಗಳಿರಲಿಲ್ಲ. ಆದ್ದರಿಂದ ಅವರು ಪ್ರವಾದಿವರ್ಯರನ್ನು(ಸ) ನೆರಳಿನಂತೆ ಹಿಂಬಾಲಿಸಿ ಅವರ ಗುಣನಡತೆಗಳನ್ನು ಸಂಪೂರ್ಣವಾಗಿ ಅಭ್ಯಸಿಸಿದರು. ಹದೀಸ್‌ಗಳನ್ನು ಅವರು ಅತ್ಯುತ್ಸಾಹದಿಂದ ಕಲಿತುಕೊಳ್ಳುತ್ತಿದ್ದರು. ರಾತ್ರಿಯ ಪ್ರಥಮ ಜಾವದಲ್ಲಿ ಅವರು ನಿದ್ರಿಸಿ, ಉಳಿದ ಸಮಯವನ್ನು ಸಂಪೂರ್ಣವಾಗಿ ಹದೀಸ್ ಅಧ್ಯಯನಕ್ಕೆ ವಿನಿಯೋಗಿಸುತ್ತಿದ್ದರು. ಅವರು ಮರೆತು ಹೋಗದಿರಲೆಂದು ಹದೀಸ್‌ಗಳನ್ನು ಬರೆದಿಡುತ್ತಿದ್ದರು.

ಹದೀಸ್‌ಗಳನ್ನು ಕಲಿಯುವುದರೊಂದಿಗೆ ಅವುಗಳನ್ನು ಜನರ ಮಧ್ಯೆ ಪ್ರಚಾರ ಮಾಡಲೂ ಪ್ರಯತ್ನಿಸಿದರು. ಪೇಟೆಯಲ್ಲಿಯೂ ಮನೆಯಲ್ಲಿಯೂ ಬೀದಿ ಯಲ್ಲಿಯೂ ಅವರು ಜನರಿಗೆ ಹದೀಸ್ ಹೇಳಿಕೊಡುತ್ತಿದ್ದರು.

ಪ್ರವಾದಿಯವರ(ಸ) ನಡತೆಗೆ ವಿರುದ್ಧವಾಗಿ ವರ್ತಿಸುವವರನ್ನು ತಡೆದು ನಿಲ್ಲಿಸಿ ಪ್ರಶ್ನಿಸುತ್ತಿದ್ದರು. ಈ ನಿಟ್ಟಿನಲ್ಲಿ ಯಾರ ಸ್ಥಾನಮಾನ ಅಥವಾ ಗಣ್ಯತೆಯನ್ನೂ ಅವರು ಲೆಕ್ಕಿಸುತ್ತಿರಲಿಲ್ಲ. ಆ ಕುರಿತು ಒಂದು ಘಟನೆಯನ್ನು ವಿವರಿಸುತ್ತೇನೆ: "ಒಮ್ಮೆ ಮಹಿಳೆಯೋರ್ವಳು ಸುಗಂಧ ದ್ರವ್ಯಗಳನ್ನು ಪೂಸಿ ಮಸೀದಿಗೆ ಹೋಗುತ್ತಿರುವುದನ್ನು" ಅವರು ನೋಡಿದರು. "ಮಸೀದಿಗೆ ಹೋಗುತ್ತಿರುವಿರಾ?" ಅಬೂ ಹುರೈರಃ(ರ) ಗೌರವಭಾವದಿಂದ ಪ್ರಶ್ನಿಸಿದರು. 'ಹೌದು' ಆ ಮಹಿಳೆ ಉತ್ತರಿಸಿದರು. ಆಗ ಆ ಸಹಾಬಿವರ್ಯರ ಮುಖವು ಸಿಟ್ಟಿನಿಂದ ಕೆಂಪಾಯಿತು. ಅವರು ಹೀಗೆಂದರು: "ಮಹಿಳೆಯರು ಹೊರ ಬರುವಾಗ ಸುಗಂಧ ದ್ರವ್ಯಗಳನ್ನು ಲೇಪಿಸ ಬಾರದೆಂದು ಪ್ರವಾದಿ(ಸ) ಹೇಳಿರುವುದನ್ನು ಮರೆತಿರಾ? ಇನ್ನು ಮುಂದೆ ಹೀಗೆ ಮಾಡಬೇಡಿ" ಇದನ್ನು ಆಲಿಸಿದ ಆ ಮಹಿಳೆಯು ಮನೆಗೆ ಹಿಂತಿರುಗಿದರು. ಒಳಿತಿನ ಉಪದೇಶ ಮತ್ತು ಕೆಡುಕಿನ ನಿಷೇಧವು ಮುಸ್ಲಿಮರ ಕಡ್ಡಾಯ ಕರ್ತವ್ಯ ವೆಂಬ ನಂಬಿಕೆಯೇ ಅಬೂ ಹುರೈರಃರ(ರ) ಈ ನಡತೆಗೆ ಪ್ರೇರಕವಾಗಿತ್ತು.

## ಪ್ರವಾದಿ ಪ್ರೇಮ

ಪ್ರವಾದಿ ಪ್ರೇಮವು ವಿಶ್ವಾಸದ ಪ್ರತ್ಯಕ್ಷ ದೃಷ್ಟಾಂತವಾಗಿದೆ. ಈ ವಿಷಯವನ್ನು ಪ್ರವಾದಿವರ್ಯರೇ(ಸ) ಬಹಿರಂಗಪಡಿಸಿದ್ದಾರೆ. ಅವರು ಹೀಗೆ ಹೇಳಿದರು: "ತನ್ನ ಸಂತಾನಗಳು, ಮಾತಾಪಿತರು ಮತ್ತು ಸಮಸ್ತ ಜನರಿಗಿಂತ ಹೆಚ್ಚಾಗಿ ನನ್ನನ್ನು ಪ್ರೀತಿಸದವರ ಈಮಾನ್ ಪೂರ್ಣವಾಗಲಾರದು." ಈ ಬಗ್ಗೆ ಸಹಾಬಿಗಳು ತೋರಿದ ಮಾದರಿಯು ಲೋಕದ ಇನ್ನಾವ ನಾಯಕನ ಅನುಯಾಯಿಗಳಲ್ಲಿಯೂ ದೊರೆಯಲಾರದು. ಅಬೂ ಹುರೈರರ(ರ) ಪ್ರವಾದಿ ಪ್ರೇಮವು ಅತುಲ್ಯವಾಗಿದೆ. ಆ ನಿಷ್ಕಳಂಕ ಪ್ರೇಮದ ಒಂದು ಉದಾಹರಣೆಯನ್ನು ನೋಡಿರಿ:

"ಒಮ್ಮೆ ಅಬೂ ಹುರೈರಃ(ರ) ಮತ್ತಿತರ ಸಹಾಬಿಗಳು ಪ್ರವಾದಿಯವರ ಸುತ್ತಲೂ ಕುಳಿತು ಅವರ ಉಪದೇಶಗಳನ್ನು ಆಲಿಸುತ್ತಿದ್ದರು. ತನ್ಮಧ್ಯೆ ಪ್ರವಾದಿ ವರ್ಯರು(ಸ) ಏನೋ ಅಗತ್ಯ ಕಾರ್ಯಕ್ಕಾಗಿ ಹೊರಗೆ ಹೋದರು. ಪ್ರವಾದಿ ವರ್ಯರು(ಸ) ತುಂಬಾ ಹೊತ್ತು ಮರಳಿ ಬಾರದಿರುವುದನ್ನು ನೋಡಿದಾಗ ಅನುಚರರಿಗೆ ತುಂಬಾ ಕಸಿವಿಸಿಯಾಯಿತು. ಹ.ಅಬೂ ಹುರೈರರು(ರ) ಅತ್ಯಂತ ವ್ಯಾಕುಲಗೊಂಡರು. ಅವರಿಗೆ ಅಲ್ಲಿ ಕುಳಿತಿರಲಾಗಲಿಲ್ಲ. ಅವರು ಕೂಡಲೇ ಪ್ರವಾದಿವರ್ಯರನ್ನು(ಸ) ಹುಡುಕುತ್ತಾ ಹೊರಟುಬಿಟ್ಟರು. ತುಂಬಾ ಸಮಯ ಸುತ್ತಾಡಿದ ಬಳಿಕ ಪ್ರವಾದಿ ಯವರು(ಸ) ಒಂದು ತೋಟದಲ್ಲಿ ಕುಳಿತಿರುವುದನ್ನು ಕಂಡರು. ಅಬೂ ಹುರೈರರ(ರ) ಕಳವಳ ತೊಲಗಿತು. ಆ ಮುಖದಲ್ಲಿ ಸಂತೋಷ ಲಾಸ್ಯವಾಡಿತು. ಅಬೂ ಹುರೈರರು(ರ) ಆ ತೋಟದ ಒಂದು ಸಣ್ಣ ನೀರಿನ ನಾಲೆಯ ಮೂಲಕ ಒಳಗೆ ನುಗ್ಗಿದರು. "ಅಬೂ ಹುರೈರಃ(ರ) ಏನು ವಿಶೇಷ?" ಪ್ರವಾದಿ(ಸ) ಪ್ರಶ್ನಿಸಿದರು. "ಏನೂ ಇಲ್ಲ, ತಮ್ಮನ್ನು ಕಾಣದಿರುವ ಕಳವಳದಿಂದ ಓಡಿ ಬಂದೆ" ಎಂದು ಅಬೂ ಹುರೈರಃ(ರ) ಹೇಳಿದರು. ಅವರಿಗೆ ಪ್ರವಾದಿವರ್ಯರನ್ನು(ಸ) ಕ್ಷಣಕಾಲವೂ ಅಗಲಿರಲಾಗುತ್ತಿರಲಿಲ್ಲವೆಂದು ಈ ಘಟನೆಯಿಂದ ವ್ಯಕ್ತವಾಗುತ್ತದೆ.

## ರಾಜ್ಯಪಾಲ

ಹ.ಉಮರುಲ್ ಫಾರೂಕ್‌ರ(ರ) ಆಡಳಿತ ಕಾಲದಲ್ಲಿ ಅಬೂ ಹುರೈರರು(ರ) ಬಹರೈನ್‌ನ ರಾಜ್ಯಪಾಲ ಹುದ್ದೆಯನ್ನು ಅಲಂಕರಿಸಿದ್ದರು. ಹ.ಮುಆವಿಯಾರ(ರ) ಕಾಲದಲ್ಲಿ ಸ್ವಲ್ಪಕಾಲ ಮದೀನಾದ ಅಮೀರ್ ಆಗಿ ನೇಮಕಗೊಂಡಿದ್ದರು. ಉದ್ಯೋಗ ಕಾಲದಲ್ಲಿಯೂ ಅವರ ಜೀವನವು ಅತ್ಯಂತ ಸರಳವಾಗಿತ್ತು. ರಾಜ್ಯಪಾಲರಾಗಿದ್ದ ವೇಳೆಯೇ ಅವರು ಸೌದೆ ಹೊತ್ತುಕೊಂಡು ಹೋಗುತ್ತಿದ್ದರು. ಅಹಂಕಾರ ಮತ್ತು ದರ್ಪಗಳು ಅವರ ಗುಣನಡತೆಗಳಲ್ಲಿ ಸೋಂಕಿರಲಿಲ್ಲ.

## ನಿಧನ

ಅಬೂ ಹುರೈರರು(ರ) ಹಿಜರಿ 57ರಲ್ಲಿ ಹಾಸಿಗೆ ಹಿಡಿದರು. ಅವರು ರೋಗಗ್ರಸ್ಥರಾಗಿದ್ದಾಗ ಅಸಂಖ್ಯಾತ ಮಂದಿ ರಾತ್ರೆ-ಹಗಲು ಅವರನ್ನು ಸಂದರ್ಶಿಸಿ ಆರೋಗ್ಯವಂತರಾಗಲೆಂದು ಪ್ರಾರ್ಥಿಸುತ್ತಿದ್ದರು. ಅವರು ರೋಗ ಶಯ್ಯೆಯಲ್ಲಿದ್ದಾಗ ಹಲವು ಬಾರಿ ಬಿಕ್ಕಿಬಿಕ್ಕಿ ಅಳುತ್ತಿದ್ದರು. ಆ ಬಗ್ಗೆ ವಿಚಾರಿಸಿದಾಗ ಅವರು ಹೀಗೆ ಉತ್ತರಿಸಿದರು: "ನನ್ನ ಇಹಲೋಕದ ಸಂಬಂಧ ಕಡಿಯುವುದಕ್ಕಾಗಿ ನಾನು ಅಳುತ್ತಿಲ್ಲ. ಪರಲೋಕದ ಸುದೀರ್ಘ ಹಾಗೂ ದುರಂತಮಯ ಯಾತ್ರೆಯನ್ನು ಜ್ಞಾಪಿಸಿ ಅಳುತ್ತಿದ್ದೇನೆ. ಅಯ್ಯೋ! ನನ್ನ ಭವಿಷ್ಯ ಹೇಗಿರಬಹುದು? "ನನ್ನ ಹಾದಿಯು ನರಕದ ಕಡೆಗೋ ಅಥವಾ ಸ್ವರ್ಗದೆಡೆಗೋ ಎಂಬುದು ತಿಳಿದಿಲ್ಲ. "ಅದೇ ವರ್ಷ ಆ ಮಹಾ ಸಾತ್ವಿಕರು ನಿಧನರಾದರು. ಇನ್ನಾಲಿಲ್ಲಾಹಿ.... ಮರಣ ವೇಳೆ ಅವರಿಗೆ 78 ವರ್ಷ ಪ್ರಾಯವಾಗಿತ್ತು. ಸಹಸ್ರಾರು ಸೌಭಾಗ್ಯಶಾಲಿ ಸಹಾಬಿವರ್ಯರು ಅಂತಿಮ ವಿಶ್ರಾಂತಿ ಪಡೆಯುವ 'ಜನ್ನತುಲ್ ಬಕೀಅ್'ನಲ್ಲಿ ಅವರನ್ನು ದಫನ ಮಾಡಲಾಯಿತು.

***

# ಹ. ಜಅ್‌ಫರ್ ತ್ವಯ್ಯಾರ್(ರ)

**ಹ.** ಜಅ್‌ಫರ್ ತ್ವಯ್ಯಾರ್(ರ) ಪ್ರವಾದಿವರ್ಯರ(ಸ) ಖ್ಯಾತ ಸಹಾಬಿಗಳಲ್ಲಿ ಅಗ್ರಗಣ್ಯರಾಗಿದ್ದಾರೆ. ಅವರು ಪ್ರವಾದಿವರ್ಯರ(ಸ) ಚಿಕ್ಕಪ್ಪನ ಪುತ್ರ ಮತ್ತು ವಿಶ್ವ ವಿಖ್ಯಾತರಾದ ಹ.ಅಲೀಯವರ(ರ) ಸಹೋದರರಾಗಿದ್ದಾರೆ. ಇಸ್ಲಾಮಿನ ವಿಕಾಸ ಮತ್ತು ಪ್ರಚಾರಗಳಿಗಾಗಿ ಪ್ರವಾದಿವರ್ಯರು(ಸ) ನಡೆಸಿದ ಎಲ್ಲ ಕಾರ್ಯಕ್ರಮ ಗಳಲ್ಲಿಯೂ ಅವರು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಅವರ ನಿಷ್ಕಳಂಕ ಈಮಾನಿನ ಓಜಸ್ಸು ಮತ್ತು ಅದ್ವಿತೀಯ ಇಸ್ಲಾಮೀ ಸ್ಫೂರ್ತಿಯು ರೋಮಾಂಚಕ ವಾಗಿದ್ದಿತು. ಮಳೆಗಾಲದ ಬಿರುಗಾಳಿಯಂತೆ ಹೊಡೆದಪ್ಪಳಿಸುತ್ತಿದ್ದ ಹಿಂಸೆ-ದೌರ್ಜನ್ಯಗಳ ಮುಂದೆ ಮರಣ ಸುನಿಶ್ಚಿತವೆಂಬ ಸನ್ನಿವೇಶದಲ್ಲಿಯೂ ಅವರ ಈಮಾನ್ ವಿಚಲಿತವಾಗಲಿಲ್ಲ! ಅವರ ಪಾದಗಳು ಕದಲಲಿಲ್ಲ! ಸತ್ಯಧರ್ಮಕ್ಕಾಗಿ ಅವರು ಅನೇಕ ಶೋಚನೀಯ ಯಾತನೆಗಳನ್ನು ಅನುಭವಿಸಿದರು.

## ಅಬಿಸೀನಿಯಾದಲ್ಲಿ

'ಹಿಂಸಾ ಕೃತ್ಯಗಳು' ತೀಕ್ಷ್ಣಗೊಂಡಾಗ ಪ್ರವಾದಿವರ್ಯರು(ಸ) ತಮ್ಮ ಕೆಲವಾರು ಅನುಯಾಯಿಗಳಿಗೆ ಅಬಿಸೀನಿಯಾ(ಇಥಿಯೋಪಿಯಾ)ಕ್ಕೆ ಹೋಗುವಂತೆ ಆದೇಶಿಸಿದರು. ಹ.ಜಅ್‌ಫರ್‌ರು(ರ) ಆ ತಂಡದಲ್ಲಿದ್ದರು. ಅದು ಇಸ್ಲಾಮಿನ ಪ್ರಥಮ ವಲಸೆಯಾಗಿದ್ದಿತು. ಇಸ್ಲಾಮಿನ ಹಾದಿಯಲ್ಲಿ ಸರ್ವಸ್ವವನ್ನೂ ತ್ಯಜಿಸಲು ಸಿದ್ಧವೆಂಬುದನ್ನು ಜಅ್‌ಫರ್ ತ್ವಯ್ಯಾರ್‌ರು(ರ) ಆ ಮೂಲಕ ಬಹಿರಂಗಪಡಿಸಿದರು.

ಆದರೆ ಶತ್ರುಗಳು ಸುಮ್ಮನಾಗಲಿಲ್ಲ. ಜಅ್‌ಫರ್(ರ) ಮತ್ತು ತಂಡವು ಅಬಿಸೀನಿಯಾಕ್ಕೆ ವಲಸೆ ಹೋದ ಸುದ್ದಿಯು ಅವರನ್ನು ದಿಗಿಲುಗೊಳಿಸಿತು. ಅವರು ಅತ್ಯಂತ ಕಸಿವಿಸಿಗೊಂಡರು. ಇದಕ್ಕೆ ತುರ್ತು ಪರಿಹಾರ ಕಂಡು ಹಿಡಿಯದಿದ್ದರೆ ಪರಿಸ್ಥಿತಿ ಕೈಮೀರುವುದೆಂದು ಅವರು ಭಾವಿಸಿದರು. ಕೊನೆಗೆ ನಜ್ಜಾಶಿ ರಾಜನ ಬಳಿಗೆ ರಾಯಭಾರೀ ತಂಡವನ್ನು ಕಳುಹಿಸಿ, ಜಅ್‌ಫರ್(ರ) ಮತ್ತು ಸಂಗಡಿಗರನ್ನು ಹೊರ ಹಾಕುವಂತೆ ವಿನಂತಿಸಬೇಕೆಂದು ನಿರ್ಧರಿಸಿದರು.

## ರಾಯಭಾರಿ ತಂಡದ ವೈಫಲ್ಯ

ಪ್ರಸ್ತುತ ತಂತ್ರದಂತೆ ಆಯ್ದ ಇಬ್ಬರು ವ್ಯಕ್ತಿಗಳನ್ನು ಕಪ್ಪಕಾಣಿಕೆಗಳೊಂದಿಗೆ ಅಬಿಸೀನಿಯಾಕ್ಕೆ ಕಳುಹಿಸಿದರು. ಆ ರಾಯಭಾರಿ ನಿಯೋಗವು ನಜ್ಜಾಶಿ ರಾಜನನ್ನು ಭೇಟಿಯಾಗಿ ಹೀಗೆಂದಿತು: "ಮಹಾರಾಜರೇ! ನಮ್ಮ ಊರಿನ ಕೆಲವು ಯುವಕರು ಇಲ್ಲಿ ಬಂದು ನೆಲೆಸಿರುವರೆಂದು ತಿಳಿದು ಬಂದಿದೆ. ಅವರನ್ನು ನಮ್ಮೊಂದಿಗೆ ಕಳುಹಿಸುವ ಕೃಪೆ ತೋರಬೇಕು! ನಾವು ಯುಗಾಂತರಗಳಿಂದ ಇರಿಸಿಕೊಂಡಿರುವ ಆಚಾರ ವಿಚಾರಗಳನ್ನು ತುಚ್ಛೀಕರಿಸುವ ಆಂದೋಲನಕ್ಕೆ ಅವರು ಸೇರಿದ್ದಾರೆ. ಅಂತಹ ಜನರಿಗೆ ನೀವು ಯಾವ ರೀತಿಯಿಂದಲೂ ಆಶ್ರಯ ನೀಡಬಾರದು. ಈ ವಿಷಯವನ್ನು ತಮ್ಮಲ್ಲಿ ಅರಿಕೆ ಮಾಡಿ ಕೊಳ್ಳಲಿಕ್ಕಾಗಿ, ಅವರ ಸಂಬಂಧಿಕರು ನಮ್ಮನ್ನು ಇಲ್ಲಿಗೆ ಕಳುಹಿಸಿದ್ದಾರೆ. "ನಜ್ಜಾಶಿ ರಾಜನು ಓರ್ವ ಕ್ರೈಸ್ತನಾಗಿದ್ದರೂ ಬಹಳ ಸಜ್ಜನನಾಗಿದ್ದರು. ಸಂಪೂರ್ಣ ಮಾಹಿತಿ ದೊರೆಯದೆ, ಯಾವ ಕ್ರಮ ಕೈಗೊಳ್ಳಲೂ ಅವರು ಸಿದ್ಧರಾಗಲಿಲ್ಲ. ಮುಸ್ಲಿಮರನ್ನು ಕರೆಸಿ ವಿಚಾರಿಸಿದ ಬಳಿಕ ಸೂಕ್ತ ಕ್ರಮಕೈಗೊಳ್ಳುವೆನೆಂದು ತಿಳಿಸಿದರು. ತಕ್ಷಣವೇ ಮುಸ್ಲಿಮರನ್ನು ಕರೆಸಿ, ಅವರ ಆದರ್ಶ ವಿಶ್ವಾಸಗಳನ್ನು ವಿವರಿಸುವಂತೆ ವಿನಂತಿಸಿದರು. ಅದರಂತೆ ಹ.ಜಲ್‌ಫರ್‌ರು(ರ) ಧೈರ್ಯದಿಂದ ರಾಜನ ಮುಂದೆ ಎದ್ದು ನಿಂತು ಉಜ್ವಲವಾಗಿ ಭಾಷಣ ಮಾಡಿದರು. ಅದನ್ನು ಹೀಗೆ ಸಂಕ್ಷೇಪಿಸಬಹುದು.

ಮಹಾರಾಜರೇ! ನಾವು ಬಹಳ ಅಜ್ಞರಾಗಿದ್ದೆವು. ನಾವು ಮೂರ್ತಿ ಪೂಜಕರಾಗಿದ್ದು ಶವವನ್ನು ತಿನ್ನುತ್ತಿದ್ದೆವು. ದುಷ್ಕೃತ್ಯಗಳಲ್ಲಿ ನಿರತರಾಗಿದ್ದೆವು. ನೆರೆಕರೆಯವರನ್ನೂ ದುರ್ಬಲರನ್ನೂ ನಿರ್ಲಜ್ಜೆಯಿಂದ ಹಿಂಸಿಸುತ್ತಿದ್ದೆವು! ಇತರರ ಹಕ್ಕುಗಳನ್ನು ಅಕ್ರಮವಾಗಿ ಕಬಳಿಸುತ್ತಿದ್ದೆವು. ಈ ಗಾಢಾಂಧಕಾರದಲ್ಲಿ ನಾವೊಂದು ಬೆಳಕು ಕಂಡೆವು. ದೇವನಿಯುಕ್ತ ಪ್ರವಾದಿ ಮುಹಮ್ಮದರೇ(ಸ) ಆ ಬೆಳಕು. ನಾವು ಆ ಬೆಳಕನ್ನು ಅನುಗಮಿಸಿದೆವು. ಅವರು ಸತ್ಯನಿಷ್ಠ ಮತ್ತು ಪ್ರಾಮಾಣಿಕರಾಗಿದ್ದಾರೆ. ಮೂರ್ತಿಪೂಜೆ ಯನ್ನು ತ್ಯಜಿಸಬೇಕು. ದೇವನೊಂದಿಗೆ ಯಾರನ್ನೂ ಸಹಭಾಗಿಗೊಳಿಸಬಾರದು, ದೇವನು ಏಕಮಾತ್ರನೆಂದೂ ಅವರು ನಮಗೆ ಬೋಧಿಸಿದರು. ಸತ್ಯ ಮತ್ತು ನ್ಯಾಯಗಳನ್ನು ಅವರು ನಮಗೆ ಕಲಿಸಿದರು. ನೆರೆಕರೆಯವರೊಂದಿಗೂ ಬಂಧುಮಿತ್ರಾದಿಗಳೊಂದಿಗೂ ಮಮತೆ ಮತ್ತು ಪ್ರೀತಿಯಿಂದ ವರ್ತಿಸುವಂತೆ ನಮಗೆ ಉಪದೇಶಿಸಿದರು. ಸುಳ್ಳು ಹೇಳುವವರಿಗೂ ಅನ್ಯರ ಹಕ್ಕುಗಳನ್ನು ಕಬಳಿಸುವವರಿಗೂ ಎಚ್ಚರಿಕೆ ನೀಡಿದರು. ಇಂತಹ ಸತ್ಕಾರ್ಯಗಳನ್ನೇ ಅವರು ನಮಗೆ ಕಲಿಸಿಕೊಟ್ಟಿದ್ದಾರೆ. ಅವುಗಳನ್ನು ಅಂಗೀಕರಿಸಿದುದಕ್ಕಾಗಿ ಜನರು ನಮ್ಮನ್ನು ಪೀಡಿಸಲಾರಂಭಿಸಿದರು. ಅವರ ಹಿಂಸೆ ತಾಳಲಾಗದೆ ಪ್ರವಾದಿಯ(ಸ) ಆಜ್ಞೆಯಂತೆ ನಾವು ಇಲ್ಲಿ ಆಶ್ರಯ ಪಡೆದಿದ್ದೇವೆ.

ಹ.ಜಲ್‌ಫರ್‌ರ(ರ) ಭಾಷಣವು ನಜ್ಜಾಶಿಯ ಹೃದಯದಲ್ಲಿ ಭಾರೀ ಕೋಲಾಹಲ ನಿರ್ಮಿಸಿತು. ಆ ಸಂಕ್ಷಿಪ್ತ ಹಾಗೂ ಸಾರಸಂಪೂರ್ಣ ಭಾಷಣದಿಂದ ನಜ್ಜಾಶಿ ಬಹಳ ಪ್ರಭಾವಿತರಾದರು. "ನಿಮ್ಮ ಪ್ರವಾದಿಗೆ ಅವತೀರ್ಣಗೊಂಡಿರುವ ದಿವ್ಯಗ್ರಂಥದ ಕೆಲವು ವಾಕ್ಯಗಳನ್ನು ಓದಿ ಹೇಳಿರಿ" ಎಂದು ನಜ್ಜಾಶಿ ಹೇಳಿದರು. ನಜ್ಜಾಶಿಯ ಮನೋಧರ್ಮವನ್ನು ಪರಿಗಣಿಸಿ ಜಲ್‌ಫರ್‌ರು(ರ) ಸೂರಃ ಮರ್ಯಮ್‌ನ ಕೆಲವು ವಾಕ್ಯಗಳನ್ನು ಪಠಿಸಿದರು. ಕುರ್‌ಆನಿನ ಈ ಸಣ್ಣ ವಾಕ್ಯಗಳನ್ನು ಆಲಿಸಿದಾಗ ನಜ್ಜಾಶಿ ನಿಬ್ಬೆರಗಾಗಿ ಹೀಗೆ ಹೇಳಿದರು:

"ದೇವನಾಣೆ! ಇದು ಮತ್ತು ತೌರಾತ್ ಒಂದೇ ದೀಪದ ಎರಡು ಕಿರಣಗಳಾಗಿವೆ."

ಈ ವಿದ್ಯಮಾನಗಳಿಂದ ಕುರೈಶರ ರಾಯಭಾರೀ ತಂಡಕ್ಕೆ ಮುಖಭಂಗವಾಯಿತು. ಅವರ ನಿರೀಕ್ಷೆಗಳು ಭಗ್ನಗೊಂಡುವು. ಅವರು ಇನ್ನೊಂದು ತಂತ್ರ ಪ್ರಯೋಗಿಸಿದರು. 'ಮಹಾರಾಜರೇ, ಈಸಾರ(ಅ) ಬಗ್ಗೆ ಇವರ ನಂಬಿಕೆಯು ಅತ್ಯಂತ ವಿಕೃತವಾಗಿದೆ. ಅದು ಓರ್ವ ಕ್ರೈಸ್ತನಿಗೂ ಸಹ್ಯವಲ್ಲ' ಎಂದರು. ಕೂಡಲೇ ಈ ಕುರಿತು ನಿಮ್ಮ ನಿಲುಮೆಯೇನೆಂದು ನಜ್ಜಾಶಿ ಪ್ರಶ್ನಿಸಿದರು. ಆಗ ಜಲ್‌ಫರ್‌ರು(ರ), "ಅವರು(ಈಸಾ) ಅಲ್ಲಾಹನ ದಾಸ ಮತ್ತು ಪ್ರವಾದಿಯೆಂದು ನಾವು ನಂಬುತ್ತೇವೆ" ಎಂದುತ್ತರಿಸಿದರು. ಈ ಉತ್ತರದಿಂದ ನಜ್ಜಾಶಿ ರಾಜನಿಗೆ ಇನ್ನಷ್ಟು ಸಂತೋಷವಾಯಿತು. ಅವರು ನೆಲದಿಂದ ಒಂದು ಹುಲ್ಲುಕಡ್ಡಿಯನ್ನು ಹೆಕ್ಕಿ "ದೇವನಾಣೆ, ಪ್ರವಾದಿ ಈಸಾರ ಕುರಿತು ನಿಮ್ಮ ನಂಬಿಕೆ ಮತ್ತು ವಾಸ್ತವಿಕತೆಯ ಮಧ್ಯೆ ಈ ಕಡ್ಡಿ ತುಂಡಿನಷ್ಟು ಅಂತರವೂ ಇಲ್ಲ" ಎಂದರು. ಅನಂತರ ನಜ್ಜಾಶಿಯು ಕುರೈಶರ ಮನವಿಯನ್ನು ತಿರಸ್ಕರಿಸಿ, ಮುಸ್ಲಿಮರಿಗೆ ನೆಮ್ಮದಿಯಿಂದ ಅಲ್ಲಿಯೇ ಉಳಕೊಳ್ಳುವ ಅನುಮತಿ ನೀಡಿದರು.

## ಮದೀನಾಕ್ಕೆ

ಜಲ್‌ಫರ್(ರ) ಮತ್ತು ಸಂಗಡಿಗರು ಹಲವು ಕಾಲ ಅಲ್ಲಿಯೇ ಜೀವಿಸಿದರು. ಹಿಜರಿ ಏಳನೇ ವರ್ಷ ಖೈಬರ್ ವಿಜಯದ ಬಳಿಕ ಅವರು ಮದೀನಾಕ್ಕೆ ಹೊರಟರು. ಪ್ರವಾದಿ(ಸ) ಮತ್ತು ಅನುಚರರು ಅವರನ್ನು ಸಂತೋಷದಿಂದ ಸ್ವಾಗತಿಸಿದರು. ಆ ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ನನ್ನ ಸಂತೋಷಕ್ಕೆ ಖೈಬರ್ ವಿಜಯ ಕಾರಣವೋ ಅಥವಾ ಜಲ್‌ಫರ್‌ರ(ರ) ಆಗಮನವೋ ಎಂದು ತಿಳಿಯುತ್ತಿಲ್ಲ" ಎಂದು ಹೇಳಿದ್ದರು.

## ವೀರ ಪರಾಕ್ರಮಿ

ಸುಪ್ರಸಿದ್ಧವಾದ "ಮೂತಾ" ಯುದ್ಧದಲ್ಲಿ ಹ.ಜಲ್‌ಫರ್ ತ್ವಯ್ಯಾರ್‌ರು(ರ) ತೋರಿದ ವೀರ ಪರಾಕ್ರಮವು ಇಸ್ಲಾಮೀ ಇತಿಹಾಸದ ಅನರ್ಘ್ಯ ದಾಖಲೆ ಯಾಗಿದೆ. ಸಾಗರದಂತೆ ವಿಶಾಲವಾದ, ಒಂದು ಲಕ್ಷಕ್ಕೂ ಮಿಕ್ಕಿದ ರೋಮನ್

ಸೇನೆಯನ್ನು ಎದುರಿಸಲಿಕ್ಕಾಗಿ ಕೇವಲ ಮೂರು ಸಾವಿರ ಮುಸ್ಲಿಮ್ ಯೋಧರು ಹೊರಟಿದ್ದರು. ಝೈದ್ ಬಿನ್ ಹಾರಿಸರ(ರ) ನಾಯಕತ್ವದಲ್ಲಿ ಮುಸ್ಲಿಮ್ ಸೇನೆಯು ಆವೇಶಭರಿತವಾಗಿತ್ತು. ಯುದ್ಧ ಪ್ರಾರಂಭಗೊಂಡ ಕೆಲವೇ ಗಂಟೆಗಳಲ್ಲಿ ಆ ವೀರ ಸೇನಾನಿ ಹುತಾತ್ಮರಾದರು. ತರುವಾಯ ಜಲ್‌ಫರ್‌ರು(ರ) ಇಸ್ಲಾಮಿ ಧ್ವಜವನ್ನು ಎತ್ತಿ ಹಿಡಿದರು. ನಾಲ್ದೆಸೆಗಳಿಂದಲೂ ವೈರಿಗಳು ಆ ರಣವೀರನ ಮೇಲೆ ಬಾಣದ ಸುರಿಮಳೆಗೈದರು. ಬಾಣದ ಚೂಪು ಮೊನೆಗಳು ದೇಹವನ್ನು ಹೊಕ್ಕರೂ ಜಿಹಾದ್‌ನ ಆವೇಶ ಕುಗ್ಗಲಿಲ್ಲ. ಫಕ್ಕನೆ ಓರ್ವ ವೈರಿ ಸೈನಿಕನು ಅವರ ಧ್ವಜ ಹಿಡಿದಿದ್ದ ಕೈಯನ್ನೇ ತುಂಡರಿಸಿದನು. ಆದರೆ ಆ ವೀರ ಸೇನಾನಿಯು ಹತಾಶನಾಗದೆ ಹೋರಾಡಿ ಇನ್ನೊಂದು ಕೈಯಲ್ಲಿ ಧ್ವಜವನ್ನು ಹಿಡಿದರು. ಅಷ್ಟರಲ್ಲಿ ಆ ಕರವೂ ಛೇದಿಸಲ್ಪಟ್ಟಿತು. ಆಗ ಅವರು ಧ್ವಜವನ್ನು ಕಂಕುಳಲ್ಲಿ ಭದ್ರಗೊಳಿಸಿದರು. ತನಗೇ ಏನೇ ಸಂಭವಿಸಿದರೂ ಇಸ್ಲಾಮಿ ಧ್ವಜವನ್ನು ನೆಲಕ್ಕೆ ಬೀಳಲು ಬಿಡಲಾರೆನೆಂದು ದೃಢ ಪ್ರತಿಜ್ಞೆ ಮಾಡಿದರು. ಕಟ್ಟಕಡೆಗೆ ಅವರು ರಣಾಂಗಣದಲ್ಲಿ ಹುತಾತ್ಮರಾದರು. ಸುಪ್ರಸಿದ್ಧ ಸಹಾಬಿವರ್ಯರಾದ ಅಬ್ದುಲ್ಲಾ ಬಿನ್ ಉಮರ್(ರ) ಹೀಗೆ ಹೇಳಿದ್ದಾರೆ: "ಜಲ್‌ಫರ್‌ರ(ರ) ಮೃತದೇಹವನ್ನು ಪರಿಶೀಲಿಸಿದಾಗ ಕೇವಲ ಮುಂಭಾಗದಲ್ಲಿಯೇ 50ಕ್ಕೂ ಹೆಚ್ಚು ಗಾಯಗಳನ್ನು ನಾನು ಎಣಿಸಿದ್ದೆ."

ಹ. ಜಲ್‌ಫರ್‌ರ(ರ) ಆ ದಾರುಣ ಮರಣ ವಾರ್ತೆಯನ್ನು ಪ್ರವಾದಿಯವರಿಗೆ(ಸ) ಜಿಬ್ರೀಲ್(ಅ) ತಿಳಿಸಿದಾಗ, ಅವರ ಕಣ್ಣುಗಳಿಂದ ನೀರು ಧಾರಾಕಾರವಾಗಿ ಇಳಿಯಿತು. "ಜಲ್‌ಫರ್‌ರು(ರ) ದೇವಚರರೊಂದಿಗೆ ಸ್ವರ್ಗದಲ್ಲಿ ಹಾರಿ ನಲಿದಾಡುತ್ತಿರುವುದನ್ನು ನಾನು ನೋಡಿದೆ" ಎಂದು ಪ್ರವಾದಿ(ಸ) ಹೇಳಿದ್ದಾರೆ. ಆದ್ದರಿಂದಲೇ ಅವರು 'ಹಾರಾಡುವವರು' ಎಂಬರ್ಥದ ತ್ವಯ್ಯಾರ್ ಎಂಬ ಬಿರುದಿಗೆ ಪಾತ್ರರಾದರು.

## ನಿರ್ಗತಿಕರ ತಂದೆ

ಅವರ ಗುಣನಡತೆಯು ಮಾದರಿಯೋಗ್ಯ ಮತ್ತು ಅನುಕರಣಾರ್ಹವಾಗಿತ್ತು. ಆ ಜೀವನವು ಕುರ್‌ಆನ್ ಮತ್ತು ಸುನ್ನತ್‌ನ ತೇಜಸ್ಸಿನಿಂದ ಪುನೀತವಾಗಿತ್ತು.

ಬಡವರ ಹಿತದ ಬಗ್ಗೆ ಅವರಿಗಿದ್ದ ಕಾಳಜಿಯು ರೋಮಾಂಚಕವಾಗಿದೆ. ಅಬುಲ್ ಮಸಾಕೀನ್ (ನಿರ್ಗತಿಕರ ತಂದೆ) ಎಂದು ಪ್ರವಾದಿ(ಸ) ಅವರನ್ನು ಕರೆಯುತ್ತಿದ್ದರು.

"ಜಲ್‌ಫರ್! ನೀವು ರೂಪದಲ್ಲಿಯೂ ಗುಣದಲ್ಲಿಯೂ ನನ್ನನ್ನು ಹೋಲುತ್ತೀರಿ" ಎಂದು ಪ್ರವಾದಿ(ಸ) ಹೇಳಿದ್ದರು. ಆ ಮಾತು ಎಷ್ಟೊಂದು ಅನ್ವರ್ಥವಾಗಿತ್ತೆಂಬುದಕ್ಕೆ ಅವರ ಇತಿಹಾಸವೇ ಸಾಕ್ಷಿಯಾಗಿದೆ.

***

# ಹ. ಸಅದ್ ಬಿನ್ ಅಬೀ ವಕ್ಕಾಸ್(ರ)

ಸುದೃಢ ವಿಶ್ವಾಸಿ, ಮಹಾತ್ಯಾಗಿ, ಸಮರ್ಥ ಸೇನಾ ನಾಯಕ, ಉತ್ಕೃಷ್ಟ ಗುಣವಂತ ಎಂಬೀ ಸ್ತರಗಳಲ್ಲಿ ಖ್ಯಾತರಾಗಿದ್ದ ಪ್ರವಾದಿವರ್ಯರ(ಸ) ಪ್ರಮುಖ ಅನುಯಾಯಿಗಳಲ್ಲಿ ಹ.ಸಅದ್ ಬಿನ್ ಅಬೀವಕ್ಕಾಸ್ ಸೇರಿದ್ದಾರೆ. ಪ್ರವಾದಿಯವರ(ಸ) ಪಿತಾಮಹರಲ್ಲೋರ್ವರಾದ ವಹಬ್‌ರ ಸಂತಾನ ಸರಣಿಯಲ್ಲಿ ಹ.ಸಅದ್ ಹುಟ್ಟಿದರು. ಕೌಟುಂಬಿಕವಾಗಿ ನೋಡಿದರೆ ಅವರು ಪ್ರವಾದಿ ವರ್ಯರ(ಸ) ಸೋದರ ಮಾವ. ಸ್ವರ್ಗದ ಹಕ್ಕುದಾರರೆಂದು ಪ್ರವಾದಿ(ಸ) ಘೋಷಿಸಿರುವ 10 ಮಂದಿಯಲ್ಲಿ ಇವರ ಹೆಸರೂ ಸೇರಿದೆ.

## ಇಸ್ಲಾಮ್‌ನತ್ತ

ಸತ್ಯ ಮತ್ತು ಸನ್ಮಾರ್ಗ ಗೋಚರಿಸದೆ ಜನಪದವು ಹಾದಿ ತಪ್ಪಿ ಅಲೆಯುತ್ತಿದ್ದ ದುರ್ಗಮ ವಾತಾವರಣದಲ್ಲಿ ಹ.ಸಅದ್‌ರು(ರ) ಜನಿಸಿದರು. ಆದರೆ ಅಲ್ಲಾಹನು ಅವರನ್ನು ಶಿರ್ಕಿನ ಗಾಢಾಂಧಕಾರದಿಂದ ತೌಹೀದ್‌ನ ಹೊಂಬೆಳಕಿನತ್ತ ಸಾಗಿಸಿದನು. ಅವು ಇಸ್ಲಾಮಿನ ಆರಂಭದ ದಿನಗಳು. ಪ್ರವಾದಿವರ್ಯರು(ಸ) ಸತ್ಯಾಹ್ವಾನಕ್ಕಾಗಿ ರಂಗಕ್ಕಿಳಿದಿದ್ದ ಮೊದಲ ದಿನಗಳು. ಅದೇ ವೇಳೆ ಹ.ಸಅದ್‌ರು(ರ) ಹ. ಅಬೂಬಕರ್‌ರೊಂದಿಗೆ(ರ) ಪ್ರವಾದಿವರ್ಯರ(ಸ) ಬಳಿ ಬಂದು ಇಸ್ಲಾಮ್ ಸ್ವೀಕರಿಸಿದರು. ಅಂದು ಸಅದ್‌ರು(ರ) ಬಹಳ ಚಿಕ್ಕ ಪ್ರಾಯದವರಾಗಿದ್ದರು.

## ಎಲ್ಲೆಡೆ ಹಿಂಸೆ

ಆದಿಕಾಲದ ಮುಸ್ಲಿಮರು ವೈರಿಗಳ ಕ್ರೂರ ಹಿಂಸೆಗಳಿಗೆ ಗುರಿಯಾಗ ಬೇಕಾಯಿತು. ಕರುಳು ಹಿಂಡುವಂತಹ ಕ್ರೌರ್ಯ ದೌರ್ಜನ್ಯಗಳು ಎಲ್ಲೆಡೆಯಿಂದ ಅವರನ್ನು ಮುತ್ತಿದುವು. ಸುಡು ಮರಳಿನಲ್ಲಿ ಅಂಗಾತ ಮಲಗಿಸುವುದು, ಕಾದ ಲೋಹದ ಅಂಗಿಗಳನ್ನು ತೊಡಿಸುವುದು, ಕೊರಳಿಗೆ ಹಗ್ಗ ಕಟ್ಟಿ ಬೀದಿಯಲ್ಲಿ ಎಳೆದೊಯ್ದು ಮೆರವಣಿಗೆ ಮಾಡುವುದು ಇತ್ಯಾದಿ ಪೈಶಾಚಿಕ ಮರ್ದನಗಳಿಗೆ ಅವರು ಗುರಿಯಾಗಬೇಕಾಯಿತು. ಆದರೆ ಇಂತಹ ಪ್ರತಿಕೂಲ ವಾತಾವರಣ ದಲ್ಲಿಯೂ ಹ.ಸಅದ್‌ರ(ರ) ವಿಶ್ವಾಸ ಚಂಚಲವಾಗಲಿಲ್ಲ.

## ಮಾತೆಯ ನಿರಶನ

ಹ. ಸಅದ್‌ರು(ರ) ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರೆಂಬ ಸುದ್ದಿಯಿಂದ ಅವರ ತಾಯಿಯು ತೀವ್ರ ಅಚ್ಚರಿ ಮತ್ತು ಶೋಕ ವ್ಯಕ್ತ ಪಡಿಸಿದರು. ಕಟ್ಟಾ ಸಂಪ್ರದಾಯಸ್ಥೆಯಾಗಿದ್ದ ಆ ಮಾತೆಯು ಮಗನನ್ನು ಬಳಿ ಕರೆದು ಹಲ್ಲು ಕಡಿಯುತ್ತಾ ಇಂತೆಂದರು: "ನಿನಗೆ ನನ್ನೊಡನೆ ಕಿಂಚಿತ್ತಾದರೂ ಪ್ರೀತಿ ಮತ್ತು ಋಣ ಭಾರವಿದ್ದರೆ ಈಗಿಂದೀಗಲೇ ನೀನು ಮುಹಮ್ಮದ್‌ರ(ಸ) 'ದುರ್ಮಾರ್ಗ'ದಿಂದ ಹಿಂದೆ ಸರಿಯಬೇಕು." ಮಾತೆಯ ಈ ಬೆದರಿಕೆಯ ಮಾತುಗಳು ಅವರ ದೃಢವಿಶ್ವಾಸವನ್ನು ವಿಚಲಿತಗೊಳಿಸಲಿಲ್ಲ. ಮಾತೆಯು ಏನೇ ಮಾಡಿದರೂ ತಾನು ಸತ್ಯದಿಂದ ಹಿಂದೆ ಸರಿಯುವುದಿಲ್ಲವೆಂದು ಅವರು ಖಡಾಖಂಡಿತವಾಗಿ ಹೇಳಿದರು.

ಆ ಅಸಹಾಯಕ ಮಹಿಳೆಯು ನಿರಶನ ಕೈಗೊಳ್ಳಲು ಸಿದ್ಧರಾದರು. ಅವರು ಮೂರು ದಿನಗಳ ತನಕ ಅನ್ನ ನೀರು ಮುಟ್ಟದಿದ್ದರೂ ಹ.ಸಅದ್‌ರ(ರ) ನಿರ್ಧಾರ ಬದಲಾಗಲಿಲ್ಲ. ಮಾತೆಯ ಸ್ಥಿತಿ ಗಂಭೀರವಾದಾಗ ಅವರು ಪ್ರವಾದಿ ಯವರ(ಸ) ಬಳಿ ಹೋಗಿ ಈ ವಿಷಯವನ್ನು ತಿಳಿಸಿದರು. ಅಲ್ಲಾಹನಿಗೆ ಸಹಭಾಗಿಗಳನ್ನು ಸೇರಿಸುವ ವಿಷಯದಲ್ಲಿ ಮಾತಾಪಿತರು ಒತ್ತಾಯಿಸಿದರೆ ಸತ್ಯವಿಶ್ವಾಸಿಗಳು ಅನುಸರಿಸಬಾರದೆಂಬ ಕುರ್‌ಆನ್ ವಾಕ್ಯವನ್ನು ಪ್ರವಾದಿ(ಸ) ಉದ್ಧರಿಸಿದರು. ಅವರು ಅಲ್ಲಾಹನ ಆಜ್ಞೆಗಳನ್ನು ರವೆಯಷ್ಟು ಉಲ್ಲಂಘಿಸದೆ ಅದಕ್ಕಾಗಿ ಸರ್ವತ್ಯಾಗಗಳಿಗೂ ಸಿದ್ಧರಾದರು. ಹ.ಸಅದ್‌ರ(ರ) ಈ ಅಚಲ ನಿರ್ಧಾರದ ಮುಂದೆ ಅವರ ತಾಯಿಯು ಶರಣಾಗಬೇಕಾಯಿತು.

## ಮಕ್ಕಾ ಜೀವನ

ಇಸ್ಲಾಮ್ ಸ್ವೀಕರಿಸಿದ ಬಳಿಕ, ಅವರು ಪ್ರವಾದಿಯೊಂದಿಗೆ(ಸ) ಮಕ್ಕಾ ದಲ್ಲಿಯೇ ಜೀವಿಸಿದರು. ಈ ಅವಧಿಯಲ್ಲಿ ವೈರಿಗಳ ಎಲ್ಲ ಹಿಂಸೆಗಳನ್ನು ಸಂಯಮ ದಿಂದ ಸಹಿಸಿದರು. ಪ್ರಾರಂಭ ಕಾಲದಲ್ಲಿ ಮುಸ್ಲಿಮರು ಬಹಳ ಗುಪ್ತವಾಗಿ ನಮಾಝ್ ಮಾಡುತ್ತಿದ್ದರು. ಒಮ್ಮೆ ಸಅದ್‌ರು(ರ) ಗುಪ್ತ ಸ್ಥಳವೊಂದರಲ್ಲಿ ನಮಾಝ್ ಮಾಡುತ್ತಿದ್ದರು. ವೈರಿಗಳಿಗೆ ಹೇಗೋ ಅದರ ಸುಳಿವು ಸಿಕ್ಕಿತು. ಅವರ ಸುತ್ತಲೂ ನೆರೆದು ಕೇಕೇ ಹಾಕಿ ಅಸಭ್ಯ ರೀತಿಯಲ್ಲಿ ಹೀಯಾಳಿಸಿದರು. ಸಅದ್‌ರು(ರ) ತುಂಬಾ ಹೊತ್ತು ಅದನ್ನು ಸಹಿಸಿದರು. ಕಟ್ಟಕಡೆಗೆ ಬೇರೆ ಪರಿಹಾರವಿಲ್ಲದೆ ಅವರೊಂದಿಗೆ ಹೋರಾಟಕ್ಕೆ ಸಜ್ಜಾದರು. ವಿರೋಧಿ ತಂಡದಲ್ಲಿ ಹ. ಸಅದ್‌ರನ್ನು(ರ) ಪುಡಿಗುಟ್ಟುವಷ್ಟು ಜನರಿದ್ದರು. ಆದರೆ ಅವರು ಹೇಡಿಯಾಗಿರಲಿಲ್ಲ. ಬಳಿಯಲ್ಲಿಯೇ ಬಿದ್ದಿದ್ದ ಒಂಟೆಯ ಎಲುಬೊಂದನ್ನು ಕೈಯಲ್ಲಿ ಹಿಡಿದು ವೀರಾವೇಶದಿಂದ

ಹೋರಾಡಿದರು. ವಿರೋಧಿಗಳು ತುಂಬಾ ಹೊತ್ತು ಸೆಣಸಾಡಿದರೂ ಅವರನ್ನು ಸೋಲಿಸಲಾಗಲಿಲ್ಲ. ಕಟ್ಟಕಡೆಗೆ ವೈರಿಗಳೇ ಅಲ್ಲಿಂದ ಕಾಲು ಕೀಳಬೇಕಾಯಿತು. ಈ ಸಣ್ಣ ಕಾದಾಟದಲ್ಲಿ ಹ.ಸಅದ್‌ರ(ರ) ಪ್ರಹಾರದಿಂದ ಓರ್ವನು ಸಾವನ್ನಪ್ಪಿದನು.

## ಯುದ್ಧ ಶೌರ್ಯ

ಇಸ್ಲಾಮ್ ದಿನೇದಿನೇ ಪ್ರವರ್ಧಮಾನವಾಗುತ್ತಿರುವುದನ್ನು ಕಂಡ ವೈರಿಗಳು ದಿಗಿಲುಗೊಂಡರು. ಅದು ಸ್ವಾಭಾವಿಕವಾಗಿತ್ತು. ಇಸ್ಲಾಮನ್ನು ಮೆಟ್ಟಿ ನಿಲ್ಲಲಿಕ್ಕಾಗಿ ಅವರು ಸರ್ವಪ್ರಯತ್ನಗಳನ್ನು ನಡೆಸಿದ್ದರಲ್ಲಿ ಅಚ್ಚರಿಯಿಲ್ಲ. ಆದರೆ ಒಬ್ಬನೇ ಒಬ್ಬ ಮುಸ್ಲಿಮನಾದರೂ ಅವರ ಜಾಲಕ್ಕೆ ಸಿಲುಕಲಿಲ್ಲ. ವೈರಿಗಳ ಮರ್ದಕ ಮುಷ್ಟಿ ಬಿಗಿಯಾದಾಗ ಪ್ರವಾದಿ(ಸ) ಮತ್ತು ಅವರ ಅನುಚರರು ಮಕ್ಕಾ ತೊರೆಯಲು ನಿರ್ಧರಿಸಿದರು.

ಅವರು ಮದೀನಾದಲ್ಲಿ ವೈರಿಗಳ ಆಕ್ರಮಣದ ನಿರೀಕ್ಷೆಯಿಂದಲೇ ಕಾಲ ಕಳೆದರು. ಒಮ್ಮೆ ಮಕ್ಕಾದವರು ಯುದ್ಧಕ್ಕೆ ಹೊರಟಿರುವರೆಂಬ ಸುದ್ದಿ ಪ್ರವಾದಿವರ್ಯರಿಗೆ(ಸ) ತಲಪಿತು. ತಕ್ಷಣವೇ ಪ್ರವಾದಿವರ್ಯರು(ಸ) 70 ಮಂದಿಯ ಗುಪ್ತಚರ ತಂಡವೊಂದನ್ನು ಮದೀನಾಕ್ಕೆ ಕಳುಹಿಸಿದರು. ಪರಾಕ್ರಮಶಾಲಿಯಾದ ಹ.ಸಅದ್‌ರೂ(ರ) ಅದರಲ್ಲಿದ್ದರು. ವೈರಿಗಳ ಚಲನವಲನಗಳನ್ನು ತಿಳಿಯಲಿಕ್ಕಾಗಿ ಗುಪ್ತವಾಗಿ ಹೊರಟ ಆ ಬೇಹುಗಾರ ತಂಡವು ದೌರ್ಭಾಗ್ಯವಶಾತ್, ವೈರಿಗಳ ಕಣ್ಣಿಗೆ ಬಿತ್ತು. ಅವರ ನಡುವೆ ಘೋರ ಕಾದಾಟ ನಡೆಯಿತು. ಹ.ಸಅದ್‌ರು(ರ) ಶಸ್ತ್ರ ಪ್ರಯೋಗದಲ್ಲಿ ನಿಪುಣರಾಗಿದ್ದರು. ಅವರ ಅಸ್ತ್ರ ಧಾಳಿಯನ್ನು ಹೆಚ್ಚು ಸಮಯ ಪ್ರತಿಭಟಿಸಲು ವೈರಿ ತಂಡಕ್ಕೆ ಸಾಧ್ಯವಾಗಲಿಲ್ಲ. ಅವರು ಕಾದಾಟವನ್ನು ಕೂಡಲೇ ನಿಲ್ಲಿಸಿ ಹಿಂದೆ ಸರಿದರು. ಹ.ಸಅದ್‌ರ(ರ) ಹೋರಾಟ ಮತ್ತು ಅಸ್ತ್ರ ನೈಪುಣ್ಯವು ಮುಸ್ಲಿಮರನ್ನು ಆ ದುರಂತದಿಂದ ಪಾರುಗೊಳಿಸುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಿತ್ತು.

ಸತ್ಯ ಮತ್ತು ಅಸತ್ಯಗಳ ಪ್ರಪ್ರಥಮ ಬಹಿರಂಗ ಸಂಘರ್ಷವು ಬದ್ರ್‌ನಲ್ಲಿ ನಡೆದಿತ್ತು. ಅದು ಇಸ್ಲಾಮೀ ಇತಿಹಾಸದ ಅದ್ಭುತ ಅಧ್ಯಾಯವಾಗಿದೆ. ಯುದ್ಧಕ್ಕೆ ಬೇಕಾದ ಜನಬಲ, ಆಯುಧ ಸಾಮಗ್ರಿಗಳು ಮುಸ್ಲಿಮರ ಬಳಿಯಿರಲಿಲ್ಲ. ಆದರೆ ಇಸ್ಲಾಮಿನ ನಿಸ್ವಾರ್ಥ ಪ್ರೇಮಿಗಳಾಗಿದ್ದ ಆ ಜನರಿಗೆ ಅದೊಂದು ಸಮಸ್ಯೆಯಾಗಿರಲಿಲ್ಲ. ಅಲ್ಲಾಹನ ಅಚಂಚಲ ವಿಶ್ವಾಸವೇ ಅವರ ಆಯುಧವಾಗಿತ್ತು. ಅದು ಭೌತಿಕ ಅಸ್ತ್ರಗಳಿಗಿಂತ ಹರಿತವಾಗಿತ್ತೆಂದು ಅನಂತರದ ಇತಿಹಾಸವು ಲೋಕಕ್ಕೆ ತೋರಿಸಿಕೊಟ್ಟಿದೆ. ಆಯುಧ ಕೊರತೆಯಿಂದಾಗಿ ಹಿಂಜರಿಯದೆ, ಆತ್ಮಾರ್ಪಣೆಯ

ಅದಮ್ಯ ಆವೇಶದಿಂದ ಅವರು ಬದ್ರ್‌ನತ್ತ ಧಾವಿಸಿದರು. ಆ ಹೋರಾಟದಲ್ಲಿ ಮುಸ್ಲಿಮರು ವೈರಿಗಳನ್ನು ಸಂಪೂರ್ಣವಾಗಿ ಸೋಲಿಸಿದರು. ಕೊನೆಗೆ ಮುಶ್ರಿಕರು ರಣರಂಗದಿಂದ ಓಡಿ ಹೋದರು. ಈ ಯುದ್ಧದಲ್ಲಿ ಹ.ಸಅದ್‌ರು(ರ) ಪ್ರಮುಖ ಪಾತ್ರ ವಹಿಸಿದ್ದಾರೆ. ಅವರ ಅದ್ಭುತ ರಣಶೌರ್ಯವನ್ನು ನೋಡಿ ವೈರಿಗಳು ಆಶ್ಚರ್ಯಚಕಿತರಾಗಿದ್ದರು.

ಬದ್ರ್‌ನ ಹೀನಾಯ ಸೋಲಿನಿಂದ ವೈರಿಗಳ ಗಾಯಕ್ಕೆ ಉಪ್ಪು ಹಚ್ಚಿದಂತಾಯಿತು. ಅವರು ಅಪಮಾನ ಭಾರದಿಂದ ತಲೆಯೆತ್ತದಂತಾಯಿತು. ಪ್ರತೀಕಾರಾಗ್ನಿಯು ಉರಿದೆದ್ದಿತು. ಮುಸ್ಲಿಮರ ಮೇಲೆ ಸೇಡು ತೀರಿಸಲಿಕ್ಕಾಗಿ ಭಾರೀ ಸೇನಾ ಸನ್ನಾಹ ನಡೆಸಿದರು. ಮುಸ್ಲಿಮರನ್ನು ಹೀನಾಯವಾಗಿ ಸೋಲಿಸಬೇಕೆಂಬ ಅದಮ್ಯ ಆಕಾಂಕ್ಷೆಯಿಂದ ಅವರು ಉಹುದ್‌ಗೆ ಹೊರಟರು.

ಉಹುದ್ ಪರ್ವತದ ಕಣಿವೆಯಲ್ಲಿ ಉಭಯ ಸೇನೆಗಳೂ ಬಿಡಾರ ಹೂಡಿದವು. ಅದು ಹಿಜರೀ ಎರಡನೇ ವರ್ಷ. ಮುಸ್ಲಿಮ್ ಯೋಧರ ಸಂಖ್ಯೆ ಸಾವಿರವನ್ನು ಮೀರಿರಲಿಲ್ಲ. ಅವರಲ್ಲಿ ಆಯುಧವೂ ಬಹಳ ಪರಿಮಿತವಾಗಿತ್ತು. ದೌರ್ಭಾಗ್ಯವೆಂಬಂತೆ, ಅರ್ಧ ದಾರಿಯಲ್ಲಿಯೇ ಮುನಾಫಿಕರ(ಕಪಟ ವಿಶ್ವಾಸಿಗಳ) ನಾಯಕ ಅಬ್ದುಲ್ಲಾ ಬಿನ್ ಉಬೈ ಮತ್ತು ಸಂಗಡಿಗರು ಯುದ್ಧದಲ್ಲಿ ಭಾಗವಹಿಸಲಾರೆವೆಂದು ಹೇಳಿ ಮದೀನಾಕ್ಕೆ ಮರಳಿದರು. ಮುನಾಫಿಕರ ಈ ಮಹಾದ್ರೋಹವು ಮುಸ್ಲಿಮರನ್ನು ದಂಗುಗೊಳಿಸಿತು.

ಪ್ರವಾದಿಯವರು(ಸ) ವೈರಿಗಳ ಆಕಸ್ಮಿಕ ದಾಳಿಯನ್ನು ಎದುರಿಸಲಿಕ್ಕಾಗಿ ಪರ್ವತದ ತುದಿಯಲ್ಲಿ ಕೆಲವು ವೀರಯೋಧರನ್ನು ಕಾವಲು ನಿಲ್ಲಿಸಿದ್ದರು. ಆ ಆಯಕಟ್ಟಿನ ಸ್ಥಳದಿಂದ ಯಾವುದೇ ಸನ್ನಿವೇಶದಲ್ಲಿಯೂ ಕದಲಬಾರದೆಂದು ಕಟ್ಟಪ್ಪಣೆ ವಿಧಿಸಿದ್ದರು. ಯುದ್ಧದಲ್ಲಿ ಮುಸ್ಲಿಮರು ಭಾರೀ ವಿಜಯ ಗಳಿಸುತ್ತಿರುವುದನ್ನು ನೋಡಿದ ಕೆಲವು ಕಾವಲು ಯೋಧರು, ತಾವು ಇನ್ನು ಇಲ್ಲಿ ನಿಲ್ಲಬೇಕಾದ ಅಗತ್ಯವಿಲ್ಲವೆಂದು ಭಾವಿಸಿ ಅಲ್ಲಿಂದ ಕೆಳಗಿಳಿದರು. ಅಷ್ಟರಲ್ಲಿ ಈ ಅವಕಾಶವನ್ನು ವೈರಿಗಳು ಬಳಸಿಕೊಂಡು, ಆ ದಾರಿಯಾಗಿ ಆಕ್ರಮಣ ಮಾಡಿದರು. ಈ ಆಕಸ್ಮಿಕ ದಾಳಿಯಿಂದ ಮುಸ್ಲಿಮ್ ಸೇನೆಯು ಕಕ್ಕಾ ಬಿಕ್ಕಿಯಾಯಿತು. ಅನೇಕ ಮಂದಿ ಅಧೀರರಾದರು. ಕೆಲವರು ಕಣದಿಂದ ಪಲಾಯನ ಮಾಡಿದರು.

ಈ ವಿಪರೀತ ಸನ್ನಿವೇಶದಲ್ಲಿ ಹ.ಸಅದ್‌ರು(ರ) ಅಚಲ ಬಂಡೆಯಂತೆ ಯುದ್ಧ ರಂಗದಲ್ಲಿ ಸ್ಥೈರ್ಯದಿಂದ ಕಾದಾಡಿದರು. ಪ್ರವಾದಿವರ್ಯರ(ಸ) ಬಳಿಯಲ್ಲಿಯೇ ನಿಂತು ವೈರಿಗಳು ಅವರ ಮೇಲೆ ಪ್ರಯೋಗಿಸುವ ಎಲ್ಲಾ

ಅಸ್ತ್ರಗಳನ್ನೂ ತಡೆದರು. ತನ್ನ ಬತ್ತಳಿಕೆಯಲ್ಲಿದ್ದ ಎಲ್ಲ ಅಸ್ತ್ರಗಳನ್ನೂ ವೈರಿಗಳ ಕಡೆಗೆಸೆದರು. ಆ ವೀರಾವೇಶದ ಮುಂದೆ ವೈರಿಗಳ ತಂತ್ರ ಫಲಿಸಲಿಲ್ಲ. ಈ ಯುದ್ಧದಲ್ಲಿ ಹ.ಸಅದ್‌ರ(ರ) ಪಾತ್ರವು ಅವರ್ಣನೀಯವಾಗಿದೆ.

ಹೀಗೆ ಪ್ರವಾದಿಯವರ(ಸ) ಕಾಲದಲ್ಲಿಯೇ ಹ.ಸಅದ್‌ರು(ರ) ಓರ್ವ ವೀರ ಸೇನಾನಿ ಮತ್ತು ಪರಾಕ್ರಮಿಯೆಂದು ಪ್ರಖ್ಯಾತರಾಗಿದ್ದರು.

## ವಿಶಿಷ್ಟ ಗುಣಗಳು

ಪ್ರವಾದಿ ಪ್ರೇಮ, ಭಯಭಕ್ತಿ ಮತ್ತು ಇಸ್ಲಾಮೀ ಸ್ಫೂರ್ತಿಯು ಹ. ಸಅದ್‌ರ(ರ) ಗುಣ ವೈಶಿಷ್ಟ್ಯವಾಗಿತ್ತು. ಪ್ರವಾದಿವರ್ಯರ(ಸ) ನಿಧನದ ಬಗ್ಗೆ ಜ್ಞಾಪಿಸಿದಾಗಲೆಲ್ಲಾ ಅವರು ಕಣ್ಣೀರು ಸುರಿಸುತ್ತಿದ್ದರು. ಪ್ರವಾದಿವರ್ಯರ(ಸ) ಅನುಪಸ್ಥಿತ ಜೀವನವು ಅವರಿಗೆ ಅನೂಹ್ಯ ಮತ್ತು ಅಸಹ್ಯವಾಗಿ ತೋರುತ್ತಿತ್ತು. ಪ್ರವಾದಿಯವರ(ಸ) ಜೀವನ ಕಾಲದಲ್ಲಿ ಮಸೀದಿಯಲ್ಲಿಯೂ ಯುದ್ಧ ರಂಗ ದಲ್ಲಿಯೂ ಸದಾ ಅವರ ಹಿಂದೆಯೇ ಇರುತ್ತಿದ್ದರು. ಹಲವು ಗಂಡಾಂತರಕಾರೀ ಸಂದರ್ಭಗಳಲ್ಲಿ ಅವರು ಪ್ರವಾದಿಯವರ(ಸ) ಮಾದರಿಗಳನ್ನು ಅಣು ತೂಕ ತಪ್ಪದೆ ತಮ್ಮ ಜೀವನದಲ್ಲಿ ಮೈಗೂಡಿಸಲು ಪ್ರಯತ್ನಿಸಿದ್ದರು. ಆದ್ದರಿಂದ ಅನೇಕ ಪ್ರಮುಖ ಸಹಾಬಿಗಳು ಅವರನ್ನು ಓರ್ವ ಮಾದರೀ ಪುರುಷರೆಂದೇ ಅಂಗೀಕರಿಸಿದ್ದರು.

ಅವರ ಜೀವನವು ಸಂಪೂರ್ಣ ನಿರಾಡಂಬರಪೂರ್ಣವಾಗಿತ್ತು. ಇರಾನ್‌ನ ಚಕ್ರಾಧಿಪತ್ಯವನ್ನು ನುಚ್ಚುನೂರುಗೊಳಿಸಿ, ನೌಶೇರ್‌ವಾನ್‌ನ ಅರಮನೆಯ ಮೇಲೆ ಇಸ್ಲಾಮೀ ಧ್ವಜವನ್ನು ಹಾರಿಸಿದ ಆ ದಿಗ್ವಿಜಯಶಾಲೀ ವ್ಯಕ್ತಿಯು, ಸ್ವಜೀವನ ಕ್ಕಾಗಿ ಜಾನುವಾರುಗಳನ್ನು ಮೇಯಿಸುತ್ತಿದ್ದರೆಂದರಿತಾಗ ಆ ಮಹಾ ವ್ಯಕ್ತಿತ್ವದ ಜೀವನ ಮಟ್ಟವು ಎಷ್ಟೊಂದು ಸಾಮಾನ್ಯವಾಗಿದ್ದಿತೆಂದು ಮನವರಿಕೆಯಾಗ ಬಹುದು. ಹಿಜರಿ 55ನೆಯ ವರ್ಷದಲ್ಲಿ ಸಅದ್(ರ) ನಿಧನರಾದರು. ಇನ್ನಾಲಿಲ್ಲಾಹಿ.... ಆ ಮಹಾ ಜೀವನವು ಮದೀನಾದಲ್ಲಿ ಕೊನೆಗೊಂಡಿತು.

***

# ಹ. ಝೈದ್ ಬಿನ್ ಹಾರಿಸ್(ರ)

ಹಿಬ್ಬುರ್ರಸೂಲ್ (ಪ್ರವಾದಿಯ ಆಪ್ತ ಸಂಗಾತಿ) ಎಂಬ ಹೆಗ್ಗಳಿಕೆಗೆ ಪಾತ್ರರಾದ ಹ. ಝೈದ್ ಬಿನ್ ಹಾರಿಸರು(ರ) ಪ್ರವಾದಿಯವರ(ಸ) ಪ್ರಮುಖ ಸಹಾಬಿಗಳಲ್ಲೋರ್ವ ರಾಗಿದ್ದಾರೆ. ಅವರಿಗೆ ಅಬೂ ಉಸಾಮಃ(ರ) ಎಂಬ ಉಪನಾಮವೂ ಇತ್ತು. ಯಮನಿನ ಸುಪ್ರಸಿದ್ಧ 'ಬನೀ ಕುಳಾಅ್' ಗೋತ್ರದಲ್ಲಿ ಅವರು ಹುಟ್ಟಿದರು. ತಂದೆಯ ಹೆಸರು ಹಾರಿಸ್ ಮತ್ತು ತಾಯಿಯ ಹೆಸರು ಸಅದಿಯ್ಯ.

## ದರೋಡೆಕೋರ

ಝೈದ್‌ರ(ರ) ಬಾಲ್ಯ ಕಾಲದಲ್ಲಿ ಒಂದು ಪ್ರಮುಖ ಘಟನೆ ನಡೆಯಿತು. ಒಮ್ಮೆ ಅವರು ತನ್ನ ತಾಯಿಯೊಂದಿಗೆ ಪಿತೃಗೃಹಕ್ಕೆ ತೆರಳುತ್ತಿದ್ದರು. ಹಾದಿಯಲ್ಲಿ ಅವರು ದರೋಡೆಕೋರರ ಕೈಗೆ ಸಿಲುಕಿದರು. ಅಂದು ಕೊಲೆ ಕೊಳ್ಳೆಗಳು ತೀರಾ ಸಾಮಾನ್ಯವಾಗಿದ್ದುವು. ದರೋಡೆಕೋರರು ಝೈದ್‌ರನ್ನು(ರ) ಅಪಹರಿಸಿ, ಉಕಾಝ್ ಸಂತೆಯಲ್ಲಿ 400 ದಿರ್ಹಮ್‌ಗಳಿಗೆ ಮಾರಿದರು. ಪ್ರವಾದಿವರ್ಯರ(ಸ) ಪ್ರಾಣ ಸ್ನೇಹಿತ 'ಹಕೀಮ್ ಬಿನ್ ಹಿಝಾಮ್'ರು ಝೈದ್‌ರನ್ನು(ರ) ಖರೀದಿಸಿದ್ದರು. ಕೆಲವು ದಿನಗಳ ಬಳಿಕ ಅವರು ಝೈದ್‌ರನ್ನು(ರ) ತನ್ನ ಸೋದರತ್ತೆಯಾದ ಖದೀಜಾರಿಗೆ(ರ) ದಾನವಾಗಿ ನೀಡಿದರು. ಆ ಬಳಿಕ ಖದೀಜರು(ರ) ಪ್ರವಾದಿಯವರ(ಸ) ಸೇವೆಗಾಗಿ ಝೈದ್‌ರನ್ನು(ರ) ನೀಡಿದರು. ಝೈದ್‌ರು(ರ) ಪ್ರವಾದಿಯವರ(ಸ) ಸಂರಕ್ಷಣೆಯಲ್ಲಿಯೇ ಬೆಳೆದರು.

## ತಂದೆಯ ವ್ಯಥೆ

ಝೈದ್‌ರ(ರ) ಅಗಲಿಕೆಯಿಂದ ತಂದೆಯು ಚಿಂತಾಕ್ರಾಂತರಾಗಿದ್ದರು. ಮುದ್ದು ಮಗನ ಸ್ಮರಣೆಯಿಂದ ಸದಾ ಕಣ್ಣೀರಿಳಿಸುತ್ತಿದ್ದರು. ಒಮ್ಮೆ ಗದ್ಗದ ಕಂಠದಿಂದ ಹೀಗೆ ಹಾಡಿದರು: ಅರ್ಥ: "ಝೈದ್‌ನ ಅಗಲಿಕೆಯಿಂದ ನಾನು ಕಣ್ಣೀರು ಸುರಿಸುತ್ತಿದ್ದೇನೆ. ಆತನು ಬದುಕಿರುವನೋ ಅಳಿದಿರುವನೋ ನನಗೆ ತಿಳಿಯದು. ಸೂರ್ಯೋದಯ ಮತ್ತು ರಾತ್ರಿಯ ಆಗಮನವು ನನ್ನ ಮನದಲ್ಲಿ ಆತನ ಸ್ಮರಣೆಯನ್ನು ಜಾಗೃತಗೊಳಿಸುತ್ತದೆ."

ಸೌಭಾಗ್ಯವಶಾತ್, ತನ್ಮಧ್ಯೆ 'ಬನೀ ಕಲ್ಬ್'ನ ಕೆಲವು ಮಂದಿ ಹಜ್ಜ್‌ಗಾಗಿ ಮಕ್ಕಾಕ್ಕೆ ಬಂದರು. ಅವರು ಅನಿರೀಕ್ಷಿತವಾಗಿ ಝೈದ್‌ರನ್ನು(ರ) ನೋಡಿದರು. ಝೈದ್‌ರು(ರ) ತಮ್ಮ ಕ್ಷೇಮ ಸಮಾಚಾರವನ್ನು ಕುಟುಂಬದವರಿಗೆ ತಿಳಿಸುವಂತೆ ವಿನಂತಿಸಿದರು. ಹಜ್ಜ್ ಮುಗಿಸಿ ಸ್ವದೇಶಕ್ಕೆ ಮರಳಿದ ಬಳಿಕ ಅವರು ಝೈದ್‌ರ(ರ) ತಂದೆಗೆ ಸುದ್ದಿ ಮುಟ್ಟಿಸಿದರು. ಅವರು ಸಂತೋಷದಿಂದ ಕುಣಿದಾಡಿದರು. ತಕ್ಷಣವೇ ಹಾರಿಸರು ತಮ್ಮ ಸಹೋದರ ಸರ್ಹಬೀಲ್‌ರೊಂದಿಗೆ ಮಕ್ಕಾಕ್ಕೆ ಬಂದರು. ಅವರು ಪ್ರವಾದಿವರ್ಯರೊಡನೆ(ಸ) ಹೀಗೆ ವಿನಂತಿಸಿದರು, "ಅಬ್ದುಲ್ಲಾರ ಪುತ್ರರೇ! ನೀವು ದುರ್ಬಲರ ಆಶಾ ಕೇಂದ್ರ ಮತ್ತು ಸಂತ್ರಸ್ತರ ಆಶ್ರಯದಾತ ವಾಗಿದ್ದೀರೆಂದು ನಮಗೆ ತಿಳಿದಿದೆ. ಆದ್ದರಿಂದ ನನ್ನ ಪುತ್ರ ಝೈದ್‌ನನ್ನು(ರ) ಸ್ವತಂತ್ರಗೊಳಿಸಿ ನನ್ನೊಡನೆ ಕಳುಹಿಸಿಕೊಡಿರಿ. ಅದಕ್ಕಾಗಿ ಯಾವ ಪ್ರತಿಫಲ ನೀಡಲೂ ನಾವು ಸಿದ್ಧರಿದ್ದೇವೆ." ಆಗ ಪ್ರವಾದಿ(ಸ) ಹೀಗೆಂದರು: "ಝೈದ್ ನಿಮ್ಮೊಡನೆ ಹಿಂತಿರುಗ ಬಯಸಿದರೆ ಪ್ರತಿಫಲ ಪಡೆಯದೆಯೇ ನಾನು ಅವನನ್ನು ಸ್ವತಂತ್ರಗೊಳಿಸುತ್ತೇನೆ." ಪ್ರವಾದಿಯವರ(ಸ) ಉತ್ತರದಿಂದ ಅವರಿಗೆ ಸಮಾಧಾನವಾಯಿತು. ಪ್ರವಾದಿವರ್ಯರು(ಸ) ಝೈದ್‌ರನ್ನು ಕರೆಸಿ ಅವರ ಅಭಿಪ್ರಾಯ ಕೇಳಿದರು. "ನಾನು ನಿಮ್ಮನ್ನು ಬಿಟ್ಟು ಜೀವಿಸಲಿಚ್ಛಿಸುವುದಿಲ್ಲವೆಂದು ಝೈದ್ ಹೇಳಿದರು. ತಂದೆಯು ನಿರಾಶೆಯಿಂದ ಮರಳಬೇಕಾಯಿತು. ಅಂದಿನಿಂದ ಪ್ರವಾದಿಯವರು(ಸ) ಝೈದ್‌ರನ್ನು ತನ್ನ ದತ್ತುಪುತ್ರನಾಗಿ ಅಂಗೀಕರಿಸಿದರು.

## ಗುಲಾಮರಲ್ಲಿ ಪ್ರಥಮ

ಗುಲಾಮರಲ್ಲಿ ಇಸ್ಲಾಮ್ ಸ್ವೀಕರಿಸಿದವರ ಪೈಕಿ ಹ. ಝೈದ್(ರ) ಮೊದಲಿಗರು. ಮುಸ್ಲಿಮರು ವೈರಿಗಳ ಹಿಂಸೆಗಳಿಂದ ರೋಸಿ ಹೋಗಿದ್ದರು. ಝೈದ್‌ರು(ರ) ಪ್ರತಿಕೂಲ ಪರಿಸ್ಥಿತಿಗಳನ್ನು ಲೆಕ್ಕಿಸದೆ ಇಸ್ಲಾಮಿಗಾಗಿ ಪ್ರಾಣಾರ್ಪಣೆಗೂ ಸಿದ್ಧರಾಗಿದ್ದರು.

## ದಾಂಪತ್ಯ ಜೀವನ

ಪ್ರವಾದಿ(ಸ) ಮತ್ತು ಸಹಾಬಿವರ್ಯರು ಮದೀನಾಕ್ಕೆ ವಲಸೆ ಹೋದ ಕೂಡಲೇ ಝೈದ್‌ರು(ರ) ವಿವಾಹಿತರಾದರು. ಕುಲೀನೆ ಹಾಗೂ ಸುಶೀಲೆಯಾಗಿದ್ದ ಝೈನಬ್‌ರು(ರ) ಅವರ ಪ್ರಿಯತಮೆಯಾಗಿದ್ದರು. ಅವರ ಈ ಮಾದರೀ ಯೋಗ್ಯ ವಿವಾಹವು ಇಸ್ಲಾಮಿನಲ್ಲಿ ಕುಲ ಮಹಿಮೆಯು ಗಣ್ಯವಲ್ಲ, ದೇವಭಕ್ತಿಯೇ ಶ್ರೇಷ್ಠವೆಂಬುದನ್ನು ಬಹಿರಂಗಪಡಿಸಿತು.

ಆ ದಾಂಪತ್ಯ ಜೀವನವು ಕೇವಲ ಒಂದು ವರ್ಷವಷ್ಟೇ ಉಳಿಯಿತು. ದಿನಗಳುರುಳಿದಂತೆ ದಂಪತಿಗಳ ಮಧ್ಯೆ ವಿರಸ ಹೆಚ್ಚಿತು. ಕೊನೆಗೆ ಝೈದ್‌ರು(ರ) ಝೈನಬ್‌ರ(ರ) ವಿವಾಹ ಸಂಬಂಧವನ್ನು ವಿಚ್ಛೇದಿಸಿದರು.

## ತಪ್ಪು ತಿಳುವಳಿಕೆಯ ನಿವಾರಣೆ

ವಿವಾಹ ವಿಚ್ಛೇದನದ ಬಳಿಕ ಝೈನಬ್‌ರ ಜೀವನವು ಏಕಾಂತ ಮತ್ತು ಶೋಕತಪ್ತವಾಗಿತ್ತು. ಅವರ ಜೀವನದಲ್ಲಿ ಕರಾಳತೆ ಕವಿಯಿತು. ಅಂತಹ ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ಝೈನಬ್‌ರನ್ನು(ರ) ಸ್ವಪತ್ನಿಯಾಗಿ ಸ್ವೀಕರಿಸುವ ನಿರ್ಧಾರಕೈಗೊಂಡರು. ಇದರಿಂದ ಝೈನಬ್‌ರಿಗೆ(ರ) ಅತಿ ಸಂತೋಷ ವಾಯಿತೆಂದು ಬೇರೆ ಹೇಳಬೇಕಾಗಿಲ್ಲ. ಪ್ರವಾದಿವರ್ಯರ(ಸ) ಈ ನಿರ್ಧಾರಕ್ಕೆ ಎರಡು ಕಾರಣಗಳಿದ್ದವು. ಒಂದನೆಯದಾಗಿ ಪತಿಯ ಅಗಲಿಕೆಯಿಂದ ಝೈನಬ್‌ರಿಗಾಗಿರುವ(ರ) ಶೋಕವನ್ನು ತೊಲಗಿಸುವುದು. ಎರಡನೆಯದಾಗಿ ದತ್ತುಪುತ್ರರ ವಿಚ್ಛೇದಿತ ಪತ್ನಿಯರನ್ನು ಮರು ವಿವಾಹವಾಗಬಾರದೆಂಬ ತಪ್ಪು ತಿಳುವಳಿಕೆ ಅಂದು ಅರಬರಲ್ಲಿದ್ದಿತು. ಆ ಅರ್ಥಹೀನ ಸಂಪ್ರದಾಯವನ್ನು ಪ್ರಸ್ತುತ ವಿವಾಹ ಸಂಬಂಧವು ಕಡಿದು ಹಾಕಿತು.

ಈ ಘಟನೆಯು ಮುನಾಫಿಕರ ಪ್ರಚಾರಗಳಿಗೆ ಉತ್ತಮ ಗ್ರಾಸವಾಯಿತು. ಪ್ರವಾದಿಯವರ(ಸ) ಕುರಿತು ಅವರು ಅನೇಕ ಅಪವಾದಗಳನ್ನು ಹಬ್ಬಿಸಿದರು. ಆದರೆ ಈ ಕುಪ್ರಚಾರಗಳಿಂದ ಸತ್ಯವಿಶ್ವಾಸಿಗಳಾಗಿದ್ದ ಮುಸ್ಲಿಮರನ್ನು ಇಸ್ಲಾಮ್‌ನಿಂದ ಹಿಂದೆ ಸರಿಸಲಾಗಲಿಲ್ಲ. ತನ್ನಿಮಿತ್ತ ಮುನಾಫಿಕರ ಪ್ರಮುಖ ಉದ್ದೇಶವು ಭಗ್ನವಾಯಿತು.

## ರಣಾಂಗಣದಲ್ಲಿ

ಇಸ್ಲಾಮ್ ಮತ್ತು ಕುಫ್ರ್‌ಗಳ ಮಧ್ಯೆ ನಡೆದ ಎಲ್ಲ ಸಂಘರ್ಷಗಳಲ್ಲಿಯೂ ಝೈದ್‌ರು(ರ) ಅದ್ವಿತೀಯ ಪಾತ್ರ ವಹಿಸಿದ್ದಾರೆ. ಅವರ ಯುದ್ಧ ಸಾಮರ್ಥ್ಯ ಮತ್ತು ಧೈರ್ಯ ಸಾಹಸಗಳು ಅದ್ಭುತವಾಗಿದ್ದುವು. ಅಸ್ತ್ರ ಪ್ರಯೋಗದಲ್ಲಿ ಝೈದ್‌ರನ್ನು ಮೀರಿಸುವ ಯಾವ ಸಹಾಬಿಯೂ ಇರಲಿಲ್ಲ.

ಪ್ರವಾದಿಯವರ(ಸ) ಕಾಲದಲ್ಲಿ ನಡೆದ ಹಲವು ಯುದ್ಧಗಳಲ್ಲಿ ಝೈದ್‌ರು(ರ) ನಾಯಕತ್ವ ವಹಿಸಿದ್ದಾರೆ. ಓರ್ವ ಸಮರ್ಥ ಸೇನಾ ನಾಯಕನೆಂಬ ನೆಲೆಯಲ್ಲಿ ಅವರ ಯುದ್ಧ ಚಾತುರ್ಯ ಮತ್ತು ಶೌರ್ಯವನ್ನು ಕೊಂಡಾಡುವ ಅನೇಕ ಹದೀಸ್‌ಗಳು ಉಲ್ಲೇಖಿಸಲ್ಪಟ್ಟಿವೆ. ಹ.ಆಯಿಶಾ(ರ) ಹೇಳಿರುವುದನ್ನು ನೋಡಿರಿ: "ಪ್ರವಾದಿವರ್ಯರು(ಸ) ಝೈದ್‌ರನ್ನು ಯಾವುದಾದರೂ ಯುದ್ಧಕ್ಕೆ ಕಳುಹಿಸುವಾಗ ನಾಯಕತ್ವವನ್ನು ಅವರಿಗೇ ಒಪ್ಪಿಸುತ್ತಿದ್ದರು." ಗುಲಾಮರಾಗಿದ್ದ ಝೈದ್‌ರಿಗೆ ನೀಡಿದ ಈ ಅತ್ಯುತ್ತಮ ಪದವಿಯು ಇಸ್ಲಾಮಿನ ಸಮಾನತೆಯ ಉಜ್ವಲ ಉದಾಹರಣೆಯಾಗಿದೆ.

## ಮೂತಾ ಯುದ್ಧ ಮತ್ತು ನಿಧನ

ಹುದೈಬಿಯಾ ಒಪ್ಪಂದದ ಬಳಿಕ ಪ್ರವಾದಿವರ್ಯರಿಗೆ(ಸ) ನಿರ್ಭೀತಿಯಿಂದ ಧರ್ಮ ಪ್ರಚಾರ ಮಾಡುವಂತಹ ವಾತಾವರಣ ಒದಗಿತ್ತು. ಇಸ್ಲಾಮಿನ ಸಂದೇಶ ವನ್ನು ಅರೇಬಿಯಾದಿಂದ ಹೊರಗೆ ಪ್ರಸಾರ ಮಾಡಲಿಕ್ಕಾಗಿ ಪ್ರವಾದಿವರ್ಯರು(ಸ) ಈ ಸಂದರ್ಭವನ್ನು ಚೆನ್ನಾಗಿ ಬಳಸಿಕೊಂಡರು. ಅವರು ಇಸ್ಲಾಮಿಗೆ ಆಹ್ವಾನಿಸುವ ಪತ್ರಗಳನ್ನು ಅನೇಕ ರಾಜರಿಗೆ ತಮ್ಮ ದೂತರ ಮೂಲಕ ಕಳುಹಿಸಿದರು. ಪ್ರವಾದಿವರ್ಯರ(ಸ) ಆಮಂತ್ರಣದಂತೆ ಕೆಲವು ರಾಜಂದಿರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದರು. ಆದರೆ 'ಬುಸ್ರಾ' ಎಂಬ ರಾಜನಿಗೆ ಪತ್ರ ಒಯ್ದಿದ್ದ 'ಹಾರಿಸ್' ಎಂಬೋರ್ವ ಸಹಾಬಿಯು ಮರಳಿ ಬರುವಾಗ 'ಗಸ್ಸಾನ್' ಗೋತ್ರದ ಓರ್ವ ನೀಚನಿಂದ ವಧಿಸಲ್ಪಟ್ಟರು.

ಈ ದಾರುಣ ವಾರ್ತೆಯಿಂದ ಮುಸ್ಲಿಮರು ರೊಚ್ಚಿಗೆದ್ದರು. ತಮ್ಮ ಸಹೋದರರನ್ನು ವಧಿಸಿದವರ ಮೇಲೆ ಸೇಡು ತೀರಿಸಲಿಕ್ಕಾಗಿ ಮುಸ್ಲಿಮರು ಆವೇಶ ದಿಂದ ಮುಂದೆ ಬಂದರು. ಪ್ರವಾದಿವರ್ಯರು(ಸ) ಝೈದ್‌ರ(ರ) ನಾಯಕತ್ವದಲ್ಲಿ ಮೂರು ಸಾವಿರ ಯೋಧರನ್ನು ಯುದ್ಧಕ್ಕೆ ಕಳುಹಿಸಿದರು. ಈ ಯುದ್ಧದಲ್ಲಿ ಒಂದು ವೇಳೆ ಝೈದ್(ರ) ವಧಿಸಲ್ಪಟ್ಟರೆ ಜಅ್‌ಫರ್(ರ), ಅವರೂ ವಧಿಸಲ್ಪಟ್ಟರೆ ಅಬ್ದುಲ್ಲಾ ಬಿನ್ ರವಾಹ, ಇಸ್ಲಾಮಿ ಧ್ವಜವನ್ನು ವಹಿಸಿ ಹೋರಾಡಬೇಕೆಂದು ಸೇನೆ ಹೊರಡುವಾಗ ಪ್ರವಾದಿ(ಸ) ಆಜ್ಞಾಪಿಸಿದರು.

ಹಿಜರಿ 8ನೇ ವರ್ಷದ ಜುಮಾದಿಲ್ ಅವ್ವಲ್‌ನಲ್ಲಿ ಉಭಯ ಸೇನೆಗಳು 'ಮೂತಾ' ಎಂಬ ಸ್ಥಳದಲ್ಲಿ ಮುಖಾಮುಖಿಯಾದವು. ತರುವಾಯ ಘನಘೋರ ಯುದ್ಧ ನಡೆಯಿತು. ದುರದೃಷ್ಟವಶಾತ್ ಹೋರಾಟವು ನಿರ್ಣಾಯಕ ಹಂತ ತಲುಪುವುದರಲ್ಲಿದ್ದಾಗ ಸೇನಾ ನಾಯಕ ಝೈದ್(ರ) ಹುತಾತ್ಮರಾಗಿ ರಣಾಂಗಣ ದಲ್ಲಿ ಉರುಳಿದರು. ಪ್ರವಾದಿಯವರ(ಸ) ಆದೇಶದಂತೆ ಜಅ್‌ಫರ್(ರ) ಧ್ವಜವನ್ನು ಕೈಯಲ್ಲೆತ್ತಿಕೊಂಡರು. ವೈರಿಗಳು, ನಾನಾ ಕಡೆಗಳಿಂದ ಅವರನ್ನು ಆಕ್ರಮಿಸಿದರು. ಅವರ ಎಡ ಕೈ ಛೇದಿಸಲ್ಪಟ್ಟಿತು. ತಕ್ಷಣವೇ ಬಲ ಕೈಯಲ್ಲಿ ಧ್ವಜವೆತ್ತಿ ಹಿಡಿದು ಹೋರಾಟ ಮುಂದುವರಿಸಿದರು. ಅದೂ ಛೇದಿಸಲ್ಪಟ್ಟಾಗ 'ಜಅ್‌ಫರ್' ಕಂಕುಳಲ್ಲಿ ಧ್ವಜವನ್ನು ಒತ್ತಿ ಹಿಡಿದು ವೈರಿಗಳನ್ನು ಎದುರಿಸಿದರು. ಆ ಸನ್ನಿವೇಶದಲ್ಲಿ ಅವರು ಭಾವೋದ್ವೇಗದಿಂದ ಈ ರೀತಿ ಹಾಡಿದರು.

"ಹಾ ಸ್ವರ್ಗವೇ! ಸ್ವಾಗತ! ಅದು ಸನ್ನಿಹಿತವಾಗಿದೆ. ಅದೆಷ್ಟು ಪವಿತ್ರ!
ಅದರ ಪಾನೀಯ ಎಷ್ಟೊಂದು ತಂಪು!"

ಅವರು ಹುತಾತ್ಮರಾದರು. ತರುವಾಯ ವೀರಾಗ್ರೇಸ ಅಬ್ದುಲ್ಲಾ ಬಿನ್ ರವಾಹರ ನಾಯಕತ್ವದಲ್ಲಿ ಮುಸ್ಲಿಮರು ವೀರಾವೇಶದಿಂದ ಹೋರಾಡಿದರು. ಮಿಂಚಿನಂತೆ ಖಡ್ಗ ಝಳಪಿಸುತ್ತಾ ಮುನ್ನುಗ್ಗುತ್ತಿದ್ದ ವೇಳೆ ಕೈಯ ಕಿರು ಬೆರಳೊಂದು ಕತ್ತರಿಸಿ ಬಿದ್ದಾಗ ಅದನ್ನು ನೋಡಿ ಅವರು ಹೀಗೆ ಹಾಡಿದರು:

"ನೀನು ಅಲ್ಲಾಹನ ಮಾರ್ಗದಲ್ಲಿ ರಕ್ತ ಸಿಕ್ತವಾಗಿರುವ ಒಂದು ಬೆರಳಾಗಿದ್ದೀಯಾ.

ನನ್ನ ಆತ್ಮವೇ! ಈ ಧರ್ಮ ಹೋರಾಟದಲ್ಲಿ ನೀನು ವಧಿಸಲ್ಪಡದಿದ್ದರೆ ನಿನಗೆ ಮರಣದಿಂದ ಮುಕ್ತಿಯಿಲ್ಲ. ಇದೋ ಈಗ ನೀನು ಮರಣದ ಬಾಯಿ ಯನ್ನು ಪ್ರವೇಶಿಸಿರುವೆ."

"ನೀನು ಆಶಿಸಿದ್ದನ್ನು ಪಡೆದೆ, ಅವರ ಮಾರ್ಗವನ್ನೇ ಹಿಂಬಾಲಿಸಿದೆ. ನೀನು ಸನ್ಮಾರ್ಗ ಸಿದ್ಧಿಸಿದೆ."

ಝೈದ್(ರ) ಮತ್ತು ಸಂಗಡಿಗರ ಮರಣ ವಾರ್ತೆಯನ್ನು ಆಲಿಸಿದ ಪ್ರವಾದಿ ಯವರ(ಸ) ಕಣ್ಣಾಲಿಗಳಿಂದ ಅಶ್ರು ಬಿಂದುಗಳು ಉರುಳಿದುವು.

ತರುವಾಯ ಪ್ರವಾದಿವರ್ಯರು(ಸ) ಭಕ್ತಿಪೂರ್ವಕವಾಗಿ ಹೀಗೆ ಪ್ರಾರ್ಥಿಸಿದರು: "ಕರುಣಾಳುವಾದ ಅಲ್ಲಾಹನೇ! ಈ ಹುತಾತ್ಮರ ಮೇಲೆ ನಿನ್ನ ಅನುಗ್ರಹವನ್ನು ಸುರಿಸು."

***